ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 07
ರೂ. 2.00

ಐಕ್ಯರಂಗ

12 ಫೆಬ್ರವರಿ 1995



ವಿದ್ಯುತ್ ಬರ ಹಾಗೂ ವಿದ್ಯುತ್ ನೀತಿ: ಬೆಳಕಿನಿಂದ ಕತ್ತಲೆಯೆಡೆಗೆ ಪಯಣ

ಇದು ಕರ್ನಾಟಕ ಸರಕಾರದ ವಿದ್ಯುತ್ ನೀತಿಯ ಬಗ್ಗೆ ಸಿಪಿಐ(ಎಂ) ರಾಜ್ಯ ಸಮಿತಿ ವ್ಯಕ್ತಪಡಿಸಿರುವ ಪ್ರತಿಕ್ರಿಯೆ. ಜನವರಿ 24 ರಿಂದ 26ರವರಗೆ ನಡೆದ ರಾಜ್ಯ ಸಮಿತಿಯ ಸಭೆ ರಾಜ್ಯ ವಿದ್ಯುತ್ ನೀತಿಯ ಬಗ್ಗೆ ಕೈಗೊಂಡಿರುವ ನಿರ್ಣಯ ವಿದ್ಯುತ್ ಉತ್ಪಾದನೆಗೆ ತುರ್ತು ಕ್ರಮ ಹಾಗೂ ಸಮಗ್ರ ಯೋಜನೆಗಳನ್ನು ಕೈಗೊಳ್ಳಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸಿದೆ. ಹಿಂದಿನ ಕಾಂಗ್ರೆ ಸರಕಾರದಂತೆ ಜನತಾದಳ ಸರಕಾರವೂ ವಿದೇಶೀ ಕಂಪನಿಗಳ ಆಹ್ವಾನಕ್ಕೆ ಮುಂದಾಗಿರುವುದಲ್ಲದೆ, ಆಕಾಂಗ್ರೆ ಸರಕಾರದಂತೆಯೇ ಈ ವಿದ್ಯುತ್ ಘಟಕ ಸ್ಥಾಪನೆಯ ಒಪ್ಪಂದದ ವಿವರಗಳನ್ನು ಜನಸಾಮಾನ್ಯರಿಂದ ಮುಚ್ಚಿಟ್ಟಿದೆ ಎಂದು ಖೇದ ವ್ಯಕ್ತಪಡಿಸಿದೆ. ಜನಸಾಮಾನ್ಯರ ಜೀವನಕ್ಕೆ ಸಂಬಂಧಿಸಿದ ಈ ಒಪ್ಪಂದದ ಎಲ್ಲಾ ಮುಖ್ಯ ವಿವರಗಳನ್ನು ಬಹಿರಂಗ ಪಡಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಆಗ್ರಹ ಪಡಿಸಿದೆ. ನಮ್ಮ ರಾಜ್ಯದ ವಿದ್ಯುತ್‌ಬಲವನ್ನು ತೊಡೆಯಲು ರಾಜ್ಯದ ಸಂಪನ್ಮೂಲಗಳನ್ನೆಲ್ಲಾ ಕ್ರೋಢಿಕರಿಸಬೇಕು ಹಾಗೂ ಭ್ರಷ್ಟಾಚಾರ ತೊಡೆದು ಸಮರ್ಥ ರೀತಿಯಲ್ಲಿ ವಿದ್ಯುತ್ ಉತ್ಪಾದನೆಗೆ ರಾಜ್ಯ ಸರಕಾರ ತೊಡಗಬೇಕು ಎಂದು ಅದು ಒತ್ತಾಯಿಸಿದೆ.

ಇಂದು ಕರ್ನಾಟಕ ಶೇ.25 ರಿಂದ 29 ರಷ್ಟು ವಿದ್ಯುತ್ ಬರದಿಂದ ಬಳಲುತ್ತಿದೆ ಎಂದು ವಿವಿಧ ವೈಜ್ಞಾನಿಕ ಅಂದಾಜುಗಳು ತಿಳಿಸುತ್ತವೆ. ಈ ವಿದ್ಯುತ್ ಬರದಿಂದ ಕೈಗಾರಿಕಾ ಬೆಳವಣಿಗೆ, ಉತ್ಪಾದನೆ ಉದ್ಯೋಗ ನಿರ್ಮಾಣ, ಕೃಷಿ ಉತ್ಪಾದನೆಗಳ ಮೇಲೆ ತೀವ್ರ ಪರಿಣಾಮವಾಗಿದೆ. ವಿದ್ಯುತ್ ಕಡಿತ, ಕಡಿಮೆ ವೋಲ್ಟೇಜ್ ಸಮಸ್ಯೆಗಳು ಹಳ್ಳಿ ನಗರಗಳೆರಡನ್ನೂ ಕಾಡುತ್ತಿವೆ. ಜನಸಾಮಾನ್ಯರಿಗೆ ಬೇಸರವಾಗುವಂತಹ ಸ್ಥಿತಿ ತಲುಪಿದೆ. ಈ ಸ್ಥಿತಿಯಿಂದ ಹೊರಬರಲು ಎಲ್ಲ ಜನ ವಿಭಾಗಗಳೂ ಕಾತರವಾಗಿವೆ.

ಇಂತಹ ಸಂದರ್ಭದಲ್ಲಿ ಕೇಂದ್ರ ಸರಕಾರ ವಿದ್ಯುತ್ ಉತ್ಪಾದನೆಗೆ ಹೆಚ್ಚು ಬಂಡವಾಳ ಹೂಡಿ ಕುಮ್ಮಕ್ಕು ಕೊಡುವ ಬದಲಾಗಿ ಐಎಂಎಫ್ ನಿರ್ದೇಶನದ ಪ್ರಕಾರ ಹಣ ಹೂಡುವುದನ್ನು ಅತ್ಯಂತ ಕಡಿಮೆ ಮಾಡಿತು. ಹೊಸ ಯೋಜನೆಗಳನ್ನು ಕೈ ಬಿಟ್ಟಿತು. ವಿದೇಶೀ ಬಂಡವಾಳದಾರರಿಗೆ ಆಹ್ವಾನ ನೀಡಿ ಅವರು ಕೇಳಿ ಕೇಳಿದ್ದನ್ನೆಲ್ಲಾ ಒಪ್ಪಿತು. ಅವರು ಯೋಜನೆಗಳ ಖರ್ಚನ್ನು ವಿಪರೀತ ಉತ್ಪ್ರೇಕ್ಷಿಸಿ ಕೊಟ್ಟರೆ ಅದಕ್ಕೂ ಸೈ ಎಂದಿತು. ಆಗ ರಾಜ್ಯವನ್ನು ಆಳುತ್ತಿದ್ದ ಕಾಂಗ್ರೆ ಪಕ್ಷದ ಸರ್ಕಾರವೂ ಹಲವಾರು ಬಹು ರಾಷ್ಟ್ರೀಯ ಕಂಪನಿಗಳನ್ನು ಆಹ್ವಾನಿಸಿ ವಿದ್ಯುತ್ ಉತ್ಪಾದನೆ ಮಾಡಲು ಈ ದಾರಿಯನ್ನೇ ಹಿಡಿಯಿತು. 10 ಕಂಪನಿಗಳನ್ನು ಆಹ್ವಾನಿಸಿ ಅದರಲ್ಲಿ ಮಂಗಳೂರಿನ ಬಳಿಯ ಥರ್ಮಲ್ ವಿದ್ಯುತ್ ಘಟಕ ಸ್ಥಾಪನೆಯನ್ನು ಕೊಜೆಂಟ್ರಿಕ್ಸ್ ಎಂಬ ಕಂಪನಿಗೆ ಒಪ್ಪಿಸುವ ಕೆಲಸ ಮುಂದುವರಿದೆ ಹಂತಕ್ಕೆ ಬಂದಿದೆ. ಇತ್ತೀಚೆಗೆ ಬೆಂಗಳೂರಿಗೆ ಭೇಟಿ ಕೊಟ್ಟ ಅಮೆರಿಕಾದ ವಾಣಿಜ್ಯ ಕಾರ್ಯದರ್ಶಿಯೊಂದಿಗೆ ಬಂದಿದ್ದ ಕೊಜೆಂಟ್ರಿಕ್ಸ್ ಕಂಪನಿಯ ಅಧಿಕಾರಿಗಳೊಡನೆ ಅಂತಿಮ ಹಂತದ ಮಾತುಕತೆಯನ್ನು ನಡೆಸಲಾಗಿದೆ.

ಆದರೆ ಜನತಾದಳ ಸರಕಾರವು ಹಿಂದಿನ ಸರ್ಕಾರದಂತೆಯೇ ಈ ವಿದ್ಯುತ್ ಘಟಕ ಸ್ಥಾಪನೆಯ ಒಪ್ಪಂದದ ವಿವರಗಳನ್ನು ಜನಸಾಮಾನ್ಯರಿಂದ ಮುಚ್ಚಿಟ್ಟಿದೆ.

ಈ ಒಪ್ಪಂದದ ಶರತ್ತುಗಳೂ ಮಹಾರಾಷ್ಟ್ರದ ಈಗ ಕುಪ್ರಸಿದ್ಧವಾಗಿರುವ, ಎಲ್ಲಾ ದೇಶಪ್ರೇಮಿಗಳು ಖಂಡಿಸಿರುವ ಎನ್ರಾನ್ ಒಪ್ಪಂದದಂತೆಯೇ ಇದೆ. ಆ ಒಪ್ಪಂದದಂತೆಯೇ ಕರ್ನಾಟಕದ ಒಪ್ಪಂದವೂ ರಾಷ್ಟ್ರದ ರಾಜ್ಯದ ಹಿತಕ್ಕೆ ಘಾತಕವಾಗಿದೆ ಎಂಬ ಮಾಹಿತಿ ಹಲವೆಡೆ ಪ್ರಕಟವಾಗಿದೆ. ಅಂದರೆ.

1. ನಮ್ಮ ದೇಶದಲ್ಲೆಯೇ ಸಾಲಪಡೆದು ಅದೇ ಹಣದಿಂದ ಇಲ್ಲಿ ವಿದ್ಯುತ್ ಘಟಕ ಸ್ಥಾಪಿಸುವಂತಹ 70:30 ಸಾಲ: ಬಂಡವಾಳದ ಪ್ರಮಾಣ.

2. ಶೇ. 16ರ ಲಾಭವನ್ನು ವಿದೇಶೀ ಕಂಪನಿಗೆ ಗ್ಯಾರಂಟಿಯಾಗಿ ಕೊಡಿಸುವ ಒಪ್ಪಂದ

3. ನಮ್ಮ ದೇಶದಲ್ಲಿ ಈಗ ಆಗುತ್ತಿರುವ ಒಂದು ಮೆ.ವಾ. ವಿದ್ಯುತ್‌ಗೆ 2.5 ಕೋಟಿ ಉತ್ಪಾದನಾ ವೆಚ್ಚಕ್ಕೆ ಬದಲಾಗಿ 4.5-5.0 ಕೋಟಿ ರೂ. ವೆಚ್ಚ. ಉತ್ಪಾದನಾ ವೆಚ್ಚ ನಿಜವಾಗಿ ಆಗುವುದಕ್ಕಿಂತ ಬಹಳ ಹೆಚ್ಚಾಗಿ ಉತ್ಪ್ರೇಕ್ಷಿಸಿ ತೋರಿಸಲು ಅವಕಾಶ. ಇವೆಲ್ಲದರ ಹೊರೆ ಜನಸಾಮಾನ್ಯರಿಗೆ ವರ್ಗಾವಣೆಯಾಗುವುದರಿಂದ ಶೇ. 16 ಎಂದು ತೋರಿಸಿದ ಲಾಭಕ್ಕಿಂತಲೂ ನಿಜವಾದ ಲಾಭದ ದರ ಶೇ. 30ರವರೆಗೆ ಹೇ ಗುವುದು.

4. ಈ ವಿದೇಶೀ ಕಂಪೆನಿಯಿಂದ ಕೊಳ್ಳುವ ವಿದ್ಯುತ್ ದರ ರೂ. 2.40ಗಿಂತ ಹೆಚ್ಚು. ಆ ಕಂಪನಿ ಉತ್ಪಾದನಾ ವೆಚ್ಚ ಹೆಚ್ಚು ತೋರಿಸಿದಂತೆಲ್ಲಾ, ಡಾಲರ್-ರೂಪಾಯಿ ವಿನಿಮಯ ದರ ಹೆಚ್ಚಾದಂತೆಲ್ಲಾ ವಿದ್ಯುತ್ ದರ ಇನ್ನಷ್ಟು ಹೆಚ್ಚಾಗುವುದು.

5. ಸಾಗಾಣಿಕೆ ವೆಚ್ಚ ಮತ್ತು ಶೇ. 20ರ ನಷ್ಟವೂ ಸೇರಿದಂತೆ ಜನಸಾಮಾನ್ಯರಿಗೆ ವಿದ್ಯುತ್ ದರ ರೂ. 4.00ಗಿಂತಲೂ ಹೆಚ್ಚಾಗುವ ಅಪಾಯ.

ಇದು ರಾಜ್ಯದ ರೈತರ, ಜನಸಾಮಾನ್ಯರೆಲ್ಲರ, ಕೈಗಾರಿಕೆಗಳ ಅದರಲ್ಲಿಯೂ ಸಣ್ಣ ಕೈಗಾರಿಕೆಗಳ ಉತ್ಪಾದನೆಗೆ ಘಾತಕವಾಗುತ್ತದೆ. ಲಕ್ಷಾಂತರ ಮನೆಗಳು ವಿದ್ಯುತ್ ಸಂಪರ್ಕ ಕಳೆದುಕೊಂಡು ಕತ್ತಲೆಯಲ್ಲಿ ಮುಳುಗುತ್ತವೆ. ಸಣ್ಣ, ಮಧ್ಯಮ ರೈತರು, ಸಣ್ಣ ಕೈಗಾರಿಕೆಗಳು ಪಾಪರಾಗುವ ಸ್ಥಿತಿಗೆ ದೂಡಲ್ಪಡುತ್ತಾರೆ. ಕೆಲವೇ ದೊಡ್ಡ ರೈತ ಭೂ ಮಾಲಿಕರಿಗೆ ದೊಡ್ಡ ಕೈಗಾರಿಕೆಗಳಿಗೆ ಮಾತ್ರವೇ ಅನುಕೂಲವಾಗುವಂತಹದ್ದಾಗಬಹುದು. ಜೊತೆಗೆ ದೇಶದಿಂದ ಹರಿದು ಹೋಗುವ ಅತಿಯಾದ ಲಾಭ ನಮ್ಮ ದೇಶಕ್ಕೆ ಬರುವ ವಿದೇಶೀ ವಿನಿಮಯಕ್ಕಿಂತ ಹೊರಕ್ಕೆ ಹೋಗುವ ವಿದೇಶೀ ವಿನಿಮಯ ದೇಶಕ್ಕೆ ಘಾತಕವಾಗಬಹುದು. ದೇಶದ ಕೈಗಾರಿಕೆಗಳಿಗೆ ಮುಖ್ಯವಾಗಿ ಬಿಹೆಚ್‌ಇಎಲ್‌ಗೆ ಘಾತಕವಾಗಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ.

ಪುಟ 8 ನೋಡಿ

ಸಿಪಿಐ(ಎಂ)ನ 15ನೇ ಮಹಾಧಿವೇಶನಕ್ಕೆ ಮುನ್ನಡೆಯೋಣ..

ಸಿಪಿಐ(ಎಂ) ಪಕ್ಷದ 15ನೇ ಅಧಿವೇಶನವು 1995 ಏಪ್ರಿಲ್ 3ರಿಂದ 8ರವರೆಗೆ ಪಂಜಾಬಿನ ಚಂಡೀಘಡದಲ್ಲಿ ಜರುಗಲಿರುವುದು. ಇದು ಸುಮಾರು 30ಕ್ಕಿಂತಲೂ ಅಧಿಕ ವಿದೇಶಗಳ ಕಮ್ಯುನಿಸ್ಟ್ ಪಕ್ಷಗಳ ಸೋದರ ಪ್ರತಿನಿಧಿಗಳು ಭಾಗವಹಿಸುವ ಪ್ರಥಮ ಸಂಘಟನೆ. 1991ರಲ್ಲಿ ಮದ್ರಾಸಿನಲ್ಲಿ ನಮ್ಮ ಪಕ್ಷದ 14ನೇ ಅಧಿವೇಶನವು ನಡೆದಾಗ ಜಗತ್ತಿನಲ್ಲಿ ಸೋವಿಯತ್ ಯೂನಿಯನ್ ಮತ್ತು ಪೂರ್ವ ಯುರೋಪಿನ ಸಮಾಜವಾದೀ ರಾಷ್ಟ್ರಗಳಲ್ಲಿ ವಿಘಟನೆ ಮತ್ತು ಹಿನ್ನಡೆ ಉಂಟಾಗಿದ್ದರೆ, ಈಗ 15ನೇ ಅಧಿವೇಶನದ ವೇಳೆ ಜಗತ್ತಿನಲ್ಲಿ ಸಮಾಜವಾದೀ ರಾಷ್ಟ್ರಗಳು ಆರ್ಥಿಕವಾಗಿ ದಾಪುಗಾಲು ಹಾಕುತ್ತಿವೆ ಮತ್ತು ರಶ್ಯಾ ಮತ್ತು ಪೂರ್ವ ಯುರೋಪಿನ ರಾಷ್ಟ್ರಗಳಲ್ಲೂ, ಯುರೋಪಿನ ಹಲವಾರು ರಾಷ್ಟ್ರಗಳಲ್ಲೂ, ದಕ್ಷಿಣ ಆಫ್ರಿಕಾದಲ್ಲೂ ವಿಶೇಷವಾಗಿ ನಮ್ಮ ನೆರೆ ರಾಜ್ಯವಾದ ನೇಪಾಲದಲ್ಲಿ ಕಮ್ಯುನಿಸ್ಟ್ ಪಕ್ಷಗಳು ಹೆಚ್ಚೆಚ್ಚು ಯಶಸ್ಸನ್ನು ಪಡೆದು ಮುನ್ನಡೆಯುತ್ತಿವೆ. ತಮ್ಮ ರಾಷ್ಟ್ರಗಳ ಜನತೆಯ ಮಾತ್ರವಲ್ಲ ಇಡೀ ಜಗತ್ತಿನ ದೃಷ್ಟಿಯನ್ನು ತಮ್ಮೆಡೆಗೆ ಸೆಳೆದು ಕಮ್ಯುನಿಸಂ ಇನ್ನೂ ಜೀವಂತವಾಗಿರುವುದನ್ನು ಮಾತ್ರವಲ್ಲ ಅದು ಮುನ್ನಡೆಯುವುದನ್ನು ಸಾರುತ್ತಿವೆ.

-ಪಿ.ರಾಮಚಂದ್ರರಾವ್

ಚಂಡೀಗಡದಲ್ಲಿ ಸೇರುವ ಅಧಿವೇಶನವು ಈ ಅಂತರ್ರಾಷ್ಟ್ರೀಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಜಗತ್ತಿನ ಚಲನಾ ದಿಕ್ಕನ್ನು ಕುರಿತು ಅಂದಾಜು ಮಾಡಲಿಕ್ಕಿದೆ. ಮಾತ್ರವಲ್ಲ, ಭಾರತದ ರಾಜಕೀಯದಲ್ಲಿ, ಕಾಂಗ್ರೆಸ್(ಐ) ಪಕ್ಷವು ದಿನೇ ದಿನೇ ಅವನತಿ ಹೊಂದುತ್ತಾ ಹೋಗುತ್ತಿರುವ ಸನ್ನಿವೇಶದಲ್ಲಿ ಅದು ಅನುಸರಿಸುತ್ತಿರುವ ಸಾಮ್ರಾಜ್ಯಶಾಹಿ-ಗುತ್ತೇದಾರಿ ಬಂಡವಾಳಶಾಹಿ ಪರ ಹೊಸ ಆರ್ಥಿಕ ನೀತಿಗಳಿಂದ ದೇಶವನ್ನೂ, ದೇಶದ ವಿಶಾಲ ವಿಭಾಗಗಳ ಜನತೆಯನ್ನೂ ರಕ್ಷಿಸುವುದಕ್ಕಾಗಿ ಪಣ ತೊಟ್ಟು ಅದರ ಯಶಸ್ಸಿಗೆ ಆವಶ್ಯಕವಾದ ರಾಜಕೀಯ ಸಂಘಟನಾ ಸಾಮರ್ಥ್ಯವನ್ನು ಪಡೆಯಲು ಮುಂದಾಗಲಿದೆ. ದೇಶದ ಬಹುಭಾಗಗಳಲ್ಲಿ ಇನ್ನೂ ನಿರ್ಬಲವಾಗಿರುವ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ವನ್ನು ಬಲಪಡಿಸುವುದಕ್ಕೆ ಬೇಕಾದ ಸಂಘಟನಾ ನಿರ್ಣಯಗಳನ್ನು ಅದು ಕೈಗೊಳ್ಳಬೇಕಾಗಿದೆ.

ಈ ಅಧಿವೇಶನಕ್ಕೆ ಪೂರ್ವಭಾವಿಯಾಗಿ ಈಗ ಕರ್ನಾಟಕ ರಾಜ್ಯದಲ್ಲಿ ಫೆಬ್ರವರಿ ತಿಂಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಪಕ್ಷದ ಶಾಖಾ ಸಮ್ಮೇಳನಗಳು, ಮಧ್ಯಂತರ ಸಮಿತಿ ಸಮ್ಮೇಳನಗಳು ಮತ್ತು ಜಿಲ್ಲಾ ಸಮ್ಮೇಳನಗಳು ನಡೆಯುತ್ತಿವೆ. ಕೊನೆಗೆ ಫೆಬ್ರವರಿ 24ರಿಂದ 27ರವರೆಗೆ ಗುಲ್ಬರ್ಗಾ ಮಹಾನಗರದಲ್ಲಿ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಸಮ್ಮೇಳನವು ನಡೆಯಲಿದೆ.

ಮಾತ್ರವಲ್ಲ ಇದೇ ವೇಳೆ ಚಂಡೀಗಢದಲ್ಲಿ ಸೇರಲಿರುವ ಪಕ್ಷದ 15ನೇ ಅಧಿವೇಶನದಲ್ಲಿ ಮಂಡಿಸಲಿರುವ ಪಕ್ಷದ ಕರಡು ರಾಜಕೀಯ ಠರಾವನ್ನು ಪಕ್ಷದ ಎಲ್ಲಾ ಶಾಖೆಗಳು, ಸಮಿತಿಗಳೂ ಚರ್ಚಿಸಿ ತಮ್ಮ ಅನುಭವಗಳ ಆಧಾರದಲ್ಲಿ ಅದರಲ್ಲಿ ತಿದ್ದುಪಡಿಗಳನ್ನು ಸೂಚಿಸಲಿದ್ದಾರೆ.

ಈ ರಾಜ್ಯದ ಸಮ್ಮೇಳನದಲ್ಲಿ ನಮ್ಮ ಮುಂದಿರುವ ಅತಿ ಮುಖ್ಯ ಕರ್ತವ್ಯ: ಕರ್ನಾಟಕದ ವಿಶಿಷ್ಟ ಸಾಮಾಜಿಕ-ರಾಜಕೀಯ-ಆರ್ಥಿಕ ಸ್ಥಿತಿಗತಿಗಳಲ್ಲಿ ಸಿಪಿಐ(ಎಂ) ಪಕ್ಷವನ್ನು ಶೀಘ್ರವಾಗಿ ಹೇಗೆ ಬಲಿಷ್ಠಗೊಳಿಸುವುದು ಎಂಬುದಾಗಿದೆ. ಕಾರಣ, ಸಿಪಿಐ(ಎಂ) ಪಕ್ಷದ ಸ್ವತಂತ್ರವಾದ ಶಕ್ತಿಯ ಮೇಲೆ ರಾಜ್ಯದಲ್ಲಿ ಎಡಪಕ್ಷಗಳ ಐಕ್ಯತೆಯ ಬೆಳವಣಿಗೆಯೂ ಅವಲಂಬಿಸಿದೆ. ಜನತಾದಳದ ಸರಕಾರವು ಹೆಚ್ಚೆಚ್ಚು ಜನಪರ ನೀತಿಗಳನ್ನು ಅನುಸರಿಸುವಂತೆ ಮಾಡುವ ಪ್ರಜಾಶಕ್ತಿಯ ಯಶಸ್ಸು ಅದನ್ನೇ ಹೊಂದಿಕೊಂಡಿದೆ, ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ರಾಜ್ಯದಲ್ಲಿ ಮತೀಯ ಶಕ್ತಿಗಳನ್ನು ಎಬ್ಬಿಸಿ ಅಧಿಕಾರರೂಢರಾಗಬೇಕೆಂದು ಹವಣಿಸುತ್ತಿರುವ ಬಿಜೆಪಿಯಂತಹ ಕೋಮುವಾದೀ ಪಕ್ಷವನ್ನು ಜನತೆಯಿಂದ ದೂರ ಮಾಡುವ ಕರ್ತವ್ಯದ ಯಶಸ್ಸು ಅದನ್ನೇ ಅವಲಂಬಿಸಿದೆ.

ಆದ ಕಾರಣ, ರಾಜ್ಯದ ಎಲ್ಲೆಡೆಗಳಲ್ಲಿ ನಡೆಯುವ ಸಮ್ಮೇಳನಗಳಲ್ಲಿ ಹಾಗೂ ಗುಲ್ಬರ್ಗಾದಲ್ಲಿ ನಡೆಯುವ ರಾಜ್ಯ ಸಮ್ಮೇಳನದಲ್ಲಿ ಎಲ್ಲಾ ಸಂಗಾತಿಗಳು ಮುಕ್ತವಾಗಿ ತಮ್ಮ ಅನುಭವಗಳ ಆಧಾರದಲ್ಲಿ ಅಭಿಪ್ರಾಯ ವಿನಿಮಯ ಮಾಡಿ ಪಕ್ಷವನ್ನು ತಮ್ಮ ತಮ್ಮ ಪ್ರದೇಶಗಳಲ್ಲಿ ಹಾಗೂ ಇಡೀ ರಾಜ್ಯದಲ್ಲಿ ಬೆಳೆಸಲು, ಅದೂ ಶೀಘ್ರವಾಗಿ ನಾವು ಯಾವ ಕ್ರಮಗಳನ್ನು ಅನುಸರಿಸಬೇಕು ಎಂಬ ಕುರಿತು ಸೂಕ್ತ ನಿರ್ಧಾರಗಳನ್ನು ಮಾಡಲು ಮುಂದಾಗಬೇಕು.

ಮಾರ್ಕ್ಸ್‌ವಾದೀ-ಲೆನಿನ್‌ವಾದದ ಆಧಾರದಲ್ಲಿ 50 ವರ್ಷಗಳ ಅನುಭವದ ಹಿನ್ನೆಲೆಯಲ್ಲಿ ದೇಶದ ಹಲವೆಡೆಗಳಲ್ಲಿ ನಮ್ಮ ಪಕ್ಷವು ದಾಪುಗಾಲು ಇಡುತ್ತಿರುವ ವಿಶಿಷ್ಟ ಅನುಭವಗಳನ್ನು ಗಣನೆಗೆ ತೆಗೆದುಕೊಂಡು, ಕರ್ನಾಟಕದ ನಿರ್ದಿಷ್ಟ ಪರಿಸ್ಥಿತಿಯಲ್ಲಿ ಪಕ್ಷವನ್ನು, ಪಕ್ಷದ ನೇತೃತ್ವದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಬಲಿಷ್ಠಗೊಳಿಸಲು ಮುಂದಾಗೋಣ.

ವಾರದ ನುಡಿ

ಜನವರಿ 1, 1995ರಿಂದ ವಿಶ್ವ ವ್ಯಾಪಾರ ಸಂಘಟನೆ ಅಸ್ತಿತ್ವಕ್ಕೆ ಬರುವುದರೊಂದಿಗೆ ನಾವು ಒಂದು ಹೊಸ ಯುಗವನ್ನು ಪ್ರವೇಶಿಸುತ್ತಿದ್ದೇವೆ-ಸಹಕಾರದ ಸ್ಥಾನವನ್ನು ಸ್ಪರ್ಧೆ ಆಕ್ರಮಿಸಿಕೊಳ್ಳುತ್ತದೆ; ಹಂಚಿಕೊಳ್ಳುವ ಬದಲು ಬಾಚಿಕೊಳ್ಳುವ ಪ್ರವೃತ್ತಿ; ಸಾರ್ವಜನಿಕ ಒಳಿತಿನ ಬದಲು ಖಾಸಗೀ ಲಾಭವೇ ಹೊಸದನ್ನು ಕಂಡು ಹಿಡಿಯುವ ಸಂಶೋಧನೆಗೆ ಪ್ರಧಾನ ಪ್ರೇರಕವಾಗುತ್ತದೆ.

-ಡಾ. ಎಂ.ಎಸ್. ಸ್ವಾಮಿನಾಥನ್

2ನೇ ರಾಷ್ಟ್ರೀಯ ಕೃಷಿ ವಿಜ್ಞಾನ ಅಧಿವೇಶನದ ಅಧ್ಯಕ್ಷ ಭಾಷಣದಲ್ಲಿ

ವರ್ತಮಾನ

ಇತಿಹಾಸ

ಕಾಂಗ್ರೆಸ್............. ಕೊನೆಯ ದಿನಗಳು?

ಮಾಜಿ ಕೇಂದ್ರ ಮಂತ್ರಿ ಅರ್ಜುನ್ ಸಿಂಗ್‌ರನ್ನು ಕಾಂಗ್ರೆಸ್(ಐ)ನ ಪ್ರಾಥಮಿಕ ಸದಸ್ಯತ್ವದಿಂದ ಅಮಾನತು ಮಾಡಿದ್ದು, ನಂತರ ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲೂ ಈ ಬಗ್ಗೆ ಪ್ರಸ್ತಾಪ ಬರದ ಬಗ್ಗೆ ಕಾಂಗ್ರೆ ಮುಖಂಡರು ಪರಸ್ಪರ ವಿರೋಧಿ ಪ್ರತಿಕ್ರಿಯೆಗಳು, ಅರ್ಜುನ್ ಸಿಂಗ್‌ರಿಗೆ ನೀಡಿದ ಶೋಕಾಸ್ ನೋಟೀಸಿನಲ್ಲಿ ಅವಧಿಯನ್ನು ಕಡಿತ ಮಾಡಿದ್ದು, ಅದನ್ನು ಹೆಚ್ಚಿಸಬೇಕೆಂದು ಅರ್ಜುನ್ ಸಿಂಗರ ಒತ್ತಾಯಕ್ಕೆ ಕೊನೆಯ ದಿನ ಕೊನೆಗೂ ಪ್ರಧಾನಿ ತಲೆಬಾಗಿದ್ದು ಇತ್ಯಾದಿ ಇತ್ಯಾದಿ ಏನು ತೋರಿಸುತ್ತವೆ? ನೂರು ವರ್ಷ ದಾಟಿದೆಯೆಂದು ಆಗಾಗ ಹೆಮ್ಮೆ ಪಡುವ ಈ ಪಕ್ಷದ ಬಿಕ್ಕಟ್ಟು ಆಳವಾಗುತ್ತಿದೆ ಎಂಬುದನ್ನು ಇದು ತೋರಿಸುತ್ತದೆ. ನರಸಿಂಹರಾಯರ ಕಸರತ್ತುಗಳು ಕಾಂಗ್ರೆಸ್ಸಿನ ಅಂತ್ಯವನ್ನು ತಪ್ಪಿಸಲಾರವು, ಆದರೆ ಈ ಅಂತ್ಯಕ್ಕೆ ಯಾರೂ ಕಣ್ಣೀರು ಸುರಿಸುವುದಿಲ್ಲ. ಇದು ಇತಿಹಾಸದ ಬೇಡಿಕೆ ಎಂದಿದೆ "ಪೀಪಲ್ಸ್ ಡೆಮಾಕ್ರಸಿ"ಯ ಜನವರಿ 29, 1995ರ ಸಂಚಿಕೆಯ ಸಂಪಾದಕೀಯ

ಕಾಂಗ್ರೆಸ್(ಐ) ವಿಘಟನೆಗೊಳ್ಳುತ್ತಿದೆ ಎಂಬುದು ದೇಶಾದ್ಯಂತ ಕಂಡು ಬಂದಿರುವ ಸಾರ್ವತ್ರಿಕ ಭಾವನೆ-ವಿಶೇಷವಾಗಿ ಆಂಧ್ರ ಮತ್ತು ಕರ್ನಾಟಕದಲ್ಲಿ ಅದರ ಶೋಚನೀಯ ಪರಾಭವದ ನಂತರ. ಈ ಪರಾಭವ ಪರಿಣಾಮಗಳನ್ನು ನರಸಿಂಹರಾವ್ ಹೇಗೆ ಎದುರಿಸುತ್ತಾರೆ ಎಂಬ ಬಗ್ಗೆಯಷ್ಟೆ ಊಹಾ-ಪೋಹ ಎತ್ತು. ಅರ್ಜುನ್ ಸಿಂಗ್‌ರನ್ನು ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವದಿಂದ ಅಮಾನತುಮಾಡಿದ್ದು ಅವರು ನರಸಿಂಹರಾಯರಿಗೆ ಬರೆದ ಪತ್ರದಲ್ಲಿ ಎತ್ತಿದ ಪ್ರಶ್ನೆಗೆ ಯಾವ ರೀತಿಯಲ್ಲೂ ಉತ್ತರನೀಡಿಲ್ಲ, ಆ ಪತ್ರ ವ್ಯಕ್ತಿಗಳ ಬಗ್ಗೆಯಾಗಲಿ, ವ್ಯಕ್ತಿತ್ವಗಳ ಬಗ್ಗೆಯಾಗಲೀ ಇರಲಿಲ್ಲ. ಅದರಲ್ಲಿ ಆರು ಪ್ರಶ್ನೆಗಳನ್ನು ಎತ್ತಲಾಗಿತ್ತಷ್ಟೆ. ಅದಕ್ಕೆ ಉತ್ತರ ಕೇಳಲಾಗಿತ್ತಷ್ಟೆ.


ನಿಜ, ಅರ್ಜುನ್ ಸಿಂಗರ ಅಮಾನತು ಕಾಂಗ್ರೆಸ್(ಐ)ನ ಆಂತರಿಕ ವಿಚಾರ. ಆದರೆ ಕೋಮುವಾದದೊಂದಿಗೆ ರಾಜಿ, ಜನಸಾಮಾನ್ಯರ ಮೇಲೆ ವಿನಾಶಕಾರಿ ಪರಿಣಾಮ ಬೀರಿರುವ ಆರ್ಥಿಕ ಸುಧಾರಣೆಗಳೆಂಬ ಕಂತೆ, ಎಲ್ಲೆಲ್ಲೂ ತಾಂಡವವಾಡುತ್ತಿರುವ ಭ್ರಷ್ಟಾಚಾರ ಇತ್ಯಾದಿ ಮಾತ್ರ ಕಾಂಗ್ರೆಸ್ ಪಕ್ಷದ ಆಂತರಿಕ ವ್ಯವಹಾರಗಳಲ್ಲ. ಇವು ನೇರವಾಗಿ ದೇಶದ ರಾಜಕೀಯ ವ್ಯವಸ್ಥೆಯನ್ನು, ಸಮಾಜವನ್ನು ತಟ್ಟುವ ವಿಚಾರಗಳು ಅವು ಕೇವಲ ಅರ್ಜುನ್‌ಸಿಂಗ್ ಎತ್ತಿದ ವಿಚಾರಗಳಲ್ಲ, ಅವರಿಂತ ಎಷ್ಟೋ ಮೊದಲು ಜಾತ್ಯಾತೀತ ಪ್ರತಿಪಕ್ಷಗಳು ಹಾಗೂ ಕಾಂಗ್ರೆಸ್ಸಿನೊಳಗಿನ ಒಂದು ವಿಭಾಗ ಈ ಪ್ರಶ್ನೆಗಳನ್ನೆತ್ತಿದ್ದವು, ಸರಕಾರದಿಂದ ಅದಕ್ಕೆ ಉತ್ತರ ಬೇಕೆಂದು ಒತ್ತಾಯಿಸಿದ್ದವು. ನಿರ್ಣಯವೂ ಇಲ್ಲ, ಉತ್ತರವು ಇಲ್ಲ ಎಂಬುದು ರಾವ್ ಸರಕಾರದ ಚಾಳಿಯಾಗಿ ಬಿಟ್ಟಿರುವುದರಿಂದ ತನ್ನದೇ ವಿಚಾರಗಳನ್ನು ಮುಂದಿಡಬೇಕು, ಅವನ್ನೆದುರಿಸಲು ತನ್ನ ಕಾರ್ಯ ಯೋಜನೆಯೇನು ಎಂದು ವಿವರಿಸಬೇಕು ಎಂದೇನೂ ರಾವ್ ಸರಕಾರಕ್ಕೆ ಅನಿಸಿಯೇ ಇಲ್ಲ, ಒಂದು ಪ್ರಜಾಪ್ರಭುತ್ವ ಸರಕಾರ ತನ್ನ ಕೃತ್ಯಗಳಿಗೆ ಉತ್ತರ ನೀಡಬೇಕಾಗುತ್ತದೆ. ತಾನು ಮಾಡಿದ, ಮಾಡಲಾರದ ಕೆಲಸಗಳಿಗೆ ಜವಾಬುದಾರನಾಗಲು ನಿರಾಕರಿಸುವುದು ಅದರ ಧಿಮಾಕಿನ ಉತ್ತುಂಗ. ಅದು ಸರ್ವಾಧಿಕಾರಶಾಹಿಯನ್ನು ಬಯಲಿಗೆಳೆಸಿಕೊಳ್ಳುವ ಸಂಗತಿ.

ನಿಜವಾಗಿ ಇವು ಆಂಧ್ರ ಪ್ರದೇಶ ಕರ್ನಾಟಕಗಳ ಚುನಾವಣಾ ಸಮರದಲ್ಲಿ ಎತ್ತಿದ ಪ್ರಶ್ನೆಗಳು. ಇದಕ್ಕೆ ಜನಗಳ ತೀರ್ಪು ಸ್ಪಷ್ಟವಾಗಿತ್ತು, ಅಸಂದಿಗ್ಧವಾಗಿತ್ತು, ಸಮಸ್ಯೆಗಳನ್ನು ಹತೋಟಿಗೆ ತರಲು ರಾವ್ ಸರಕಾರದ ಪ್ರತಿರೋಧ ನಿಜವಾಗಿ ಈ ಸರಕಾರದ ಬಳಿ ಯಾವುದೇ ಉತ್ತರವೇ ಇಲ್ಲವೇನೋ ಎಂಬ ಭಾವನೆಯನ್ನು ಬಲಪಡಿಸಿದೆ. ಅರ್ಜುನ್‌ಸಿಂಗ್‌ರ ಅಮಾನತು ಇದನ್ನು ಮತ್ತಷ್ಟು ಒತ್ತಿ ಹೇಳಿದೆ. ಇದು ಕಾಂಗ್ರೆಸ್ಸಿನೊಳಗಿನ ಒಡಕುಗಳ ಬೆಂಕಿಗೆ ತುಪ್ಪ ಸುರಿಯುತ್ತದಷ್ಟೆ.

ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಚುನಾವಣೆ ನಡೆಯಲಿರುವ ರಾಜ್ಯಗಳನ್ನು ನರಸಿಂಹರಾಯರು ಬಹುಶಃ ಆಗಲೇ ಲೆಕ್ಕದಿಂದ ಹೋಗಿಟ್ಟಿದ್ದಾರೆ. ಆದ್ದರಿಂದಲೇ ಮೊದಲೇ ಏಟು ಕೊಟ್ಟನಾಯಿತು ಎಂದಿರಬೇಕು. ಇನ್ನಷ್ಟು ಚುನಾವಣಾ ಅನರ್ಥ ಕಾಂಗ್ರೆಸ್ಸಿನೊಳಗಿನ ಸ್ಫೋಟಕ್ಕೆ ವೇಗವರ್ಧಕವಾಗಿ ಕೆಲಸ ಮಾಡುವುದಂತೂ ಖಂಡಿತ. ಆ ಜ್ವಾಲಾಮುಖಿ ಭುಗಿಲೆನ್ನುವ ಮೊದಲೇ ಅದಕ್ಕೆ ನೇತೃತ್ವ ಕೊಡಬಹುದಾದ ತಲೆಯನ್ನೇ ಕಡಿದು ಬಿಡುವುದು ಒಳ್ಳೆಯದು ಎಂಬ ಲೆಕ್ಕಾಚಾರವಿರಬಹುದು.

ಇಂತಹ ಕಸರತ್ತುಗಳು ಸದ್ಯಕ್ಕೆ ನರಸಿಂಹರಾಯರನ್ನು ಉಳಿಸಬಹುದು. ಆದರೆ ಕಾಂಗ್ರೆಸ್ ವಿನಾಶ ಖಂಡಿತ. ಹಾಗಾದಾಗ ಅದಕ್ಕಾಗಿ ಯಾರೂ ಕಣ್ಣೀರು ಸುರಿಸುವುದಿಲ್ಲ. ಒಂದಾನೊಂದು ಕಾಲದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಎಂಬ ಸಂಘಟನೆಯೊಂದಿತ್ತು. ಅದು ಭಾರತೀಯ ಜನತೆಗಾಗಿ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳಲ್ಲಿ ಚೈತನ್ಯ ತುಂಬಿತ್ತು. ಅದೇ ಸಂಘಟನೆ ಈಗ ಜನತೆಗೆ ಅತೀ ದೊಡ್ಡ ಹೊರೆಯಾಗಿದೆ. ಎಂತಹ ವಿಪರ್ಯಾಸ! ಅದರೇನು ಮಾಡುವುದು?

ಕಾಂಗ್ರೆಸ್ ವಿಘಟನೆ ಹೊಂದಬೇಕೆಂಬುದು ಇತಿಹಾಸದ ಮುನ್ನಡೆಯ ದ್ವಂದ್ವಾತ್ಮಕ ಅಂಶ! ಇದು ಇತಿಹಾಸದ ಬೇಡಿಕೆ. ಆದರೆ ಇನ್ನೂ ದೊಡ್ಡ ವಿಪರ್ಯಾಸವೆಂದರೆ ನರಸಿಂಹರಾಯರಿಂದಲೇ ಆ ಕೆಲಸ ಮಾಡಿಸುತ್ತಿರುವುದು.



ಸೈದ್ಧಾಂತಿಕ ಪ್ರಶ್ನೆಗಳ ಆಳವಾದ ಪರಿಶೀಲನೆ

(ಮುಂದುವರಿದುದು)

ಇತಿಹಾಸದಲ್ಲಿ ಸಮಾಜವಾದಿ ವ್ಯವಸ್ಥೆಯ ಪ್ರಥಮ ಪ್ರಯೋಗ ನಡೆದ ನಾಡಿನಲ್ಲೇ ಸಮಾಜವಾದ ಕುಸಿದಿದ್ದರಿಂದ ಸಹಜವಾಗಿಯೇ ತೀವ್ರ ವೇದನೆ ಉಂಟಾಯಿತು. ಹಾಗೂ ಸಿಪಿಐ(ಎಂ) ನಲ್ಲಿ ಸ್ವತಃ ತನ್ನ ಸಿದ್ಧಾಂತದ ಬಗ್ಗೆ ಆತ್ಮ ಪರಿಶೋಧನೆಯ ಅಗತ್ಯ ಕಂಡು ಬಂದಿತು. ಮಾರ್ಕ್ಸ್‌ವಾದ ಲೆನಿನ್ ವಾದ ಮತ್ತು ಅರೆ ಪರಿಷ್ಕರಣವಾದ ಹಾಗೂ ಸಿದ್ಧಾಂತಾಂಧತೆಯಂಥ ವಿರೂಪಗಳ ನಡುವಿನ ತೀಕ್ಷ್ಣ ಸೈದ್ಧಾಂತಿಕ ಹೋರಾಟವನ್ನು ಯಶಸ್ವಿಯಾಗಿ ಎದುರಿಸಿ ನಿಂತ ಪಕ್ಷ, ಯುಎಸ್‌ಎಸ್‌ಆರ್ ಮತ್ತು ಪೂರ್ವ ಯುರೋಪ್ ದೇಶಗಳಲ್ಲಿ ಸಮಾಜವಾದ ವಿಫಲವಾದುದಕ್ಕೆ ಕಾರಣಗಳನ್ನು ಆಳವಾಗಿ ಪರಿಶೀಲಿಸುವ ಕೆಲಸಕ್ಕೆ ಮುಂದಾಯಿತು.

1987 ನವಂಬರ್ ನಲ್ಲಿ ಅಕ್ಟೋಬರ್ ಕ್ರಾಂತಿಯ 70 ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಗೋರ್ಬಚೆವ್ ಭಾಷಣ ಮಾಡಿದಂದಿನಿಂದಲೂ ಈ ವಿಚಾರದಲ್ಲಿ ಬಳಸಿಕೊಂಡಿರುವ ಮೂಲಭೂತ ಅಂಶಗಳನ್ನು ಪಕ್ಷ ಚರ್ಚಿಸುತ್ತಲೇ ಇತ್ತು. ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳ ವಿದ್ಯಮಾನಗಳನ್ನು ಪಾಲಿಟ್ ಬ್ಯೂರೋ ಮತ್ತು ಕೇಂದ್ರ ಸಮಿತಿ ಚರ್ಚಿಸಿತು. ಆದರೆ ಗೋರ್ಬಚೆವ್ ನೇತೃತ್ವದಲ್ಲಿ ಸಿಪಿಎಸ್ ಯು ಅನುಸರಿಸಿದ ನೀತಿಗಳ ಫಲವಾಗಿ ಸೋವಿಯತ್ ಒಕ್ಕೂಟ ಛಿದ್ರಗೊಂಡಿತು. ಇದರಲ್ಲಿ ಒಳಗೊಂಡಿರುವ ಸೈದ್ಧಾಂತಿಕ ಪ್ರಶ್ನೆಗಳನ್ನು ಸಮಗ್ರವಾಗಿ ವಿಶ್ಲೇಷಿಸುವುದು ಅಗತ್ಯವಾಯಿತು.

ಪಕ್ಷದ 14 ನೇ ಮಹಾಧಿವೇಶನ ನಿರ್ದಿಷ್ಟ ಸೈದ್ಧಾಂತಿಕ ಪ್ರಶ್ನೆಗಳು ಶೀರ್ಷಿಕೆಯ ಗೊತ್ತುವಳಿಯೊಂದನ್ನು ಅಂಗೀಕರಿಸಿತು. ಇದೇ ವಿಷಯದ ಕುರಿತು ಇಡೀ ಪಕ್ಷ ತಳೆದ ಸಾಮೂಹಿಕ ತಿಳುವಳಿಕೆಯನ್ನು ಪ್ರತಿನಿಧಿಸುತ್ತದೆ. ಈ ಗೊತ್ತುವಳಿ ಸಮಗ್ರವಾಗಿತ್ತು. ಆದರೆ ಅದುವೇ ಅಂತಿಮ ಎಂದು ಪಕ್ಷ ಹೇಳಿಕೊಳ್ಳಲಿಲ್ಲ. ಅದರಲ್ಲಿ ಕೆಲವು ಪ್ರಾಥಮಿಕ ಅಭಿಪ್ರಾಯಗಳಿವೆ ಮತ್ತು ಇಡೀ ವಿಷಯದ ಬಗ್ಗೆ ಇನ್ನೂ ವ್ಯಾಪಕ ಹಾಗೂ ಆಳ ಅಧ್ಯಯನ ಅಗತ್ಯ ಎಂದು ಪಕ್ಷ ಹೇಳಿತು.

ಬಂಡವಾಳಶಾಹಿಯ ಸಾರ್ವತ್ರಿಕ ಬಿಕ್ಕಟ್ಟನ್ನು ಪಕ್ಷ 'ಸರಳ'ವಾಗಿ ವಿಶ್ಲೇಷಿತು. ಇದುವೇ ಪಕ್ಷ ಜಾಗತಿಕ ಪರಿಸ್ಥಿತಿಯನ್ನು ತಪ್ಪಾಗಿ ಅಂದಾಜು ಮಾಡಿದರ ಮೂಲ ಕಾರಣವಾಗಿತ್ತು. ಜಾಗತಿಕ ಬೆಳವಣಿಗೆಯಲ್ಲಿ ಸಮಾಜವಾದ ಒಂದು ನಿರ್ಣಾಯಕ ಅಂಶವಾಗಿ ಹೊರಹೊಮ್ಮುತ್ತಿದೆ. ಎಂದು 1957 ಮತ್ತು 1960 ರಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷಗಳ ಸಭೆ ಹೇಳಿತ್ತು. 1990 ರ ಮೇ ತಿಂಗಳ ಕೇಂದ್ರ ಸಮಿತಿ ನಿರ್ಣಯದಲ್ಲಷ್ಟೆ ಈ ಅಂದಾಜನ್ನು ಸಿಪಿಐ(ಎಂ) ಟೀಕಿಸಿತು. ಉತ್ಪಾದಕ ಶಕ್ತಿಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸುವ ಮತ್ತು ಬದಲಾದ ಸನ್ನಿವೇಶಕ್ಕೆ ಹೊಂದಿ ಕೊಳ್ಳುವ ಜಾಗತಿಕ ಬಂಡವಾಳಶಾಹಿಯ ಸಾಮರ್ಥ್ಯವನ್ನು ಈ ಎರಡು ಸಮ್ಮೇಳನಗಳು ತಪ್ಪಾಗಿ ಅಂದಾಜು ಮಾಡಿವೆ. ಎಂದು ಕೇಂದ್ರ ಸಮಿತಿ ನಿರ್ಣಯ ಹೇಳಿತು.

ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳಲ್ಲಿ ಬಂಡವಾಳವಾದವನ್ನು ಮರಳಿಸ್ಥಾಪಿಸುವುದು ಅಸಾಧ್ಯ ಎಂದು 1960 ರಲ್ಲಿ 81 ಕಮ್ಯುನಿಸ್ಟ್ ಪಕ್ಷಗಳು ಹೇಳಿಕೆ ಅಭಿಪ್ರಾಯಪಟ್ಟಿತು. ಜಾಗತಿಕ ಕಮ್ಯುನಿಸ್ಟ್ ಆಂದೋಲನದ ಒಂದು ಭಾಗವಾದ ಸಿಪಿಐ(ಎಂ) ಈ ಹೇಳಿಕೆಯಿಂದ ಪ್ರಭಾವಿತಗೊಂಡಿತ್ತು ಎಂದು 14 ನೇ ಮಹಾಧಿವೇಶನದ ಗೊತ್ತುವಳಿ ಹೇಳಿತು. ಬಂಡವಾಳಶಾಹಿಯ ವಿನಾಶದ ಅನಿವಾರ್ಯತೆ ಒಂದು ಸ್ವಯಂ ಚಾಲಿತ ಪ್ರಕ್ರಿಯೆಯಲ್ಲ, ಬಂಡವಾಳಶಾಹಿಯನ್ನು ಕಿತ್ತೊಗೆಯಬೇಕು . ಎಂದು ಗೊತ್ತುವಳಿ ಜಾಗತಿಕ ಸಮಾಜವಾದದ ವಿಜಯ ಮಾನವನ ಪ್ರಗತಿಯಲ್ಲಿ ಬಂಡವಾಳವಾದದ ನಂತರದ ಘಟ್ಟ ಎಂದು ಮಾರ್ಕ್ಸ್ ಮತ್ತು ಎಂಗೆಲ್ಸ್ ಪ್ರತಿಪಾದಿಸಿದ್ದರು. ಅವರ ನಿರೀಕ್ಷೆಗೆ ವಿರುದ್ಧವಾಗಿ ಬಂಡವಾಳಶಾಹಿ ವ್ಯವಸ್ಥೆ ತುಲನಾತ್ಮಕವಾಗಿ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಮಾಜವಾದಿ ಕ್ರಾಂತಿಗಳು ಜಯ ಸಾಧಿಸಿದವು. ಯಾವುದೇ ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ಕ್ರಾಂತಿ ಯಶಸ್ವಿಯಾಗದಿರುವುದೇ ಆ ದೇಶಗಳಲ್ಲಿ ಸಮಾಜವಾದದ ಕ್ರೂಢೀಕರಣಕ್ಕೆ ಮಿತಿಯಾಗಿ ಪರಿಣಮಿಸಿತು. ಸಮಾಜವಾದಿ ಕ್ರಾಂತಿಗಳಿಂದಾಗಿ ಜಾಗತಿಕ ಬಂಡವಾಳಶಾಹಿ ಮಾರುಕಟ್ಟೆಯ ದೈಹಿಕ ಗಾತ್ರ ಮತ್ತು ಕಾರ್ಯ ನಿರ್ವಹಣೆ ಮಿತಿ ಕುಗ್ಗಿತೆನೋ ಹೌದು ಆದರೆ ಯಾವುದೇ ಮುಂದುವರಿದ ದೇಶದಲ್ಲಿ ಸಮಾಜವಾದಿ ಕ್ರಾಂತಿ ಆಗದಿರುವುದರಿಂದ ಬಂಡವಾಳಶಾಹಿ ವ್ಯವಸ್ಥೆ ಈಗಾಗಲೇ ಗಳಿಸಿದ ಉತ್ಪಾದಕ ಶಕ್ತಿಗಳ ಮಟ್ಟ ಅಥವಾ ಅದರ ಭವಿಷ್ಯದ ಅವಕಾಶಗಳ ಮೇಲೆ ಇತರ ದೇಶಗಳಲ್ಲಿನ ಸಮಾಜವಾದಿ ಕ್ರಾಂತಿ ಪರಿಣಾಮ ಬೀರಲಿಲ್ಲ ಕುಸಿದ ಮಾರುಕಟ್ಟೆಯ ವಾಸ್ತವತೆಗೆ ಹೊಂದಿಕೊಳ್ಳಲು ಮತ್ತು ಉತ್ಪಾದಕ ಶಕ್ತಿಗಳ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಜಾಗತಿಕ ಬಂಡವಾಳಶಾಹಿಗೆ ಸಾಧ್ಯವಿದೆ. ಎರಡನೇ ಜಾಗತಿಕ ಯುದ್ಧದ ನಂತರದ ಅವಧಿಯಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಕ್ರಾಂತಿಗೆ ಮುಂದಾಗುವ ಮೂಲಕ ಅದು ಈ ಅಂಶವನ್ನು ಸಾಬೀತು ಪಡಿಸಿತು.

ಅಂತರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದ ಪ್ರಸಕ್ತ ಹಿನ್ನಡೆಗಳ ಹೊರತಾಗಿಯೂ ಈಗಿನ ಜಾಗತಿಕ ವಿದ್ಯಮಾನಗಳ ಹಿನ್ನಲೆಯಲ್ಲಿ ಈ ನಿಲುವೆ ಅಸಂಬದ್ಧ ಆಗುವುದಿಲ್ಲ, ಇವು ವೈರುಧ್ಯಗಳು ಇನ್ನಷ್ಟು ತೀಕ್ಷ್ಣಗೊಂಡಿರುವುದನ್ನು ಸೂಚಿಸುತ್ತವೆಯೋ ಹೊರತು ಸಿಪಿಎಸ್ ಯು ಪ್ರತಿಪಾದಿಸಿದಂತೆ ವೈರುಧ್ಯಗಳ ಉಗ್ರತೆ ಕಡಿಮೆಯಾಗಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಸಿಪಿಎಸ್ ಯು ಮಂಡಿಸಿದಂಥ ಪ್ರತಿಪಾದನೆಗಳನ್ನು ಸಿಪಿಐ(ಎಂ) ಒಪ್ಪಲಿಲ್ಲ ಅದರ ನಂತರದ ವಿಶ್ವ ವಿದ್ಯಮಾನಗಳು ಸಿಪಿಐ(ಎಂ)ನ ಈ ವಿಶ್ಲೇಷಣೆಯನ್ನು ಬಲಪಡಿಸಿದವು.

1990ರ ಕೇಂದ್ರ ಸಮಿತಿ ಗೊತ್ತು

ವಳಿ ಈ ರೀತಿ ಹೇಳಿತು.

ಪ್ರಸಕ್ತ ಯುಗದ ನಾಲ್ಕು ಮೂಲಭೂತ ವೈರುಧ್ಯಗಳನ್ನು ಸರಿಯಾಗಿ ಅಧ್ಯಯನ ಮಾಡುವುದರಿಂದ ಮಾತ್ರವೇ ಜಗತ್ತಿನ ಪ್ರಸಕ್ತ ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳ ಬಹುದು ಎಂಬ ತಿಳವಳಿಕೆಗೆ ಸಿಪಿಐ(ಎಂ) ಬದ್ಧವಾಗಿದೆ. ಜಾಗತಿಕ ಸಮಾಜವಾದ ಮತ್ತು ಸಾಮ್ರಾಜ್ಯಶಾಹಿ ನಡುವಿನ ವೈರುಧ್ಯ, ಜಾಗತಿಕ ಸಮಾಜವಾದಿ ಶಕ್ತಿಗಳು ಮತ್ತು ಸಾಮ್ರಾಜ್ಯಶಾಹಿ ನಡುವಿನ ವೈರುಧ್ಯ, ಸಾಮ್ರಾಜ್ಯಶಾಹಿ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನತೆಯ ನಡುವಿನ ವೈರುಧ್ಯ ಹಾಗೂ ಕಡೆಯದಾಗಿ ಸ್ವತಃ ಪರಸ್ಪರ ಸಾಮ್ರಾಜ್ಯಾಶಾಹಿಗಳು ಮತ್ತು ಬಂಡವಾಳಶಾಹಿ ದೇಶಗಳ ಬಂಡವಾಳ ಹಾಗೂ ಶ್ರಮದ ನಡುವಿನ ವೈರುಧ್ಯ- ಇವೇ ಆ ನಾಲ್ಕು ವೈರುಧ್ಯಗಳಾಗಿವೆ.

ಇವುಗಳಲ್ಲಿ, ಸಾಮ್ರಾಜ್ಯಶಾಹಿ ಮತ್ತು ಸಮಾಜವಾದದ ನಡುವಿನ ವೈರುಧ್ಯವೇ ಅತ್ಯಂತ ಪ್ರಮುಖವಾದುದು. ಇದನ್ನು ಬದಲಾಯಿಸಿ ಬೇರೆ ಯಾವುದೇ ವೈರುಧ್ಯವೂ ಅದರ ಸ್ಥಾನವನ್ನು ಅಲಂಕರಿಸಬಹುದು ಎಂಬುದು ಸಿಪಿಐ(ಎಂ) ನಿಲುವು.

ಜನತಾ ಪ್ರಜಾಪ್ರಭುತ್ವದ ಸ್ಥಾಪನೆ ಮತ್ತು ಸಾಮ್ರಾಜ್ಯಶಾಹಿ ವಿರೋಧಿ, ಪಾಳೇಗಾರಿ ವಿರೋಧಿ, ಏಕಸ್ವಾಮ್ಯ ಬಂಡವಾಳ ವಿರೋಧಿ ಗುರಿಯನ್ನು ಪೂರ್ಣಗೊಳಿಸಿದ ನಂತರವಷ್ಟೇ ಭಾರತದ ಜನತೆ ಸಮಾಜವಾದತ್ತ ಮುನ್ನಡೆಯ ಬಹುದು ಎಂದು ಸಿಪಿಐ(ಎಂ) ಮಹಾಧಿವೇಶನದ ಗೊತ್ತುವಳಿ ಹೇಳಿತು.

ಭಾರತದ ಪರಿಸ್ಥಿತಿಯಲ್ಲಿ ಸಮಾದವಾದವೆಂದರೇನು? ಎಂದು ಅಧಿವೇಶನ ಈ ರೀತಿಯಾಗಿ ವ್ಯಾಖ್ಯಾನಿಸಿತು.

ಜನರ ಅಧಿಕಾರವೇ ಸೌರ್ವಭೌಮತವಾಗಿರುತ್ತದೆ ಮತ್ತು ಸಮಾಜವಾದಿ ಆರ್ಥಿಕ ನಿರ್ಮಾಣ ಸಮಾಜವಾದೀಕೃತ ಉತ್ಪಾದಕ ಸಾಧನಗಳು ಹಾಗೂ ಕೇಂದ್ರೀಯ ಯೋಜನೆಯನ್ನು ಆಧರಿಸುತ್ತದೆ. ಆಸ್ತಿಯ ನಾನಾ ರೂಪಗಳು ಉಳಿದು ಕೊಳ್ಳಬಹುದು ಹಾಗೂ ಉಳಿಯುತ್ತದೆ. ಕೂಡ ಆದರೆ ಉತ್ಪಾದನೆ ಸಾಧನಗಳ ಸಾಮಾಜಿಕ ಒಡೆತನವೇ ಆಸ್ತಿಯ ನಿರ್ಣಾಯಕ ರೂಪವಾಗಿರುತ್ತದೆ. ಸಮಾಜವಾದ ವ್ಯವಸ್ಥೆಯಲ್ಲಿ ಭಿನ್ನಮತದ ಹಕ್ಕು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಬಹು ಅಭಿಪ್ರಾಯಗಳಿಗೆ ಅವಕಾಶ ವಿಫಲವಾಗಿರುತ್ತದೆ.

ದೇಶದೊಳಗೆ



ಕೇರಳ ಯುಡಿಎಫ್ ಬಿಕ್ಕಟ್ಟು ಉಲ್ಬಣ

ಕೇರಳದ ಆಳುವ ಸಂಯುಕ್ತ ಪ್ರಜಾಸತ್ತಾತ್ಮಕ ರಂಗ(ಯು.ಡಿ.ಎಫ್.)ದ ಬಿಕ್ಕಟ್ಟು ದಿನದಿನವೂ ಹೊಸ ರೂಪವನ್ನು ಪಡೆಯುತ್ತಿದೆ. ಕಾಂಗ್ರೆ ನೇತೃತ್ವದ ರಂಗದ ಸರಕಾರದ ಮುಖಂಡರಾಗಿರುವ ಮುಖ್ಯಮಂತ್ರಿ ಕೆ. ಕರುಣಾಕರನ್ ಅವರನ್ನು ಬದಲಾಯಿಸುವಂತೆ ಕಾಂಗ್ರೆ ಭಿನ್ನಮತೀಯರು ಮಾತ್ರವಲ್ಲ ರಂಗದ ಅಂಗಪಕ್ಷಗಳು ಕೂಡ ಒತ್ತಾಯಿಸುತ್ತಿವೆ. ಕರುಣಾಕರನ್ ಕಾರ್ಯಶೈಲಿ ಸ್ವಪಕ್ಷೀಯರು ಹಾಗೂ ರಂಗದ ಮಿತ್ರರ ಟೀಕೆಗೆ ಗುರಿಯಾಗಿದೆ.

ಈ ಮಧ್ಯೆ ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆ(ಇಸ್ರೋ)ಯ ಬೇಹುಗಾರಿಕೆ ಪ್ರಕರಣ ಕರುಣಾಕರನ್‌ರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಇಸ್ರೋ ಹಗರಣದಲ್ಲಿ ಭಾಗಿಯಾಗಿರುವ ಆರೋಪಕ್ಕೆ ಒಳಗಾಗಿರುವ ಐ.ಜಿ.ಪಿ. ರಾಮನ್ ಶ್ರೀವಾಸ್ತವ ಅವರನ್ನು ರಕ್ಷಿಸಲು ಕರುಣಾಕರನ್ ಯತ್ನಿಸಿದರೆಂಬ ವಿಚಾರದಿಂದ ಭಿನ್ನಮತೀಯರಿಗೆ ಹೊಸ ಅಸ್ತ್ರ ಸಿಕ್ಕಂತಾಗಿದೆ. ಸಿಪಿಐ(ಎಂ) ನೇತೃತ್ವದಲ್ಲಿ ಪ್ರತಿಪಕ್ಷಗಳು ಮುಖ್ಯಮಂತ್ರಿ ವಿರುದ್ಧ ಸೆಟೆದು ನಿಂತಿವೆ.

ಗೂಢಚಾರಿಕೆ ಹಗರಣ ಜನವರಿ 30ರಂದು ರಾಜ್ಯ ವಿಧಾನಸಭೆಯಲ್ಲಿ ಪ್ರಸ್ತಾವವಾದಾಗ ಕಾಂಗ್ರೆಸ್ ಅನೇಕ ಸದಸ್ಯರು ಪ್ರತಿಪಕ್ಷಗಳ ಬೆಂಬಲಕ್ಕೆ ನಿಂತು ಕರುಣಾಕರನ್‌ರನ್ನು ತರಾಟೆಗೆ ತೆಗೆದು ಕೊಂಡರು. ಸಾಕ್ಷ್ಯವನ್ನು ನಾಶಮಾಡಲು ಅನುಕೂಲವಾಗುವಂತೆ ರಾಮನ್ ಶ್ರೀವಾಸ್ತವ ಅಧಿಕಾರದಲ್ಲಿ ಮುಂದುವರಿಯಲು ಬಿಟ್ಟಿದ್ದೇಕೆ ಎಂದು ಸಿಪಿಐ(ಎಂ)ನ ಶಿವದಾಸ್ ಮೆನನ್ ಪ್ರಶ್ನಿಸಿದ್ದರು.

ಯುಡಿಎಫ್ ಬಿಕ್ಕಟ್ಟನ್ನು ನಿಗದಿತ ಸಮಯದೊಳಗೆ ಪರಿಹರಿಸುವುದಾಗಿ ತಮ್ಮನ್ನು ಭೇಟಿ ಮಾಡಿದ ಯುಡಿಎಫ್ ಭಿನ್ನಮತೀಯರ ನಿಯೋಗವೊಂದಕ್ಕೆ ಕಾಂಗ್ರೆ ಅಧ್ಯಕ್ಷ ನರಸಿಂಹರಾವ್ ಜನವರಿ 29ರಂದು ಆಶ್ವಾಸನೆ ನೀಡಿದ್ದರು.

ಇದರ ಬೆನ್ನಲ್ಲೇ ಜನವರಿ 30ರಂದು ವಿಧಾನಸಭೆ ಅಧಿವೇಶನದಲ್ಲಿ ಕಾಂಗ್ರೆಸ್ 19 ಭಿನ್ನಮತೀಯ ಶಾಸಕರು ಸಭಾತ್ಯಾಗ ಮಾಡಿದರು. ರಾಜ್ಯಪಾಲರ ಭಾಷಣಕ್ಕೆ ವಂದನೆ ಸೂಚಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಕರುಣಾಕರನ್ ಅವಕಾಶ ನಿರಾಕರಿಸಿದ್ದನ್ನು ಪ್ರತಿಭಟಿಸಿ ಎ.ಕೆ. ಆಂಟನಿ ಬಣದ ಸದಸ್ಯರು ಸದನದಿಂದ ಹೊರ ನಡೆದರು.

ಉತ್ತರ ಪ್ರದೇಶ: ಕಾಂಗ್ರೆ ಬೆಂಬಲ ವಾಪಸು, ಮೌನವ್ರತ ಇತ್ಯಾದಿ

ಉತ್ತರ ಪ್ರದೇಶದ ಸಮಾಜವಾದಿ ಪಕ್ಷ- ಬಹುಜನ ಸಮಾಜ ಪಕ್ಷ ಮೈತ್ರಿಕೂಟ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಕಾಂಗ್ರೆಸ್(ಐ) ವಾಪಸು ಪಡೆದಿದೆ. ಜನವರಿ 29ರಂದು ಕಾಂಗ್ರೆಸ್ ಕಾರ್ಯ ಸಮಿತಿ (ಸಿಡಬ್ಲ್ಯುಸಿ) ಸಭೆ ಈ ಬಗ್ಗೆ ನಿರ್ಣಯವನ್ನು ಕೈಗೊಂಡಿತು.

ಮುಲಾಯಂ ಸಿಂಗ್ ನೇತೃತ್ವದ ಸರಕಾರಕ್ಕೆ ಕೊಟ್ಟಿದ್ದ ಬೆಂಬಲವನ್ನು ವಾಪಸು ಪಡೆಯುವಂತೆ ಪ್ರದೇಶ ಕಾಂಗ್ರೆ ಅಧ್ಯಕ್ಷರಾಗಿದ್ದ ಎನ್.ಡಿ. ತಿವಾರಿ ನೇತೃತ್ವದ ಬಣ ಪಕ್ಷದ ನಾಯಕತ್ವವನ್ನು ಒತ್ತಾಯಿಸುತ್ತಿತ್ತು. ಆ ಬೇಡಿಕೆ ಮತ್ತಿತರ ಚಟುವಟಿಕೆಗಳ ಹಿನ್ನೆಲೆಯಲ್ಲಿ ತಿವಾರಿಯವರನ್ನು ರಾಜ್ಯ ಕಾಂಗ್ರೆ ಅಧ್ಯಕ್ಷ ಸ್ಥಾನದಿಂದ ತೆಗೆದು ಹಾಕಿ ಜಿತೇಂದ್ರ ಪ್ರಸಾದ್‌ರನ್ನು ಆ ಸ್ಥಾನಕ್ಕೆ ನೇಮಿಸಲಾಗಿತ್ತು. ಉತ್ತರ ಪ್ರದೇಶ ಸರಕಾರವನ್ನು ಕಿತ್ತೊಗೆಯಬೇಕೆಂಬುದು ತಿವಾರಿ ಬಣದ ಒಂದಂಶದ ಕಾರ್ಯಕ್ರಮದಂತಿದೆ. ಸರಕಾರ ಉರುಳುವವರೆಗೆ ತಮ್ಮ ಹೋರಾಟ ಪೂರ್ಣಗೊಳ್ಳುವುದಿಲ್ಲ ಎಂದು ತಿವಾರಿ ಹೇಳಿದ್ದಾರೆ.

ಕಾಂಗ್ರೆ ಬೆಂಬಲವನ್ನು ಹಿಂತೆಗೆದುಕೊಂಡಿರುವುದರಿಂದ ಸರಕಾರಕ್ಕೇನೂ ಭಯವಿಲ್ಲ, ಬಹುಮತವನ್ನು ಸಾಬೀತು ಪಡಿಸಿ ತೋರಿಸುತ್ತೇನೆ ಎಂದು ಮುಲಾಯಂ ಸಿಂಗ್ ಹೇಳಿದ್ದಾರೆ. ಮುಲಾಯಂ ಸರಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸುವುದಾಗಿ ಭಾರತೀಯ ಜನತಾಪಕ್ಷ (ಬಿಜೆಪಿ) ಹೇಳಿದೆ.

ಈ ಮಧ್ಯೆ ಕೋಮು ಮತ್ತು ಸಾಮಾಜಿಕ ಸಾಮರಸ್ಯಕ್ಕಾಗಿ ಎನ್.ಡಿ. ತಿವಾರಿ ಜನವರಿ 30ರಂದು ಮೂರು ದಿನಗಳ 'ಮೌನವ್ರತ' ವನ್ನು ಆರಂಭಿಸಿದರು.

ದೇಶದ ರಾಜಕೀಯ ರಂಗದಲ್ಲಿ ನಿರ್ಣಾಯಕ ಪಾತ್ರ ವಹಿಸುವ ರಾಜ್ಯದಲ್ಲಿ ಭಾರೀ ರಾಜಕೀಯ ವಿದ್ಯಮಾನಗಳು ನಡೆಯುತ್ತಿದ್ದು ಗಮನವೆಲ್ಲ ಆ ಕಡೆ ಹೋಗುತ್ತಿದೆ.

ಕಾಂಗ್ರೆಸ್(ಐ) ಒಂದು ಕಡೆ (ಕೇರಳ) ಸ್ವತಃ ತನ್ನ ಸರಕಾರವನ್ನು ತನ್ನ ಸರಕಾರವನ್ನು ಉಳಿಸಿಕೊಳ್ಳಲು ಹೆಣಗುತ್ತಿದ್ದರೆ ಇನ್ನೊಂದೆಡೆ (ಉತ್ತರ ಪ್ರದೇಶ) ಬೇರೊಂದು ಮೈತ್ರಿಕೂಟದ ಸರಕಾರವನ್ನು ಉರುಳಿಸಲು ಯತ್ನಿಸುತ್ತಿದೆ.

ನಕ್ಸಲೀಯರ ನಾಯಕ ಕೊಂಡಪಲ್ಲಿ ಬಿಡುಗಡೆ

ನಕ್ಸಲೀಯರ ಪ್ರಮುಖ ಸಂಘಟನೆಗಳಲ್ಲಿ ಒಂದಾದ ಪೀಪಲ್ಸ್ ವಾರ್ ಗ್ರೂಪ್(ಪಿಡಬ್ಲ್ಯೂಜಿ) ಸಂಸ್ಥಾಪಕ ಕೊಂಡಪಲ್ಲಿ ಸೀತಾರಾಮಯ್ಯ ಅವರನ್ನು ಆಂಧ್ರ ಪ್ರದೇಶ ಸರಕಾರ ಜನವರಿ 27ರಂದು ಬಿಡುಗಡೆ ಮಾಡಿತು.

ಮಾನವೀಯ ನೆಲೆಯಲ್ಲಿ ಈ ಕ್ರಮ ಕೈಗೊಂಡಿರುವುದಾಗಿ ತೆಲುಗುದೇಶಂ ಸರಕಾರ ಹೇಳಿದೆ.

ರಾಜ್ಯದಲ್ಲಿ ಹೊಸದಾಗಿ ಅಧಿಕಾರಕ್ಕೆ ಬಂದ ಎನ್.ಟಿ ರಾಮರಾವ್ ನೇತೃತ್ವದ ಸರಕಾರ ಹಿಂಸೆಯನ್ನು ತ್ಯಜಿಸಿ ರಾಷ್ಟ್ರದ ಮುಖ್ಯವಾಹಿನಿಯಲ್ಲಿ ಸೇರುವಂತೆ ನಕ್ಸಲೀಯರಿಗೆ ಮನವಿಮಾಡಿದೆ. ಶರಣಾದವರಿಗೆ ಪುನರ್ ವಸತಿ ಸೌಲಭ್ಯ ಕಲ್ಪಿಸುವುದಾಗಿ ಹೇಳಿದೆ. ಸರಕಾರದ ಕರೆಗೆ ಓಗೊಟ್ಟು ಇದುವರೆಗೆ 20 ನಕ್ಸಲೀಯರು ಶರಣಾಗಿದ್ದಾರೆ.

ಕೇರಳ: ಎಸ್‌ಎಫ್‌ಐ ನಾಯಕನ ಹತ್ಯೆ

ಮುಸ್ಲಿಂ ಮೂಲಭೂತವಾದಿ ಮದಾನಿ ನೇತೃತ್ವದಲ್ಲಿ ಜನತಾ ಪ್ರಜಾಸತ್ತಾತ್ಮಕ ಪಕ್ಷ(ಪಿಡಿಪಿ)ದ ಗೂಂಡಾಗಳು ಜನವರಿ 17ರಂದು ತಿರುವನಂತಪುರದಲ್ಲಿ ಎಸ್‌ಎಫ್‌ಐ ನಾಯಕ ಎಂ.ಎ.ಝುಕೀರ್ ಅವರನ್ನು ಅಮಾನುಷವಾಗಿ ಕೊಚ್ಚಿ ಕೊಲೆ ಮಾಡಿದರು.

ಸುಮಾರು 30 ಜನರಿದ್ದ ಪಿಡಿಪಿ ಗುಂಪು ಝುಕೀರ್ ಮನೆ ಮೇಲೆ ದಾಳಿ ಮಾಡಿ ಮನೆಯಲ್ಲಿದ್ದವರ ಮೇಲೆ ಆಕ್ರಮಣ ಮಾಡಿತು. ನಿದ್ರಿಸುತ್ತಿದ್ದ ಝುಕೀರ್ ಗಾಯಗೊಂಡರು. ತಪ್ಪಿಸಿಕೊಂಡು ಓಡಿ ಹೋದರು. ಆದರೂ ಅವರನ್ನು ಬೆನ್ನಟ್ಟಿದ್ದ ದುಷ್ಟರು ಕೊಚ್ಚಿ ಹಾಕಿದರು.

ಇದೇ ಸಮಾಜ ವಿರೋಧಿಗಳ ಗುಂಪು ಸಿಐಟಿಯು ಮತ್ತು ಡಿವೈಎಫ್‌ಐನ ಕೆಲವು ಕಾರ್ಯಕರ್ತರ ಮನೆಗಳ ಮೇಲೆಯೂ ದಾಳಿ ಮಾಡಿ ಚಿನ್ನಾಭರಣಗಳನ್ನು ಲೂಟಿ ಮಾಡಿತು. ದುಷ್ಕೃತ್ಯದ ವಿರುದ್ಧ ಸ್ಥಳೀಯವಾಗಿ ಬೃಹತ್ ಪ್ರದರ್ಶನ ನಡೆಸಿ ಹರತಾಳ ಆಚರಿಸಲಾಯಿತು.

ಶಿಕ್ಷಣಕ್ಕೆ ಕಡಿಮೆ ಹಣ: ನ್ಯಾಯಮೂರ್ತಿ ವ್ಯಥೆ

ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಹಣಕಾಸಿನ ನೆರವು ನೀಡಬೇಕು ಎಂದು ಸುಪ್ರೀಂ ಕೋರ್ಟಿನ ನಿವೃತ್ತ ಮುಖ್ಯನ್ಯಾಯಾಧೀಶ ಎಂ.ಎನ್.ವೆಂಕಟಾಚಲಯ್ಯ ಹೇಳಿದ್ದಾರೆ.

ಜನವರಿ 27ರಂದು ನಡೆದ ಬೆಂಗಳೂರು ವಿಶ್ವವಿದ್ಯಾನಿಲಯದ 30ನೇ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ನ್ಯಾಯಮೂರ್ತಿ ಈ ಸಲಹೆಯನ್ನು ಮಂಡಿಸಿದರು.

ಶಿಕ್ಷಣಕ್ಕಾಗಿ ಭಾರತ ಕೇವಲ ಶೇ ೩.೫ ರಷ್ಟನ್ನು ವೆಚ್ಚ ಮಾಡುತ್ತಿದೆ ಎಂದು ವೆಂಕಟಾಚಲಯ್ಯ ವಿಷಾದಿಸಿದರು.

ಹೆಚ್ಚುತ್ತಿರುವ ಶುಲ್ಕ ಹಾಗೂ ವೆಚ್ಚಗಳಿಂದಾಗಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.ಬಡವರಿಗೆ ಉನ್ನತ ಶಿಕ್ಷಣ ದೊರಕಿಸಿ ಕೊಡುವತ್ತ ಎಲ್ಲರೂ ಗಂಭೀರವಾಗಿ ಆಲೋಚಿಸಬೇಕು ಎಂದು ಅವರು ಸಲಹೆ ಮಾಡಿದರು.

ಸಂಗಾತಿಯ ಸ್ಮರಣೆ

ಸಿಪಿಐ(ಎಂ) ಮುಖಪತ್ರಿಕೆ 'ಲೋಕಲಹರ್'ನಲ್ಲಿ ಪ್ರಕಟವಾಗುತ್ತಿದ್ದ ರಾಜಕೀಯ ವಿಡಂಬನೆ ಅಂಕಣ 'ನಿಶಾನಾ'ದ ಲೇಖಕರಾಗಿದ್ದ ಕಾಮ್ರೇಡ್ ಲೀಲಾಧರ ನಿಧನರಾಗಿ ಜನವರಿ18ಕ್ಕೆ ಒಂದು ವರ್ಷವಾಯಿತು. ಅವರ ಆಯ್ದ ಕೃತಿಗಳ ಸಂಗ್ರಹ "ಹಾತಿ ಪ್ರಧಾನ್‌ಮಂತ್ರಿ ಕೇ ನಾಮ್" ಅನ್ನು ಆ ದಿನ ಬಿಡುಗಡೆ ಮಾಡುವ ಮೂಲಕ ದಿವಂಗತ ಸಂಗಾತಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ನ್ಯಾಷನಲ್ ಬುಕ್ ಸೆಂಟರ್ ಪ್ರಕಟಿಸಿರುವ ಪುಸ್ತಕವನ್ನು ಖ್ಯಾತ ರಂಗ ಕಲಾವಿದ ಹಬೀಬ್ ತನ್ವೀರ್ ಬಿಡುಗಡೆ ಮಾಡು ಮೊದಲ ಪ್ರತಿಯನ್ನು ಲೀಲಾಧರ ಅವರ ಪತ್ನಿ ಶಶಿ ಅವರಿಗೆ ಅರ್ಪಿಸಿದರು. ಜನವಾದಿ ಲೇಖಕ ಸಂಘ ಸಮಾರಂಭವನ್ನು ಏರ್ಪಡಿಸಿತ್ತು.

15ನೇ ಮಹಾಧಿವೇಶನದತ್ತ....

ಸಿಪಿಐ(ಎಂ) ರಾಜ್ಯ ಸಮ್ಮೇಳನಗಳು

ದೆಹಲಿ:

ಸಿಪಿಐ(ಎಂ) ದೆಹಲಿ ರಾಜ್ಯ 8ನೇ ಸಮ್ಮೇಳನ ಜನವರಿ 11ರಿಂದ 13ರವರೆಗೆ ನಡೆಯಿತು. 123 ಪ್ರತಿನಿಧಿಗಳು ಮತ್ತು ವೀಕ್ಷಕರು ದೆಹಲಿ, ಗಾಜಿಯಾಬಾದ್ ಹಾಗೂ ಫರೀದಾಬಾದ್‌ಗಳಿಂದ ಬಂದಿದ್ದರು.

ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಎಸ್.ಬಿ. ಭಾರದ್ವಾಜ್ ಪಕ್ಷದ ಧ್ವಜಾರೋಹಣ ಮಾಡುವುದರೊಂದಿಗೆ ಕಲಾಪಗಳು ಆರಂಭವಾದವು. ಪಾಲಿಟ್ ಬ್ಯೂರೋ ಸದಸ್ಯ ಪ್ರಕಾಶ್‌ಕಾರತ್ ಸಮ್ಮೇಳನವನ್ನು ಉದ್ಘಾಟಿಸಿದರು.

ರಾಜ್ಯಸಮಿತಿ ಕಾರ್ಯದರ್ಶಿ ಜೋಗೇಂದ್ರ ಶರ್ಮಾ ವರದಿಯನ್ನು ಮಂಡಿಸಿದರು. ಜನರನ್ನು ಎದುರಿಸುತ್ತಿರುವ ನಿರ್ದಿಷ್ಟ ಸಮಸ್ಯೆಗಳ ಆಧಾರದಲ್ಲಿ ಸ್ಥಳೀಯ ಹೋರಾಟಗಳನ್ನು ರೂಪಿಸಬೇಕೆಂದು ಚರ್ಚೆಯಲ್ಲಿ ಪಾಲ್ಗೊಂಡ 39 ಜನರ ಪೈಕಿ ಬಹುತೇಕ ಮಂದಿ ಅಭಿಪ್ರಾಯಪಟ್ಟರು.

ಪಕ್ಷದ ಪ್ರಧಾನ ಕಾರ್ಯದರ್ಶಿ ಹರಿಕಿಶನ್ ಸಿಂಗ್ ಸುರ್ಜಿತ್ ಸಮಾರೋಪ ಭಾಷಣ ಮಾಡಿದರು. ಸಮ್ಮೇಳನದ ಕೊನೆಯದಿನ ಅಜ್ಮೀರಿಗೇಟ್ ಬಳಿ ನಡೆದ ಸಾರ್ವಜನಿಕ ಸಭೆಯಲ್ಲಿ 3000ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಜೋಗೇಂದ್ರ ಶರ್ಮಾ ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

ಹಿಮಾಚಲ ಪ್ರದೇಶ:

ಪಕ್ಷದ ಹಿಮಾಚಲ ಪ್ರದೇಶ ರಾಜ್ಯ 9ನೇ ಸಮ್ಮೇಳನ ಕಾಂಗ್ರಾ ಜಿಲ್ಲೆಯ ನಗ್ರೊತಾ ಭಗ್ವಾನ್‌ನಲ್ಲಿ ಜನವರಿ 14 ಮತ್ತು 15ರಂದು ನಡೆಯಿತು. ಆರಂಭದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಗಣನೀಯ ಸಂಖ್ಯೆಯ ಮಹಿಳೆಯರು ಸೇರಿದರೆ ಸಾವಿರಾರು ಜನರು ಭಾಗವಹಿಸಿದ್ದರು.

ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಸಮ್ಮೇಳನವನ್ನು ಉದ್ಘಾಟಿಸಿದರು. ರಾಜ್ಯ ಕಾರ್ಯದರ್ಶಿ ಮೋಹರ್ ಸಿಂಗ್ ವರದಿಯನ್ನು ಮಂಡಿಸಿದರು. 105 ಪ್ರತಿನಿಧಿಗಳು ಹಾಗೂ 16 ವೀಕ್ಷಕರು ಸಮ್ಮೇಳನಕ್ಕೆ ಬಂದಿದ್ದರು.

ಮೋಹರ್ ಸಿಂಗ್ ರಾಜ್ಯ ಸಮಿತಿ ಕಾರ್ಯದರ್ಶಿಯಾಗಿ ಸಮ್ಮೇಳನದಲ್ಲಿ ಮತ್ತೆ ಆಯ್ಕೆಗೊಂಡರು.

ಸಾಮೂಹಿಕ ಕ್ರಾಂತಿಕಾರಿ ಪಕ್ಷ ಕಟ್ಟುವತ್ತ.....

ರಿಸಲು ಪಕ್ಷ ತನ್ನ ಸೈದ್ಧಾಂತಿಕ ಪ್ರಚಾರವನ್ನು ಮಾರ್ಕ್ಸ್‌ವಾದ- ಲೆನಿನ್ ವಾದವನ್ನು ಭಾರತದ ಪರಿಸ್ಥಿತಿಗಳಿಗೆ ಸೃಜನಾತ್ಮಕವಾಗಿ ಅನ್ವಯಿಸುವ ಮೂಲಕ ಅದರ ರಕ್ಷಣೆಯ ಕೆಲಸವನ್ನು ಹೆಚ್ಚಿಸಬೇಕು. ಅದೇ ವೇಳೆಗೆ ಎಲ್ಲಾ ಧೋರಣೆಯ ಪ್ರಶ್ನೆಗಳ ಬಗ್ಗೆ, ಸಾಮಾಜಿಕ ಬೆಳವಣಿಗೆಗಳ ಬಗ್ಗೆ ಮಾರ್ಕ್ಸ್‌ವಾದೀ ತಿಳಿವನ್ನು ಪ್ರಚಾರ ಮಾಡಬೇಕು; ಸ್ವತಂತ್ರ ರಾಜಕೀಯ ಪ್ರಚಾರ ನಡೆಸುವುದನ್ನು ಭರದಿಂದ ನಡೆಸಬೇಕು; ಹೆಚ್ಚುತ್ತಿರುವ ಜಂಟಿ ಚಟುವಟಿಕೆಗಳು ಜಂಟಿ ವೇದಿಕೆಗಳಿಂದಾಗಿ ಕಮ್ಯುನಿಸ್ಟ್ ಪ್ರಚಾರದ ಈ ಸ್ವತಂತ್ರ ಚಟುವಟಿಕೆಗಳಿಗೆ ಅಡ್ಡಿ ಬರಬಾರದು; ಈ ಕರ್ತವ್ಯ ನೆರವೇರಿಸಲು ಸೈದ್ಧಾಂತಿಕ ಕೆಲಸ ಮತ್ತು ಸಂಘಟನಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು 14ನೇ ಮಹಾಧಿವೇಶನದ ಸಂಘಟನಾ ವರದಿ ಹೇಳಿತ್ತು.

ಗುರಿಸಾಧನೆಗೆ ತಕ್ಕಂತಹ ಸಂಘಟನೆ

14ನೇ ಮಹಾಧಿವೇಶನದ ಸಂಘಟನಾ ವರದಿಯ ಕೊನೆಯ ಪರಿಚ್ಛೇದ (109ನೇ ಪರಿಚ್ಛೇದ) ಈ ಪ್ರಧಾನ ಕರ್ತವ್ಯಗಳನ್ನು ನಿರ್ವಹಿಸಬೇಕು ಎಂದು ಇಡೀ ಪಕ್ಷಕ್ಕೆ ಕರೆ ನೀಡಿತು. ದೊಡ್ಡ-ದೊಡ್ಡ ಹಾಗೂ ವ್ಯಾಪಕ ಸಾಮೂಹಿಕ ಹೋರಾಟಗಳಿಗೆ ನೇತೃತ್ವ ನೀಡುವುದರೊಂದಿಗೆ ಪಕ್ಷದ ಸಂಘಟನೆಯನ್ನು ಕಟ್ಟಿ ವಿಸ್ತರಿಸಲು, ದೊಡ್ಡ ಪ್ರಮಾಣದಲ್ಲಿ ಅದರ ನೀತಿಗಳನ್ನು ಹಾಗೂ ಸಿದ್ಧಾಂತಗಳನ್ನು ಹರಡಲು ಸಾಧ್ಯವಾಗುವಂತೆ ಪಕ್ಷದ ಕಾರ್ಯನಿರ್ವಹಣೆಯನ್ನು ಪಕ್ವಗೊಳಿಸಬೇಕು. ಇದು ಜನಗಳಿಗೆ ನಾಲ್ಕುವರೆ ದಶಕಗಳ ಬಂಡವಾಳಶಾಹಿ -ಭೂಮಾಲಕ ದಮನದಿಂದ ಹೊರಗೆ ಸಿಡಿದು ಬಂದು ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಮುನ್ನಡೆಯಲು ನೆರವಾಗುತ್ತದೆ ಎಂದ ಈ ಪರಿಚ್ಛೇದ "ಮಾರ್ಕ್ಸ್‌ವಾದ- ಲೆನಿನ್‌ವಾದಕ್ಕೆ ಸದಾಬದ್ಧವಾಗಿದ್ದು ತನ್ನ ನಿರಂತರ ಹೋರಾಟಗಳ ಹಾಗೂ ಜನಗಳ ನಡುವಿನ ಕೆಲಸಗಳ ಮೂಲಕ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ದಾರಿತೋರುವ ಶಕ್ತಿ ತಾನೆಂದು ತೋರಿಸಿಕೊಡ ಬೇಕಾಗಿದೆ. ಈ ಗುರಿಸಾಧನೆಗೆ ಯೋಗ್ಯವಾದ ಒಂದು ಸಂಘಟನೆಯನ್ನು ಕಟ್ಟೋಣ" ಎಂದು ಕರೆ ನೀಡಿತ್ತು.

ಕರ್ನಾಟಕದಲ್ಲಿ ಇಂತಹ ಸಂಘಟನೆಯನ್ನು ಕಟ್ಟಿದ್ದೇವೆಯೇ? ಈ ದಿನಗಳಲ್ಲಿ ಈ ಬಗ್ಗೆ ವಿಮರ್ಶೆ ನಡೆಯುತ್ತಿದೆ.

ಸಂಸದೀಯ ಚಟುವಟಿಕೆಗಳು ಮತ್ತು ಪಕ್ಷ

"ಪಕ್ಷದಲ್ಲಿ ಹರಡುತ್ತಿರುವ ಇನ್ನೊಂದು ಮಾರ್ಗಚ್ಯುತಿಯೆಂದರೆ ಸಂಸದೀಯ ಚಟುವಟಿಕೆಗಳಲ್ಲಿ ಮುಳುಗಿರುವುದು ಹಾಗೂ ಅದರೊಡನೆ ಬರುವ ಹೊಲಸು ಸಮಯಸಾಧಕತನ. ದುರ್ಬಲ ರಾಜ್ಯಗಳಲ್ಲೂ ಪಕ್ಷದ ಸಮಿತಿಗಳು ಚುನಾವಣೆಗಳಲ್ಲಿ ಹೋರಾಟದ ಬಗ್ಗೆ ಉತ್ಪ್ರೇಕ್ಷಿತ ಮಾತುಗಳನ್ನಾಡುವುದು, ಅಭ್ಯರ್ಥಿಗಳು ಹಾಗೂ ಸ್ಥಾನಗಳ ಆಯ್ಕೆ ಬಗ್ಗೆ ಕಿತ್ತಾಟ ಸಾಮಾನ್ಯ ಘಟನೆಗಳಾಗಿವೆ. ನಮ್ಮ ಸರಕಾರಗಳಿರುವಲ್ಲೂ, ಕಮ್ಯುನಿಸ್ಟ್ ಪ್ರಜ್ಞೆಯಲ್ಲಿ ಸವೆತ ಕಂಡು ಬಂದಿದೆ. ನಗರಸಭೆಗಳು, ಜಿಲ್ಲಾ ಪರಿಷತ್ತುಗಳು ಅಥವಾ ವಿಧಾನಸಭೆಗಳಲ್ಲಿ ಚುನಾಯಿತ ಸ್ಥಾನಗಳಿಗಾಗಿ ಪರದಾಟ ಗುಂಪುಗಾರಿಕೆಗೆ ಎಡೆ ಮಾಡಿಕೊಡುತ್ತದೆ. ವೈಯಕ್ತಿಕ ಮೇಲ್ಮೆ ಹಾಗೂ ಪಟ್ಟಭದ್ರ ಹಿತಾಸಕ್ತಿ ಸಾಮೂಹಿಕ ಕಾರ್ಯನಿರ್ವಹಣೆಯನ್ನು ಹೊಲಸುಗೆಡಿಸುತ್ತದೆ. ಇದು ಪಕ್ಷದೊಳಗಿನ ಹೋರಾಟಗಳ ಪ್ರಶ್ನೆಗಳಾಗುತ್ತದೆ. ಪಶ್ಚಿಮ ಬಂಗಾಳ ಹಾಗೂ ಕೇರಳಗಳಲ್ಲಿ ಇಂತಹ ಪ್ರವೃತ್ತಿ ಕಂಡು ಬಂದಿದೆ. ಪಕ್ಷದ ನಿರ್ಣಯಗಳನ್ನು ಉಲ್ಲಂಘಿಸುವುದೂ ಕಂಡು ಬರುತ್ತದೆ... ಕೆಲವು ಜಿಲ್ಲೆಗಳಲ್ಲಿ ಹಾಗೂ ಸಮಿತಿಗಳಲ್ಲಿ ಚುನಾವಣೆಗಳಿಗೆ ಮಾತ್ರ ಆದ್ಯತೆ. ಇತರ ಸಂಘಟನಾ ಕೆಲಸಗಳನ್ನು ನಿರ್ಲಕ್ಷಿಸಲಾಗುತ್ತದೆ. ಚುನಾವಣೆಗಳಲ್ಲಿ ಅಭ್ಯರ್ಥಿ ಹಾಗೂ ಸದಸ್ಯರು ಜನಗಳಿಂದ ಸಾಕಷ್ಟು ಹಣ ಸಂಗ್ರಹಿಸುತ್ತಾರೆ. ಆದರೆ ಪಕ್ಷದ ಸಂಘಟನೆಗೆ ಹಾಗೂ ಪೂರ್ಣಾವಧಿ ಕಾರ್ಯಕರ್ತರಿಗೆ ಹಣ ಸಂಗ್ರಹಿಸಬೇಕಾದರೆ ಆ ಮುಖಂಡರಿಗೆ ಸಂಪನ್ಮೂಲಗಳು ಸಿಗುವುದಿಲ್ಲ, ಚುನಾಯಿತ ಎಂ.ಎಲ್.ಎ.ಗಳು ಅಥವಾ ಕಾರ್ಪೊರೇಟರ್‌ಗಳು ಪಕ್ಷ ನಿರ್ದಿಷ್ಟ ಪಡಿಸಿದ ಲೆವಿ ತೆರಲು ಹಿಂದೇಟು ಹಾಕುತ್ತಾರೆ. ಇನ್ನೂ ಕೆಟ್ಟ ಸಂಗತಿಯೆಂದರೆ ಚುನಾವಣಾ ಕೆಲಸಗಳನ್ನು ಎಂದೂ ಕ್ರೋಢೀಕರಿಸುವುದಿಲ್ಲ, ಚುನಾವಣಾ ಸಮಯದಲ್ಲಿ ಒಟ್ಟುಗೂಡಿಸಿದವರನ್ನು ಸಾಮೂಹಿಕ ಸಂಘಟನೆಗಳಿಗೆ ಅಥವಾ ಪಕ್ಷದ ಪ್ರಭಾವದೊಳಗೆ ತರುವುದಿಲ್ಲ, ಈ ಮಾರ್ಗಚ್ಯುತಿಗೆ ಸಂಬಂಧಪಟ್ಟಂತೆ ಉದಾರವಾದ ಹಾಗೂ ಸುಧಾರಣಾವಾದಿ ದೃಷ್ಟಿಯನ್ನು ಕೊನೆಗೊಳಿಸಬೇಕು."

-(ಸಂಘಟನಾ ವರದಿಯ ಪರಿಚ್ಛೇದ 100)

ಗಮನಿಸಿ

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು 1 ಫೆಬ್ರವರಿ 1995ರಿಂದ ಫ್ಯಾಕ್ಸ್ ಸೌಲಭ್ಯವನ್ನು ಹೊಂದಿರುತ್ತದೆ.

ಫ್ಯಾಕ್ಸ್ ನಂಬರ್: 2236462

ಪೂರ್ಣಾವಧಿ ಕಾರ್ಯಕರ್ತರು ಮತ್ತು ಪಕ್ಷ

"ಪೂರ್ಣಾವಧಿ ಕಾರ್ಯಕರ್ತರ ಸ್ಥಾನಮಾನ ಸ್ಥಿತಿ ಹಾಗೂ ಬೆಳವಣಿಗೆ ಪಕ್ಷದ ಕಾರ್ಯಕರ್ತರನ್ನು ಕುರಿತಾದ ನೀತಿಯ ಒಂದು ಮಹತ್ವದ ಅಂಶ. ನೂರಾರು ಇಂತಹ ಪೂರ್ಣಾವಧಿ ಕಾರ್ಯಕರ್ತರು ಕಷ್ಟಕರ ಹಣಕಾಸು ಪರಿಸ್ಥಿತಿಗಳಲ್ಲಿ ಸಮರ್ಪಣಾ ಭಾವದಿಂದ ಪಕ್ಷಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಸಾಲ್ಕಿಯಾ ಪ್ಲೀನಂ ನಂತರ ಕೆಲವು ರಾಜ್ಯ ಸಮಿತಿಗಳು ಅವರ ಭೌತಿಕ ಅಗತ್ಯಗಳ ಕಡೆಗೆ ಹಾಗೂ ಅವರಿಗೆ ಸ್ವಲ್ಪ ಕನಿಷ್ಠ ಪಕ್ಷದ ಶಿಕ್ಷಣ ನೀಡುವತ್ತ ಸ್ವಲ್ಪ ಗಮನ ಹರಿಸಿವೆ. ಆಂಧ್ರ ಪ್ರದೇಶ ಈ ವಿಷಯದಲ್ಲಿ ಒಂದು ತರ್ಕಬದ್ಧ ವೇತನ ವ್ಯವಸ್ಥೆ ರೂಪಿಸಿಕೊಂಡ ಒಂದು ರಾಜ್ಯ. ಆದರೆ ದುರ್ಬಲ ರಾಜ್ಯಗಳಲ್ಲಿ ಪರಿಸ್ಥಿತಿ ಈಗಲೂ ಕೂಡಾ ಶೋಚನೀಯ. ಪೂರ್ಣಾವಧಿ ಕಾರ್ಯಕರ್ತರಿಗೆ ವೇತನವೆಂದು ಅಲ್ಪ ಹಣ ಕೊಡಲಾಗುತ್ತದೆ. ಅಥವಾ ಸಾಮೂಹಿಕ ಸಂಘಟನೆಗಳ ಮೂಲಕವೋ ಅಥವಾ ಪಕ್ಷದ ಜನಗಳಿಂದಲೋ ಅಷ್ಟಿಷ್ಟು ಹಣ ಎತ್ತುವ ದಾರಿಯನ್ನು ತಾವೇ ಕಂಡುಕೊಳ್ಳಲು ಬಿಡಲಾಗುತ್ತದೆ. ಕೆಲವು ಸಮಿತಿಗಳು ಪಟ್ಟಣಗಳಲ್ಲೂ ಅವಿವಾಹಿತ ಪೂರ್ಣಾವಧಿ ಕಾರ್ಯಕರ್ತರಿಗೆ ರೂ 200-300, ವಿವಾಹಿತ ಪೂರ್ಣಾವಧಿ ಕಾರ್ಯಕರ್ತರಿಗೆ ರೂ. 500 ಕೊಡುತ್ತಿರುವುದಾಗಿ ವರದಿ ಮಾಡಿವೆ. ಪಕ್ಷದ ಬಗ್ಗೆ ಅಷ್ಟೆಲ್ಲಾ ಸಮರ್ಪಣಾ ಭಾವನೆಯಿದ್ದರೂ ಬಹಳಷ್ಟು ಜನ ಪೂರ್ಣಾವಧಿ ಕಾರ್ಯಕರ್ತರಾಗಿ ಬರುತ್ತಿಲ್ಲವೇಕೆ, ಬಹಳ ದಿನ ಉಳಿಯುವುದಿಲ್ಲ ಏಕೆ ಎಂಬುದಕ್ಕೆ ಭಾಗಶಃ ವಿವರಣೆ ಇಲ್ಲಿದೆ. ಸಂಪನ್ಮೂಲಗಳ ಸತತ ಕೊರತೆಯಿದ್ದರೂ ವೇತನಗಳನ್ನು ಹೆಚ್ಚಿಸಲು ಸಾಕಷ್ಟು ಅವಕಾಶಗಳಿವೆ. ಹಿಂದೆ ಹೇಳಿದಂತೆ ಸಮ್ಮೇಳನಗಳಿಗೆ ಚುನಾವಣೆಗಳಿಗೆ ಸಾವಿರ- ಸಾವಿರ ರೂಪಾಯಿಗಳನ್ನು, ಲಕ್ಷ ರೂಪಾಯಿಗಳನ್ನು ಸಂಗ್ರಹಿಸುವ ಪಕ್ಷದ ಸಮಿತಿಗಳಿವೆ. ಆದರೆ ಅವು ಪೂರ್ಣಾವಧಿ ಕಾರ್ಯಕರ್ತರಿಗೆ ಹಾಗೂ ಸಂಘಟನಾ ಕೆಲಸಕ್ಕೆ ಒಂದು ನಿಧಿಯನ್ನು ಮಾತ್ರ ರಚಿಸುವುದಿಲ್ಲ. ರಾಜ್ಯ ಸಮಿತಿಗಳು ಈ ಸಮಸ್ಯೆಯನ್ನು ಇನ್ನು ಮುಂದೆಯಾದರೂ ನಿರ್ಲಕ್ಷಿಸಲಬಾರದು."

- ಸಂಘಟನಾವಧಿಯ 102ನೇ ಪರಿಚ್ಛೇದದಿಂದ

XV ನೇ

ಸಿಪಿಐ(ಎಂ) ಮಹಾಧಿವೇಶನ

ಚಂಡೀಗಢ, ಏಪ್ರಿಲ್ 3-8, 1995

ದೇಶದ ದುಡಿಯುವ ಜನಗಳ ಪ್ರಧಾನ ಪಕ್ಷ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತನ್ನ 15ನೇ ಮಹಾಧಿವೇಶನಕ್ಕೆ ಸಿದ್ಧಗೊಳ್ಳುತ್ತಿದೆ. ಮಹಾಧಿವೇಶನಕ್ಕೆ ಪೂರ್ವ ಭಾವಿ ಸಿದ್ಧತೆಯಾಗಿ ರಾಜ್ಯ ಸಮ್ಮೇಳನಗಳು, ಇವಕ್ಕೆ ಮೊದಲು ಶಾಖೆಗಳಿಂದ ಹಿಡಿದು ಪ್ರದೇಶ, ತಾಲ್ಲೂಕು,ಜಿಲ್ಲಾ ಸಮ್ಮೇಳನಗಳು ನಡೆಯುತ್ತಿವೆ. ಮೂರು ವರ್ಷಗಳ ಹಿಂದೆ 1992ರ ಜನವರಿ 3-9ರವರೆಗೆ ಮದ್ರಾಸ್‌ನಲ್ಲಿ ನಡೆದ 14ನೇ ಮಹಾಧಿವೇಶನದ ನಂತರ ಪಕ್ಷದ ಮುನ್ನಡೆಯ ಸಮೀಕ್ಷೆ ನಡೆಯುತ್ತಿರುವ ಈ ಸಮಯದಲ್ಲಿ ಆ ಮಹಾಧಿವೇಶನ ಪಕ್ಷದ ಮುಂದಿಟ್ಟ ಗುರಿಯೇನು ಎಂದು ಮತ್ತೊಮ್ಮೆ ನೆನಪಿಸಿಕೊಳ್ಳಲಾಗುತ್ತಿದೆ. ಪಕ್ಷದ ಸಂಘಟನೆ ಹಾಗೂ ಕರ್ತವ್ಯಗಳ ಬಗ್ಗೆ 14ನೇ ಮಹಾಧಿವೇಶನ ಅಂಗೀಕರಿಸಿದ ವರದಿಯ ಕೊನೆಯ ಅಧ್ಯಾಯ ("ಪ್ರಸ್ತುತ ಸಂದರ್ಭದಲ್ಲಿ ಕರ್ತವ್ಯಗಳು"-ಪರಿಚ್ಛೇದ 105ರಿಂದ 109) ಏನು ಹೇಳಿತ್ತು ನೋಡಿ.

ಸಾಮೂಹಿಕ ಕ್ರಾಂತಿಕಾರಿ ಪಕ್ಷ ಕಟ್ಟುವತ್ತ......



ಮದ್ರಾಸ್ ಮಹಾಧಿವೇಶನ ಏನು ಹೇಳಿತ್ತು?

ಸಿಪಿಐ(ಎಂ) 14ನೇ ಮಹಾಧಿವೇಶನ ಸಂಘಟನಾ ವರದಿಯ 105ನೇ ಪರಿಚ್ಛೇದ ಪಕ್ಷ ಮೂರು ಪ್ರಧಾನ ವಲಯಗಳಲ್ಲಿ ಹೆಚ್ಚಿನ ಒತ್ತು ನೀಡಬೇಕೆಂದು ಹೇಳಿತ್ತು. ಅವೆಂದರೆ ಸಾಮೂಹಿಕ ಹೋರಾಟಗಳನ್ನು ಹಂತಹಂತವಾಗಿ ಹೆಚ್ಚಿಸುವುದು, ಪಕ್ಷ ಕಟ್ಟುವುದೊಂದು ಪ್ರಮುಖ ಕೆಲಸ ಎಂದು ಮತ್ತೆ ಅದಕ್ಕೆ ಆದ್ಯತೆ ನೀಡುವುದು ಹಾಗೂ ಸೈದ್ಧಾಂತಿಕ ಕೆಲಸವನ್ನು ಎತ್ತರಿಸಿ ಪಕ್ಷದ ದಾರಿ ಹಾಗೂ ನೀತಿಗಳನ್ನು ಸ್ವತಂತ್ರವಾಗಿ ಜನರ ಮುಂದಿಡುವುದು. ಒಂದು ಸಾಮೂಹಿಕ ಕ್ರಾಂತಿಕಾರಿ ಪಕ್ಷ ಕಟ್ಟಲು ಈ ಮೂರು ಕರ್ತವ್ಯಗಳು ಅನಿವಾರ್ಯ ಎಂದು ಈ ವರದಿ ಹೇಳಿತ್ತು.

ಸಾಮೂಹಿಕ ಹೋರಾಟಗಳ ಮಹತ್ವ

106ನೇ ಪರಿಚ್ಛೇದ ಸಾಮೂಹಿಕ ಹೋರಾಟಗಳ ಮಹತ್ವವನ್ನು ವಿವರಿಸುತ್ತಾ ಅಂದು ದೇಶ ಇದ್ದ ಸಂಧಿಗ್ಧ ಸ್ಥಿತಿಯಲ್ಲಿ ಪಕ್ಷ ಕವಲು ದಾರಿಯಲ್ಲಿದೆ ಎಂದಿತ್ತು. ಒಂದೋ ಮುಂದಕ್ಕೆ ನೆಗೆಯಬೇಕು ಇಲ್ಲವೇ ತ್ವರಿತ ಗತಿಯಿಂದ ಸಂಭವಿಸುತ್ತಿರುವ ಘಟನೆಗಳ ಹಿಂದೆ ಬೀಳಬೇಕು-ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಬೇಕಾದ ಸ್ಥಿತಿಯಿದೆ ಎಂದಿತ್ತು. ಬಂಡವಾಳಶಾಹಿ-ಭೂಮಾಲೀಕ ವ್ಯವಸ್ಥೆಯನ್ನು ಆವರಿಸಿರುವ ಬಿಕ್ಕಟ್ಟು ಸರ್ವಾಧಿಕಾರಶಾಹಿ ಶಕ್ತಿಗಳು ಹಾಗೂ ಕೋಮುವಾದಿ ಶಕ್ತಿಗಳನ್ನು ಉತ್ಪತ್ತಿ ಮಾಡಿದೆ. ಈ ಶಕ್ತಿಗಳನ್ನು ಹಿಮ್ಮೆಟ್ಟಿಸಬೇಕಾಗಿದೆ. ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯವನ್ನು ಒಂದು ಸಮರ್ಥ ಅಖಿಲ ಭಾರತ ರಚನೆಯಾಗಿ ಬೆಳೆಸಬೇಕಾಗಿದೆ. ಪ್ರತಿಕೂಲ ಅಂತರ್ರಾಷ್ಟ್ರೀಯ ಪರಿಸ್ಥಿತಿ ದೇಶದ ಮೇಲೆ ಯಾವುದೇ ದುಷ್ಪರಿಣಾಮ ಬೀರದಂತೆ ತಡೆಯಬೇಕಾಗಿದೆ ಮತ್ತು ಭಾರತದ ಮೇಲೆ ಗುರಿಯಿಟ್ಟಿರುವ ಸಾಮ್ರಾಜ್ಯಶಾಹಿ ಅಕ್ರಮಣವನ್ನು ವಿಫಲಗೊಳಿಸಬೇಕಾಗಿದೆ. ಅವೆಲ್ಲಾ ಸಾಧ್ಯವಾಗಬೇಕಾದರೆ ಪಕ್ಷ ಹೆಚ್ಚಿನ ಪ್ರಯತ್ನ ಮಾಡಬೇಕಾಗುತ್ತದೆ. ಹೆಚ್ಚಿನ ಪ್ರಯತ್ನವೆಂದರೆ ಸಾಮೂಹಿಕ ಆಂದೋಲನವನ್ನು ಕಟ್ಟಿ ಬೆಳೆಸುವುದು, ವರ್ಗ ಶಕ್ತಿಗಳಲ್ಲಿ ಮರು ಸಂಯೋಜನೆ ತರಬಲ್ಲಂತಹ ಹೋರಾಟಗಳನ್ನು ಕಟ್ಟಿ ಬೆಳೆಸುವುದು. ಈ ಮಹತ್ವ ಪೂರ್ಣ ಕೊಂಡಿಯನ್ನು ಹಿಡಿದರೆಮಾತ್ರವೇ ಪಕ್ಷದ ಸಂಘಟನೆಯೊಳಗಿನ ಹೆಚ್ಚಿನ ವಿಕೃತಿಗಳನ್ನು ಹಾಗೂ ದೇಶದ ಮಿಕ್ಕ ಭಾಗಗಳಲ್ಲಿ ಪಕ್ಷದ ಅಸಮಾನ ಬೆಳವಣಿಗೆಯನ್ನು ಸರಿ ಮಾಡಿಕೊಳ್ಳುವುದು ಸಾಧ್ಯ ಎಂದು ಈ ಪರಿಚ್ಛೇದದಲ್ಲಿ ಹೇಳಲಾಗಿತ್ತು.

ಪಕ್ಷ, ಪಕ್ಷದ ನೇತೃತ್ವದಲ್ಲಿನ ಸಾಮೂಹಿಕ ಸಂಘಟನೆಗಳು, ಪಕ್ಷದ ಪ್ರಭಾವವಿರುವ ಸಂಘಟನೆಗಳು ದೊಡ್ಡ ಪ್ರಮಾಣದಲ್ಲಿ ಜನಗಳ ನಡುವೆ ಹೋಗಲೇಬೇಕು. ಕಾರ್ಮಿಕ ವರ್ಗ ಮತ್ತು ರೈತಾಪಿ ವರ್ಗದ ನಡುವೆ, ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಬಡವರ ನಡುವೆ, ಯುವಜನ, ಮಹಿಳೆಯರು, ವಿದ್ಯಾರ್ಥಿಗಳು, ಮಧ್ಯಮವರ್ಗಗಳು ಹಾಗೂ ಬುದ್ಧಿಜೀವಿಗಳ ನಡುವೆ ಹೋಗಬೇಕು ಎಂದು ಅದು ಹೇಳಿತ್ತು. ಅಭೂತಪೂರ್ವ ಆರ್ಥಿಕ ಬಿಕ್ಕಟ್ಟು ಮತ್ತು ಕಾಂಗ್ರೆಸ್(ಐ) ಸರಕಾರದ ಸಾಮ್ರಾಜ್ಯಶಾಹಿ ಪರ ಒಲವು ಆಳಗೊಳ್ಳುತ್ತಿದ್ದಂತೆ ಪ್ರತಿಯೊಂದು ವಿಭಾಗದ ಜನಗಳ ಮೇಲೂ ಪ್ರತಿಕೂಲ ಪರಿಣಾಮ ಬೀಳುತ್ತಿದೆ- ಗುತ್ತೇದಾರಿಗಳು, ಭೂಮಾಲಿಕರು, ಭ್ರಷ್ಟ ಕಾಂಟ್ರಾಕ್ಟರುಗಳು ಹಾಗೂ ಶ್ರೀಮಂತ ವ್ಯಾಪಾರಿಗಳ ಒಂದು ಸಣ್ಣ ವಿಭಾಗದ ಮೇಲಷ್ಟೇ ಪ್ರತಿಕೂಲ ಪರಿಣಾಮ ಬೀರಲಿಕ್ಕಿಲ್ಲ. ಆದ್ದರಿಂದ ಪಕ್ಷ ಪ್ರತಿಯೊಂದು ರಾಜ್ಯದಲ್ಲೂ ದೇಶದ ಪ್ರತಿಯೊಂದು ಭಾಗದಲ್ಲೂ ಜನಗಳ ಹೋರಾಟಗಳನ್ನು ಸಂಘಟಿಸಿ ಅವಕ್ಕೆ ನೇತೃತ್ವ ನೀಡಿ, ಅವರು ಸ್ವಯಂ ಸ್ಫೂರ್ತಿಯಿಂದ ಎದ್ದು ನಿಂತಲ್ಲಿ ಮಧ್ಯ ಪ್ರವೇಶಿಸಿ ಹಾಗೂ ಸರ್ವಸಾಮಾನ್ಯ ಬೇಡಿಕೆಗಳಿಗಾಗಿ ಹೋರಾಟ ನಡೆಸಲು ಸಿದ್ಧವಿರುವವರ ಜತೆ ಸೇರಿ ಜನತೆಯ ಹಿತಾಸಕ್ತಿಗಳ ಪ್ರತಿ ಪಾದಕರಾಗಿ ಮೂಡಿ ಬರಬೇಕು ಎಂಬ ಒಂದು ಕರ್ತವ್ಯನ್ನು ಈ ವರದಿ ಪಕ್ಷದ ಮುಂದಿಟ್ಟಿತು.

ಪಕ್ಷ ಕಟ್ಟುವ ಆದ್ಯತೆಯ ಕೆಲಸ

107ನೇ ಪರಿಚ್ಛೇದ ಪಕ್ಷ ಕಟ್ಟುವುದು ಪ್ರಥಮ ಆದ್ಯತೆಯ ಕೆಲಸವಾಗಬೇಕು,ಅದು ಇಡೀ ಪಕ್ಷದ ಪ್ರಜ್ಞೆಯ ಭಾಗವಾಗಬೇಕು ಎಂದಿತ್ತು. ಸಾಮೂಹಿಕ ಹೋರಾಟಗಳು, ಸಾಮೂಹಿಕ ಆಂದೋಲನಗಳು ವಿಸ್ತಾರಗೊಂಡಂತೆ ಲಕ್ಷಾಂತರ ದುಡಿಯುವ ಜನ ಪಕ್ಷದತ್ತ ಹಾಗೂ ಸಾಮೂಹಿಕ ಸಂಘಟನೆಗಳತ್ತ ಆಕರ್ಷಿತರಾಗುತ್ತಾರೆ. ಆ ಸಮರಶೀಲ ಅನುಯಾಯಿಗಳಿಂದ ಪಕ್ಷವನ್ನು ಕಟ್ಟಲು ಸಂಘಟನೆ ಸಜ್ಜಾಗಿರಬೇಕು. ಎಲ್ಲಾ ಹಂತಗಳಲ್ಲಿನ ಪಕ್ಷದ ಸಮಿತಿಗಳು ಸತತವಾಗಿ ಸದಸ್ಯರನ್ನು ಸೇರಿಸಿಕೊಳ್ಳಲು ಮೂಲ ಘಟಕವನ್ನು ಸಕ್ರಿಯಗೊಳಿಸಿ ಅವರಿಗೆ ತರಬೇತಿ, ಶಿಕ್ಷಣ ನೀಡಲು, ಪಕ್ಷದೊಳಗಿನ ಪ್ರಜಾಪ್ರಭುತ್ವದ ಮೇಲೆ ವಿಶೇಷ ಒತ್ತು ನೀಡುತ್ತಾ ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ಎಲ್ಲಾ ಹಂತಗಳಲ್ಲೂ ಬಲಗೊಳಿಸಲು ವಿಶೇಷ ಶ್ರಮವಹಿಸಬೇಕು, ಪಕ್ಷ ನಿರಂತರವಾಗಿ ದುಡಿಯು[ವ] ಜನಗಳ ಹೊಸ ಹೊಸ ವಿಭಾಗಗಳನ್ನು ತಲು[ಪಿ] ಸಂಘಟನಾ ಅವಕಾಶವನ್ನೂ ಮತ್ತು ಪ್ರಭಾ[ವ]ವನ್ನೂ ವಿಸ್ತರಿಸಿಕೊಳ್ಳುತ್ತಿರಬೇಕು ಎಂಬುದು [ಈ] ಪರಿಚ್ಛೇದ ಪಕ್ಷದ ಮುಂದಿಟ್ಟಿದ್ದ ಇನ್ನೊಂ[ದು] ಕರ್ತವ್ಯ.

ಸೈದ್ಧಾಂತಿಕ ಕೆಲಸ ಮತ್ತು ರಾಜಕೀಯ ಪ್ರಚಾರ

ಮುಂದಿನ 108ನೇ ಪರಿಚ್ಛೇದ ಪಕ್ಷ[ದ] ಮುಂದೆ ಮತ್ತೊಂದು ಕರ್ತವ್ಯವನ್ನು ಇಟ್ಟಿ[ತು] ಬಂಡವಾಳಶಾಹಿ ಸಿದ್ಧಾಂತಗಳನ್ನು ಪಾಳೆ[ಗಾ]ಗಾರಿ ಮತ್ತು ಕುರುಡು ಮೌಲ್ಯಗಳ ವಿರು[ದ್ಧ] ಸಮರ ಹೂಡಲು, ಅಂತರ್ರಾಷ್ಟ್ರೀಯ ರಂಗದ[ಲ್ಲಿ] ಸಮಾಜವಾದಕ್ಕಾದ ಸೋಲಿನಿಂದಾಗಿ ಬರುತ್ತಿ[ರುವ] ಮಾರ್ಕ್ಸ್‌ವಾದ -ವಿರೋಧಿ ಧಾಳಿಗಳನ್ನು ಎ[ದುರಿಸಲು]...

ಪುಟ 6ನೋಡಿ

ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗದ ವೇದಿಕೆಯ ಕನಿಷ್ಟ ಕಾರ್ಯಕ್ರಮ

ಸಿಪಿಐ(ಎಂ) ಕೇಂದ್ರ ಸಮಿತಿ 15ನೇ ಮಹಾಧಿವೇಶನದ ಮುಂದೆ ಮಂಡಿಸಲಾಗುವ ಕರಡು ರಾಜಕೀಯ ನಿರ್ಣಯವನ್ನು ಈಗ ಸದಸ್ಯರ, ಹಿತೈಷಿಗಳ ಮುಂದಿಟ್ಟಿದೆ. ಕಳೆದ ಮೂರು ವರ್ಷಗಳ ಅನುಭವಗಳ ವಿಮರ್ಶೆ ಮಾಡಿರುವ ಈ ವರದಿ ಎಡ-ಪ್ರಜಾಪ್ರಭುತ್ವ ಆಂದೋಲನದ ಮುನ್ನಡೆಗೆ . ಒಂದು ಕನಿಷ್ಠ ಕಾರ್ಯಕ್ರಮವನ್ನು ಮುಂದಿಟ್ಟಿದೆ. ಕರಡು ರಾಜಕೀಯ ರಾಜಕೀಯ ವರದಿಯ ಪರಿಚ್ಛೇದ 2.104ರಲ್ಲಿ ಅದು ಹೀಗೆ ಹೇಳಿದೆ

2.104 ಒಂದು ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗ ಕಟ್ಟುವ ಹೋರಾಟ ನಡೆಸಲು ಈ ಕೆಳಗಿನ ಬೇಡಿಕೆಗಳ ಮೇಲೆ ಒಂದು ಕನಿಷ್ಠ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಬೇಕು.

(i) ಐ.ಎಂ.ಎಫ್-ವಿಶ್ವಬ್ಯಾಂಕ್ ಆದೇಶಿತ ನೀತಿಗಳ ವಿರುದ್ಧ ಹೋರಾಟ ಮುಂದುವರಿಸಬೇಕು; ಆರ್ಥಿಕ ಸ್ವಾತಂತ್ರ್ಯ ಹಾಗೂ ಸ್ವಾವಲಂಬೀ ಆರ್ಥಿಕವನ್ನು ಉಳಿಸಬೇಕು; ನೇರ ತೆರಿಗೆ ಹೆಚ್ಚಿಸಬೇಕು, ಕಪ್ಪು ಹಣವನ್ನು ದಮನ ಮಾಡಬೇಕು; ಅನಗತ್ಯ ಆಮದುಗಳನ್ನು, ಸರಕಾರದ ವ್ಯರ್ಥ ಖರ್ಚುಗಳನ್ನು ಕಡಿತ ಮಾಡಬೇಕು, ನಮ್ಮ ಆರ್ಥಿಕ ಸ್ವಾತಂತ್ರ್ಯಕ್ಕೆ ಹಾನಿಕಾರಕವಾದ ಗ್ಯಾಟ್ ಸಂಧಿಯ ಪ್ರಕಾರ ತರಲಿರುವ ಎಲ್ಲಾ ಬದಲಾವಣೆಗಳ ವಿರುದ್ಧ ಹೋರಾಡಬೇಕು.

(ii) ಖಾಸಗೀಕರಣದ ಮೂಲಕ ಸಾರ್ವಜನಿಕ ವಲಯವನ್ನು ಬುಡಮೇಲು ಮಾಡುವ, ಕಾರ್ಖಾನೆಗಳನ್ನು ಮುಚ್ಚುವ ಹಾಗೂ ನಿರುದ್ಯೋಗ ಹೆಚ್ಚಿಸುವ ನೀತಿಗಳನ್ನು ಹಿಂತೆಗೆದುಕೊಳ್ಳಬೇಕು ಹಾಗೂ ನಾರು, ಗೇರು, ಕೈಮಗ್ಗ, ಮೀನುಗಾರಿಕೆ, ಕೈಕಸುಬುಗಳು ಮುಂತಾದ ಸಣ್ಣ ಪ್ರಮಾಣದ ಹಾಗೂ ಪಾರಂಪರಿಕ ವಲಯಗಳನ್ನು ರಕ್ಷಿಸಬೇಕು.

(iii) ತೀವ್ರಗಾಮೀ ಭೂಸುಧಾರಣೆ ಜ್ಯಾರಿಗೆ ತರಬೇಕು, ಭೂಮಿಯನ್ನು ಹಂಚಬೇಕು, ಶಾಸನಗಳನ್ನು ಮಾಡಿ ಭೂಸುಧಾರಣೆಯಲ್ಲಿನ ತೂತುಗಳನ್ನು ಮುಚ್ಚಬೇಕು. ಭೂ ದಾಖಲೆಗಳನ್ನು ಸರಿಪಡಿಸಬೇಕು; ಕೃಷಿಯ ಅಸಮಾನ ಬೆಳವಣಿಗೆಯನ್ನು ನಿವಾರಿಸಲು ನೀರಾವರಿ ಸೌಲಭ್ಯಗಳನ್ನು ಅಭಿ ವೃದ್ಧಿ ಪಡಿಸಬೇಕು; ಕೃಷಿ ಕೂಲಿಕಾರರಿಗೆ ಕೇಂದ್ರೀಯ ಶಾಸನ; ಕೃಷಿ ಕೂಲಿಕಾರರಿಗೆ ಕನಿಷ್ಠ ಕೂಲಿ ಸಿಗುವಂತಾಗಬೇಕು.

(iv) ಜೀವನಾವಶ್ಯಕ ಸರಕುಗಳ ಬೆಲೆಯೇರಿಕೆಗೆ ತಡೆ ಹಾಕಲು ಕ್ರಮ; ಸರಕಾರವೇ ಬೆಲೆಯೇರಿಸುವುದನ್ನು ನಿಲ್ಲಿಸಬೇಕು; ದೇಶಾದ್ಯಂತ 14 ಜೀವನಾವಶ್ಯಕ ಸರಕುಗಳನ್ನು ನೀಡುವಂತೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿಸ್ತರಣೆ; ಈ ಉದ್ದೇಶಕ್ಕಾಗಿ ಸರಕಾರ ಸಾಕಷ್ಟು ಆಹಾರ ದಾಸ್ತಾನನ್ನು ಪಡೆಯಬೇಕು; ದೇಶದ ಆಹಾರ ಭದ್ರತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಎಲ್ಲಾ ಕ್ರಮಗಳನ್ನು ವಿರೋಧಿಸಬೇಕು.

(v) ಉದ್ಯೋಗದ ಹಕ್ಕನ್ನು ಸಂವಿಧಾನದಲ್ಲಿ ಒಂದು ಮೂಲಭೂತ ಹಕ್ಕಾಗಿ ಸ್ಥಾಪಿಸಬೇಕು; ನಿರುದ್ಯೋಗ ಸೌಲಭ್ಯಗಳನ್ನು ನೀಡುವುದು; ಗ್ರಾಮೀಣ ಮತ್ತು ನಗರಗಳಲ್ಲಿ ಉದ್ಯೋಗವಕಾಶಗಳನ್ನು ಉಂಟು ಮಾಡಲು ನಿರ್ದಿಷ್ಟ ಯೋಜನೆಗಳು.

(vi) ಕಾರ್ಮಿಕರಿಗೆ ಅಗತ್ಯ ಆಧಾರಿತ ಕನಿಷ್ಠ ಕೂಲಿ; ಗುಪ್ತ ಮತದಾನದ ಆಧಾರದ ಮೇಲೆ ಕಾರ್ಮಿಕ ಸಂಘಗಳಿಗೆ ಮಾನ್ಯತೆ; ಆಡಳಿತದಲ್ಲಿ ಕಾರ್ಮಿಕರು ಭಾಗವಹಿಸುವಂತೆ ಕಾನೂನಿನಲ್ಲಿ ಅವಕಾಶ; ಮಹಿಳಾ ಕಾರ್ಮಿಕರ ವಿರುದ್ಧ ಎಲ್ಲಾ ಪಕ್ಷಪಾತಗಳನ್ನು ಕೊನೆಗೊಳಿಸಬೇಕು; ಮಕ್ಕಳನ್ನು ದುಡಿಸಿಕೊಳ್ಳುವುದನ್ನು ರದ್ದು ಮಾಡಬೇಕು.

(vii) ಕಡ್ಡಾಯ ಪ್ರಾಥಮಿಕ ಶಿಕ್ಷಣ ಹಾಗೂ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ; ಮಾಧ್ಯಮಿಕ ಹಂತದವರೆಗೆ ಪುಕ್ಕಟೆ ಶಿಕ್ಷಣ; ಶಿಕ್ಷಣ ವ್ಯವಸ್ಥೆಯನ್ನು ಪ್ರಜಾಸತ್ತಾತ್ಮಕ, ಜಾತ್ಯಾತೀತ ಹಾಗೂ ವೈಜ್ಞಾನಿಕ ರೀತಿಯಲ್ಲಿ ಆಮೂಲಾಗ್ರವಾಗಿ ಬದಲಿಸಬೇಕು; ಮನಬಂದಂತೆ ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣಗಳನ್ನು ಬದಲಿಸುವುದು; ನಿರಕ್ಷರತೆ ನಿರ್ಮೂಲನಕ್ಕೆ ಸಾಮೂಹಿಕ ಸಾಕ್ಷರತಾ ಪ್ರಚಾರಾಂದೋಲನಕ್ಕೆ ಉತ್ತೇಜನ; ಎಲ್ಲಾ ರಾಷ್ಟ್ರೀಯ ಭಾಷೆಗಳೊಂದಿಗೆ ಸಮಾನ ವರ್ತನೆ ಹಾಗೂ ಸಮಾನ ಅಭಿವದ್ಧಿ.

(vii) ಕಾಂಗ್ರೆಸ್(ಐ)ನ ಸರ್ವಾಧಿಕಾರಿ ಧಾಳಿ[ಗಳ] ವಿರುದ್ಧ ಪ್ರಜಾಪ್ರಭುತ್ವದ ರಕ್ಷಣೆ, ನಾಗರಿ[ಕ] ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ, ಎಸ್[ಮಾ,] ಎನ್ಎಸ್ಎ, ಟಾಡಾ ಮುಂತಾದ ದಮನಕಾರಿ ಶಾಸನಗಳನ್ನು ಹಿಂತೆಗೆದುಕೊಳ್ಳಬೇಕು.

(ix) ಕೇಂದ್ರ-ರಾಜ್ಯಗಳ ಸಂಬಂಧಗಳ ಪುನ[ರ್ರ]ಚನೆ-ರಾಜ್ಯಗಳಿಗೆ ಹೆಚ್ಚು ಅಧಿಕಾರ, ಪಂ[ಚಾ]ಯತು ವ್ಯವಸ್ಥೆಯಲ್ಲಿ ಮತ್ತೆ ಚೈತನ್ಯ ತುಂಬು[ವುದು,] ಅಧಿಕಾರಗಳ ವಿಕೇಂದ್ರೀಕರಣ, ಸಂವಿಧಾನ[ದ] 356ನೇ ಕಲಮಿನ ರದ್ಧತಿ, ಎಡರಂಗ ಸರಕಾ[ರ]ಗಳ ರಕ್ಷಣೆ.

(x) ಪ್ರತ್ಯೇಕತಾವಾದಿ, ಕೋಮುವಾದಿ ಮ[ತ್ತು] ವಿಭಾಜಕ ಶಕ್ತಿಗಳ ವಿರುದ್ಧ ರಾಷ್ಟ್ರೀಯ ಐಕ್ಯತೆ[ಯ] ರಕ್ಷಣೆ. ಭಾರತೀಯ ಐಕ್ಯತೆಯ ಚೌಕಟ್ಟಿನೊ[ಳಗೆ] ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳ ಜನ[ರ] ನೈಜ ಬೇಡಿಕೆಗಳನ್ನು ಈಡೇರಿಸಿ ಈ ಸಮಸ್ಯೆ[ಗೆ] ರಾಜಕೀಯ ಪರಿಹಾರ. ಬಾಬ್ರಿ ಮಸೀದಿ ವಿ[ವಾ]ದವನ್ನು ಸಂವಿಧಾನದ ಕಲಮು 138(2)ಪ್ರ[ಕಾರ] ಸುಪ್ರೀಂಕೋರ್ಟ್‌ಗೆ ಒಪ್ಪಿಸಿ ಅದನ್ನು ಪರಿ[ಹರಿ]ಸುವುದು, ಪ್ರಶ್ನೆಯನ್ನು ಸಂಕುಚಿತ ರಾಜಕೀ[ಯ] ಉದ್ದೇಶಗಳಿಗೆ ಬಳಸಲು ಅವಕಾಶ ನೀಡಬಾರ[ದು.]

(xi) ಪರಿಶಿಷ್ಟ ಜಾತಿಗಳು ಮತ್ತು ಪರಿ[ಶಿಷ್ಟ] ಬುಡಕಟ್ಟುಗಳ ಮೇಲೆ ಅತ್ಯಾಚಾರದ ವಿ[...]

ಹದಿನಾಲ್ಕನೇ ಮಹಾಧಿವೇಶನ ಕಂಡಂತೆ.....

ಸಾಮೂಹಿಕ ಸಂಘಟನೆಗಳು ಮತ್ತು ಪಕ್ಷ

“ಸಾಮೂಹಿಕ ಸಂಘಟನೆಗಳ ಕೆಲಸವನ್ನು ವಿಮರ್ಶಿಸುವಾಗ ಗಮನಿಸಬೇಕಾದ ಒಂದು ಮಹತ್ವದ ಅಂಶವೆಂದರೆ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ನಡುವಿನ ಸಂಬಂಧ. ಸಾಮೂಹಿಕ ಸಂಘಟನೆಗಳ ಕುರಿತು ಕೇಂದ್ರ ಸಮಿತಿಯ ನಿರ್ಣಯ ಸಾಮೂಹಿಕ ಸಂಘಟನೆಗಳಲ್ಲಿ ಕೆಲಸ ಮಾಡುವ ಪಕ್ಷದ ಸದಸ್ಯರ ತಪ್ಪು ತಿಳುವಳಿಕೆಗಳನ್ನು ಹಾಗೂ ತಪ್ಪು ಆಚರಣೆಗಳನ್ನು ಸರಿಪಡಿಸಲು ಪ್ರಯತ್ನಿಸಿತು. ಸಾಮೂಹಿಕ ಸಂಘಟನೆಗಳಲ್ಲಿ ಎರಡು ರೀತಿಯ ಮಾರ್ಗಚ್ಯುತಿಗಳು ಕಂಡು ಬಂದಿವೆ ಎಂದು ಸಾಲ್ಕಿಯಾ ಪ್ಲೀನಂನಲ್ಲಿ ಅರಿವಿಗೆ ಬಂತು. ಸಾಮೂಹಿಕ ಸಂಘಟನೆಗಳಲ್ಲಿ ಪಕ್ಷದ ಬಾಲಂಗೋಚಿಯಾಗಿ ಕಾಣುವುದು ಅಥವಾ ಸಾಮೂಹಿಕ ಸಂಘಟನೆಗಳಲ್ಲಿರುವ ಪಕ್ಷದ ಪದಾಧಿಕಾರಿಗಳು ಪಕ್ಷದ ಸಮಿತಿಗಳನ್ನು, ಸಾಮೂಹಿಕ ಕಾರ್ಯನಿರ್ವಹಣೆಯನ್ನು ಬದಿಗೊತ್ತುವುದು. ಈ ತಿಳುವಳಿಕೆಯಂತೆ 1981ರ ಮೇಲೆ ಹೇಳಿದ ಕೇಂದ್ರ ಸಮಿತಿಯ ನಿರ್ಣಯ ಸಾಮೂಹಿಕ ಸಂಘಟನೆಗಳು ಎಂದರೇನು, ಪಕ್ಷಕ್ಕಿಂತ ಅವುಗಳ ಸ್ವರೂಪ ಹಾಗೂ ವ್ಯಾಪ್ತಿ ಹೇಗೆ ಭಿನ್ನವಾಗಿದೆ' ಎಂಬ ಮೂಲಭೂತ ಪ್ರಶ್ನೆಯನ್ನು ಎತ್ತಿಕೊಂಡಿತು. ಈ ಸಂಘಟನೆಗಳ ವಿಶಾಲ ಸ್ವರೂಪವನ್ನು ಹಾಗೂ ಈ ಸಂಘಟನೆಗಳೊಳಗೆ ಸಾಧ್ಯವಾದಷ್ಟು ಹೆಚ್ಚು ಸದಸ್ಯರು ಹಾಗೂ ಹಿಂದುಳಿದ ವಿಭಾಗಗಳ ಜನರು ಪ್ರವೇಶಿಸುವಂತಾಗಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಇವು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದು ಅಗತ್ಯ, ಅದಕ್ಕನುಗುಣವಾಗಿ ಘೋಷಣೆಗಳನ್ನು, ಕಾರ್ಯತಂತ್ರಗಳನ್ನು ರೂಪಿಸುವುದು ಅಗತ್ಯ ಎಂದು ಒತ್ತಿ ಹೇಳಲಾಯಿತು. ಸಾಮೂಹಿಕ ಸಂಘಟನೆಗಳ ಕಾರ್ಯಕ್ರಮ, ವೇದಿಕೆ, ಕಾರ್ಯತಂತ್ರಗಳಿಗಿಂತ ಅವುಗಳೊಳಗೆ ಕೆಲಸ ಮಾಡುವ ಕಮ್ಯುನಿಸ್ಟರದ್ದು ಭಿನ್ನ ಕೆಲಸ. ಪಕ್ಷದ ಶಿಸ್ತಿಗೊಳಪಟ್ಟಿರುವ ಇವರು ಸಾಮೂಹಿಕ ಸಂಘಟನೆಗಳೊಳಗೆ ಸೆಳೆಯಲ್ಪಟ್ಟ ಜನವಿಭಾಗಗಳ ನಡುವೆ ರಾಜಕೀಯ ಕೆಲಸವನ್ನೂ ಮಾಡಬೇಕಾಗುತ್ತದೆ. ಆದರೆ ಈಗಲೂ ಬಹುಪಾಲು ರಾಜ್ಯಗಳಲ್ಲಿ ಸಾಮೂಹಿಕ ಸಂಘಟನೆಗಳಲ್ಲಿ ಇದನ್ನು ಉಲ್ಲಂಘಿಸಲಾಗುತ್ತಿದೆ. ಸಾಮೂಹಿಕ ಸಂಘಟನೆಗಳನ್ನು ಪಕ್ಷದ ವೇದಿಕೆಗಳನ್ನಾಗಿ ಬಳಸಿಕೊಂಡು, ಪಕ್ಷದ ಘೋಷಣೆಗಳನ್ನು ಹಾಗೂ ತಿಳುವಳಿಕೆಗಳನ್ನು ಯಾಂತ್ರಿಕವಾಗಿ ಅಲ್ಲಿಗೆ ಸಾಗಿಸಿ ಸಾಮೂಹಿಕ ಸಂಘಟನೆಗಳ ವ್ಯಾಪ್ತಿಯನ್ನು ಕಿರಿದುಗೊಳಿಸಿ ಅವನ್ನು ಯಾಂತ್ರಿಕವಾಗಿ ಪಕ್ಷದ ಅಂಚಿಗೆ ತಳ್ಳಲಾಗಿದೆ. ಹಲವು ದುರ್ಬಲ ರಾಜ್ಯಗಳಲ್ಲಿ ಕಿಸಾನ್ ಸಭಾ, ಯುವ ಹಾಗೂ ವಿದ್ಯಾರ್ಥಿ ಸಂಘಟನೆಗಳಲ್ಲಿ ಈ ಸಮಸ್ಯೆ ಮತ್ತೆ ಮತ್ತೆ ತಲೆ ಎತ್ತುತ್ತಿದೆ. ಇನ್ನಷ್ಟು ಬೆಳವಣಿಗೆ ಸಾಧಿಸಬೇಕಾದರೆ ಸಾಮೂಹಿಕ ಸಂಘಟನೆಗಳ ಕುರಿತಾದಂತೆ ಪಕ್ಷದ ದೃಷ್ಟಿಕೋನವನ್ನು ಸರಿಪಡಿಸಲು, ಅದಕ್ಕೆ ಸರಿಯಾಗಿ ದಿಕ್ಕು ನೀಡಲು ಒಂದು ಧೃಢ ಹೋರಾಟ ನಡೆಸಬೇಕಾಗಿದೆ.

-(ಪರಿಚ್ಛೇದ 71ರಿಂದ)

ಸಾಮೂಹಿಕ ಸಂಘಟನೆಗಳಲ್ಲಿ ದೊಡ್ಡ ವಿಸ್ತರಣೆಯಾಗಿದ್ದರೂ ಅದು ಅಸಮಾನ ಸ್ವರೂಪದ್ದು ಎಂಬುದನ್ನು ಗಮನಿಸಬೇಕಾಗುತ್ತದೆ. ಪಕ್ಷದ ಸದಸ್ಯತ್ವದಂತೆ ಸಾಮೂಹಿಕ ಸಂಘಟನೆಗಳ ಸದಸ್ಯತ್ವದಲ್ಲೂ ಪಶ್ಚಿಮ ಬಂಗಾಳ ಮತ್ತು ಕೇರಳದಂತಹ ರಾಜ್ಯಗಳಲ್ಲಿ ಹೆಚ್ಚಿನ ಸದಸ್ಯತ್ವ ಕೇಂದ್ರೀಕೃತವಾಗಿದೆ. ಉದಾಹರಣೆಗೆ 1977ರಲ್ಲಿ ಸಾಲ್ಕಿಯಾ ವೇಳೆಗೆ ಸಾಮೂಹಿಕ ಸಂಘಟನೆಗಳ ಒಟ್ಟು ಸದಸ್ಯತ್ವದ 62% ಕೇರಳ ಮತ್ತು ಪಶ್ಚಿಮ ಬಂಗಾಳದಿಂದ ಇತ್ತು. ಈಗ 75% ಕ್ಕಿಂತಲೂ ಹೆಚ್ಚು ಈ ರಾಜ್ಯಗಳಿಂದಲೇ ಇದೆ. ಇದರರ್ಥ ಬೇರೆ ರಾಜ್ಯಗಳಲ್ಲಿ ಸಾಮೂಹಿಕ ಸಂಘಟನೆಗಳ ಸದಸ್ಯತ್ವ ಹೆಚ್ಚಿಲ್ಲವೆಂದಲ್ಲ. ಕೆಲವು ರಾಜ್ಯಗಳಲ್ಲಿ, ಕೆಲವು ರಂಗಗಳಲ್ಲಿ ಗಮನಾರ್ಹ ಹೆಚ್ಚಳವಾಗಿದೆ. ಆದರೆ ಒಟ್ಟಾರೆ ಹೆಚ್ಚಳ ಪಶ್ಚಿಮ ಬಂಗಾಳದ ಮತ್ತು ಕೇರಳ ಅನುಪಾತಕ್ಕಿಂತ ಕಡಿಮೆ. ಅಲ್ಲದೆ ಹಲವು ದುರ್ಬಲ ರಾಜ್ಯಗಳಲ್ಲಿ ಸಾಮೂಹಿಕ ಸಂಘಟನೆಗಳು ವ್ಯಾಪಕ ಪ್ರಭಾವ ಹೊಂದಿರುವಲ್ಲೂ ಸದಸ್ಯತ್ವ ದಾಖಲು ಮಾಡಿಕೊಳ್ಳುವಲ್ಲಿ ವಿಫಲತೆಯಿದೆ. ಅಖಿಲ ಭಾರತ ಮಟ್ಟದಲ್ಲಿ ಮತ್ತು ರಾಜ್ಯಗಳ ಮಟ್ಟದಲ್ಲಿ ಸಾಮೂಹಿಕ ಸಂಘಟನೆಗಳ ಕೇಂದ್ರಗಳನ್ನು ಬಲಪಡಿಸುವಂತೆ ಈ ಸಂಘಟನೆಗಳ ಮುಂದಿನ ವಿಸ್ತರಣೆಗೆ ಒತ್ತು ಕೊಡುವುದು ಅತ್ಯಗತ್ಯ.”

- (ಪರಿಚ್ಛೇದ 72ರಿಂದ)

ಅಧಿಕಾರಶಾಹಿಯೆಂಬ ರೋಗ

“ಬಲಿಷ್ಠ ಹಾಗೂ ದುರ್ಬಲ ರಾಜ್ಯಗಳೆರಡರಲ್ಲೂ ಅನುಭವಕ್ಕೆ ಬಂದ ಸಮಾನ ಸಂಗತಿಯೆಂದರೆ ಅಧಿಕಾರಶಾಹಿಯ ಕೆಡುಕಿನ ಬೆಳವಣಿಗೆ. ಇಂತಹ ದೃಷ್ಟಿಕೋಣದಿಂದ ಪೀಡಿತರಾದ ಪಕ್ಷದ ಪದಾಧಿಕಾರಿಗಳು ಈ ರೋಗವನ್ನು ಸಾಮೂಹಿಕ ಸಂಘಟನೆಗಳಿಗೂ ಒಯ್ಯುತ್ತಾರೆ. ಮುಖ್ಯವಾಗಿ ಕಾರ್ಮಿಕ ಸಂಘಗಳಿಗೆ. ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ವಿಸ್ತರಣೆಯೊಂದಿಗೆ ಸಾಮೂಹಿಕ ಕಾರ್ಯನಿರ್ವಹಣೆಯಲ್ಲಿ ನ್ಯೂನ್ಯತೆಗಳು, ಕೆಲವು ವ್ಯಕ್ತಿಗಳ ಮೇಲೆ ಕೆಲಸದ ಒತ್ತಡ ಹೆಚ್ಚುವುದು, ಪೂರ್ಣಾವಧಿ ಕಾರ್ಯಕರ್ತರ ಕೆಲಸ ಕೇವಲ ಒಣ ದಿನಚರಿಯಂತಾಗುವುದು, ಅವರು ತಮ್ಮ ಕೆಲಸವನ್ನು ವೈಯಕ್ತಿಕ ಉತ್ಕರ್ಷದ ದೃಷ್ಟಿಯಿಂದ ನೋಡಲಾರಂಭಿಸುವುದು, ಹತ್ತು ಹಲವು ಕಛೇರಿಗಳ ಕೆಲಸ ಇವೆಲ್ಲಾ ನಮ್ಮ ಸಂಗಾತಿಗಳ ಒಂದು ವಿಭಾಗದಲ್ಲಿ ಅಧಿಕಾರಶಾಹಿ ವರ್ತನೆಗೆ ದಾರಿಮಾಡಿಕೊಡುತ್ತಿವೆ. ಜನಗಳೊಡನೆ ಜೀವಂತ ಸಂಪರ್ಕದ ಅಭಾವ, ಟೀಕೆಗಳ ಬಗ್ಗೆ ಅಸಹನೆ, ಮುಕ್ತ ಹಾಗೂ ನೇರ ಟೀಕೆಗೆ ಅವಕಾಶವಿರುವ ವಾತವರಣವಿಲ್ಲದಂತಾಗುವುದು ಇವೆಲ್ಲಾ ಅಧಿಕಾರಶಾಹಿ ವೃದ್ಧಿ ಹೊಂದುವಂತೆ ಮಾಡುತ್ತದೆ. ಇದು ಕಾರ್ಮಿಕವರ್ಗದ ಪಕ್ಷಕ್ಕೆ ಸಲ್ಲದ ಪ್ರಜಾಸತ್ತಾತ್ಮಕ ಕೇಂದ್ರವಾದ ಹಾಗೂ ಆಂತರಿಕ, ಪ್ರಜಾಪ್ರಭುತ್ವಕ್ಕೆ ಸಲ್ಲದ ಪ್ರವೃತ್ತಿ. ಇದು ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನೆ ಅಗಾಧ ರೀತಿಯಲ್ಲಿ ತಟ್ಟುತ್ತದೆ. ಟೀಕೆ ಮತ್ತು ಸ್ವಯಂ ಟೀಕೆಯನ್ನು ಆಚರಿಸುವುದು ಹಾಗೂ ನೇತೃತ್ವದಲ್ಲಿರುವ ಕಾರ್ಯಕರ್ತರ ಗಂಭೀರ ಲೋಪಗಳನ್ನು ಸಂಭಂದಪಟ್ಟ ಕೆಳಗಿನ ಸಮಿತಿಗಳಿಗೆ ವರದಿ ಮಾಡುವುದು ಇವುಗಳಿಂದ ಇಂತಹ ವರ್ತನೆಗಳನ್ನು ತಡೆಯುವಲ್ಲಿ ಎಚ್ಚರವನ್ನು ಹೆಚ್ಚಿಸಲು ಸಾಧ್ಯ.”

(14ನೇ ಮಹಾಧಿವೇಶನದ ಸಂಘಟನಾ ವರದಿಯ ಪರಿಚ್ಛೇದ 82)

ಣ ಕ್ರಮ ಕೈಗೊಂಡು ಅವನ್ನು ತಡೆಯಬೇಕು. ಅಸ್ಪೃಶ್ಯತೆ ಹಾಗೂ ಜಾತಿ ಪಕ್ಷಪಾತದ ವಿರುದ್ಧ ಕಠಿಣ ಕ್ರಮಗಳು. ಅವರಿಗೆ ಮೀಸಲಾತಿ ಕೋಟಾಗಳನ್ನು ತುಂಬುವಂತೆ ನೋಡಿಕೊಳ್ಳಬೇಕು.

(xii) ಬುಡಕಟ್ಟು ಜನಗಳ ಭೂಮಿ, ಸಂಸ್ಕೃತಿ ಹಾಗೂ ಭಾಷೆಯ ರಕ್ಷಣೆ, ಪರಸ್ಪರ ನಿಕಟವಿರುವ ಬುಡಕಟ್ಟು ಜನಗಳು ವಾಸಿಸುವ ಪ್ರದೇಶಗಳಲ್ಲಿ ಅಗತ್ಯವಿದ್ದಲ್ಲಿ ಪ್ರಾದೇಶಿಕ ಸ್ವಾಯತ್ತತೆ.

(xiii) ಮಹಿಳೆಯರ ಮೇಲೆ ಅತ್ಯಾಚಾರಗಳ ವಿರುದ್ಧ ಕಠಿಣ ... ವಣಾ ಸುಧಾರಣೆಗಳು; ಅನುಪಾತಿಕ ಪ್ರಾತಿನಿಧ್ಯ ವ್ಯವಸ್ಥೆ; ಬಹುಸದಸ್ಯ ಚುನಾವಣಾ ಆಯೋಗವನ್ನು ರಚಿಸುವುದು.

(xvi) ವಿಜ್ಞಾನಿಗಳು ಸೃಜನಾತ್ಮಕ ಕೆಲಸ ಮಾಡಲು ಪ್ರೋತ್ಸಾಹ ನೀಡುವ, ಭಾರತದ ಅಭಿವೃದ್ಧಿಯ ಸ್ವಾವಲಂಬೀ ಆಧಾರವನ್ನು ಪೋಷಿಸುವ ಒಂದು ವಿಜ್ಞಾನ ಹಾಗೂ ತಂತ್ರಜ್ಞಾನ ನೀತಿ.

(xvii) ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಬೇಕು ಮತ್ತು ವಿಸ್ತರಿಸಬೇಕು. ಸಾರ್ವಜನಿಕ ಆರೋಗ್ಯ ಖರ್ಚನ್ನು ಕಡಿತ ಮಾಡುವ ಎಲ್ಲಾ ಕ್ರಮಗಳನ್ನು ವಿರೋಧಿ

15ನೇ ಮಹಾಧಿವೇಶನ ಕರಡು ರಾಜಕೀಯ ವರದಿಯಿಂದ

ದುಗಳು, ಮಹಿಳೆಯರ ವಿರುದ್ಧ ಎಲ್ಲಾ ಪಕ್ಷಪಾತಗಳನ್ನು ಕೊನೆಗೊಳಿಸಬೇಕು; ಸಮಾನ ಹಕ್ಕುಗಳು ಹಾಗೂ ಇತರ ಕಾನೂನು ಮತ್ತು ಸಾಂವಿಧಾನಿಕ ಗ್ಯಾರಂಟಿಗಳು ಸಿಗುವಂತಾಗಬೇಕು; ಮಹಿಳೆಯರಿಗೆ ಆಸ್ತಿಯಲ್ಲಿ ಸಮಾನ ಹಕ್ಕುಗಳು.

(xiv) ಎಲ್ಲಾ ವಿಧಗಳ ಮತಾಂಧತೆ ಹಾಗೂ ಅಧಃಪತನಗಳನ್ನು ಎದುರಿಸಲು ಒಂದು ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಸಂಸ್ಕೃತಿಯನ್ನು ಬೆಳೆಸುವುದು; ಎಲ್ಲಾ ಪ್ರದೇಶಗಳ ವಿಭಿನ್ನ ಹಾಗೂ ಸಮ್ಮಿಶ್ರ ಸಂಸ್ಕೃತಿಗಳಿಗೆ ಪ್ರೋತ್ಸಾಹ; ವೈಜ್ಞಾನಿಕ ಮನೋಭಾವಕ್ಕೆ ಉತ್ತೇಜನೆ; ಎಲ್ಲಾ ಜನ ವಿಭಾಗಗಳಿಗೆ ಸಾಂಸ್ಕೃತಿಕ ಅವಕಾಶಗಳು ಸಿಗುವಂತೆ ಮಾಡಬೇಕು.

(xv) ಮದಾಚರಣೆಗಳನ್ನು ನಿರ್ಮೂಲನೆ ಮಾಡಲು ಚುನಾ... ಸಬೇಕು. ದೇಶದೆಲ್ಲೆಡೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಾಕಷ್ಟು ಔಷಧಿಗಳ ದಾಸ್ತಾನು ಒದಗಿಸಿ ಅವನ್ನು ವಿಸ್ತರಿಸಬೇಕು. ವಸತಿ ಹಕ್ಕಿಗೆ ಒಂದು ಮೂಲಭೂತ ಹಕ್ಕಿನ ಸ್ಥಾನಮಾನ ನೀಡಬೇಕು.

(xviii) ನಮ್ಮ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯ ಸತ್ವವನ್ನೇ ಕೊರೆಯುತ್ತಿರುವ ಭ್ರಷ್ಟಾಚಾರದ ವಿರುದ್ಧ ದೃಢ ಹೋರಾಟ.

(xix) ಅಲಿಪ್ತ ವಿದೇಶಾಂಗ ನೀತಿಯ ರಕ್ಷಣೆ, ಸಮಾಜವಾದಿ ದೇಶಗಳೊಂದಿಗೆ ಗೆಳೆತನ, ವಿಶ್ವಶಾಂತಿ ಹಾಗೂ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಗಳಿಗೆ, ನೆರೆ ದೇಶಗಳಲ್ಲಿ ಪ್ರಜಾಪ್ರಭುತ್ವಕ್ಕಾಗಿ ಹೋರಾಟಗಳಿಗೆ ಬೆಂಬಲ.

ಷೇರು ಮಾರುಕಟ್ಟೆ: ಒಡೆಯುತ್ತಿರುವ ನೀರುಗ್ಗುಳ್ಳೆ

ಷೇರು ಮಾರುಕಟ್ಟೆ ಒಮ್ಮೆಲೇ ಅಲ್ಲೋಲ ಕಲ್ಲೋಲವಾಗಿದೆ. ಎರಡು ವರ್ಷಗಳ ಹಿಂದೆ ಷೇರು ಹಗರಣ ನಡೆದ ನಂತರ ಮತ್ತೆ ಏರತೊಡಗಿದ ಷೇರು ಮಾರುಕಟ್ಟೆಯ ಸೂಚ್ಯಂಕ ಏರುತ್ತಲೇ ಇದ್ದದ್ದು ಈಗ ಕುಸಿಯತೊಡಗಿದೆ. ಇತ್ತೀಚಿನ ದಿನಗಳಲ್ಲಿ ಕಾಣದೇ ಇದ್ದ ಪ್ರಮಾಣದಲ್ಲಿದೆ ಈ ಕುಸಿತ.

ಉದಾರೀಕರಣದ ಯಶಸ್ಸಿನ ಸೂಚ್ಯಂಕ ಇದು ಎಂಬ ಭಾವನೆಯನ್ನು ಉದಾರೀಕರಣದ ವಕ್ತಾರರು ಕೂಡ ಮಾಡಿದ್ದರು. ಆದರೆ ಈ ಸೂಚ್ಯಂಕ ಎಷ್ಟು ತರ್ಕಹೀನ ಸೂಕ್ಷ್ಮತೆ ಹೊಂದಿದೆ ಎಂಬುದು ಇದರಿಂದ ಗೊತ್ತಾಗಿ ಬಿಟ್ಟಿದೆ.

ಈಗಿನ ಈ ಕುಸಿತಕ್ಕೆ ಕಾರಣವೇನು? ವಿದೇಶೀ ಸಾಂಸ್ಥಿಕ ಹೂಡಿಕೆದಾರರು ತಾವು ಕೊಂಡ ಷೇರುಗಳನ್ನು ಮಾರುಕಟ್ಟೆಯಲ್ಲಿ

ಮಾರತೊಡಗಿದ್ದು ಈ ಕುಸಿತಕ್ಕೆ ಮುಖ್ಯ ಕಾರಣ ಎನ್ನಲಾಗುತ್ತಿದೆ. ಈ ಹೂಡಿಕೆಗಾಗಿ ಎಲ್ಲ ತರಹದ ರಿಯಾಯತಿಗಳನ್ನು ನೀಡಿ ದೇಶದ ಕಾನೂನುಗಳನ್ನು ಮಾರ್ಪಡಿಸಿ ರತ್ನಗಂಬಳಿ ಹಾಸಿ ಸ್ವಾಗತ ಕೋರಿದ್ದ ಸರ್ಕಾರ ಈಗ ಇಂಗು ತಿಂದ ಮಂಗನಂತಾಗಿದೆ. ಎಂಬುದು ಕೇಂದ್ರ ಅರ್ಥ ಮಂತ್ರಿ ಡಾ.ಮನಮೋಹನ ಸಿಂಗರೇ ಈ ವಿಷಯದಲ್ಲಿ ಅಲ್ಲಗಳೆವ ಹೇಳಿಕೆ ನೀಡಿರುವುದರಿಂದ ಸ್ಪಷ್ಟವಾಗಿದೆ.

ವಿದೇಶೀ ಸಾಂಸ್ಥಿಕ ಹೂಡಿಕೆದಾರರು ಏಕೆ ಈ ರೀತಿ ಷೇರು ಮಾರಾಟಕ್ಕೆ ಇಳಿದರು ಎಂಬುದೂ ಒಂದು ಪ್ರಶ್ನೆ. ಈ ಪ್ರಶ್ನೆಗೆ ಎರಡು ಉತ್ತರಗಳು ಒಂದು ಮೆಕ್ಸಿಕೋ ದೇಶದಲ್ಲಿನ ಬಿಕ್ಕಟ್ಟು, ಎರಡನೆಯದು ಭಾರತ ಜಗತ್ತಿನಲ್ಲೇ ಅತೀ ಹೆಚ್ಚು ಸಾಲ ಪಡೆದ ಮೂರನೇ ದೇಶವೆಂಬುದು ಬಹಿರಂಗವಾದದ್ದು, ಮೆಕ್ಸಿಕೋದಲ್ಲಿ ಆದದ್ದೇ ಇಲ್ಲಿ ಆಗಬಹುದೆಂಬ ಭಯ. ಈ ವಿದೇಶೀ ಹೂಡಿಕೆದಾರರಿಗಿರಬಹುದು ಅವರು ತಮ್ಮ ಲಾಭಕ್ಕಾಗಿ ಮಾತ್ರ ಹಣ ಹೂಡಿಕೆ ಮಾಡಿದವರಲ್ಲವೆ?

ಈ ಪ್ರಕ್ರಿಯೆಯಲ್ಲಿ ತಮ್ಮ ಉಳಿತಾಯದ ಹಣವನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಿದ ಹಲವು ಜನಸಾಮಾನ್ಯರು ತಮ್ಮ ಹಣ ಕಳೆದುಕೊಳ್ಳುತ್ತಾರೆ.

ಭಾರತದ ಬಾಗಿಲು ತಟ್ಟುತ್ತಿರುವ ಮೆಕ್ಸಿಕೋ ಭೂತ

ಈ ಮೆಕ್ಸಿಕೊ ನಮಗೆ ಆದರ್ಶಪ್ರಾಯವೆಂದು ಹೇಳಲಾಗುತಿತ್ತು. ಯಾಕೆ? ಇದೂ ಮೂರನೇ ಜಗತ್ತಿನ ಅಂದರೆ ಅಭಿವೃದ್ಧಿಶೀಲ ದೇಶ. ಈ ದೇಶ ನಮಗಿಂತ ಮೊದಲೇ ಐಎಂಎಫ್, ವಿಶ್ವಬ್ಯಾಂಕ್‌ಗಳ ರಚನಾತ್ಮಕ ಹೊಂದಾಣಿಕೆ ಒಳಗಾಗಿ ಯಶಸ್ವಿಯಾದ ದೇಶ ಎಂಬ ಹೆಗ್ಗಳಿಕೆಯನ್ನು ಅದಕ್ಕೆ ನೀಡಲಾಗಿತ್ತು. ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ಇಂದಿನ ಉದಾರೀಕರಣದ ಆರ್ಥಿಕ ನೀತಿಯನ್ನು ಅತ್ಯಂತ ಯಶಸ್ವಿಯಾಗಿ ಅದು ಅಳವಡಿಸಿಕೊಂಡಿದೆ ಮತ್ತು ಅದರಿಂದ ಉತ್ತಮ ಪ್ರತಿಫಲ ಪಡೆದಿದೆ ಎಂದು ಹೇಳಲಾಗುತ್ತಿತ್ತು.

ನಮ್ಮದೇಶದಂತೆಯೇ ವಿದೇಶೀ ವಿನಿಮಯ ಕೊರತೆಯ ಸಮಸ್ಯೆಯಿದ್ದ ಮೆಕ್ಸಿಕೊ ನಮಗಿಂತ ಮೊದಲೇ ಐಎಂಎಫ್, ವಿಶ್ವಬ್ಯಾಂಕ್‌ಗಳ ಸಲಹೆ ಪಡೆದು ಉದಾರೀಕರಣ ಪ್ರಾರಂಭಿಸಿತು. ಮೇಲ್ನೋಟದಿಂದ ನೋಡುವವರಿಗೆ ಈ ಮೂಲಕ ಮೆಕ್ಸಿಕೊ ತನ್ನ ಸಮಸ್ಯೆ ಪರಿಹರಿಸಿಕೊಂಡಂತೆ ಕಂಡಿತ್ತು. ಯಾಕೆಂದರೆ ವಿದೇಶೀ ವಿನಿಮಯದ ಕೊರತೆ ಅದಕ್ಕೆ ಇರಲಿಲ್ಲ.

ಆದರೆ ಆಳವಾಗಿ ಅಭ್ಯಸಿಸಿದವರಿಗೆ ಮೆಕ್ಸಿಕೊ ತನ್ನ ಸಮಸ್ಯೆಯನ್ನು ಇನ್ನೂ ಉಲ್ಬಣಗೊಳ್ಳಲು ಬಿಟ್ಟಿರುವುದು ಕಾಣುತ್ತಿತ್ತು.

ಈಗ ಮೆಕ್ಸಿಕೊ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಅದರ ಹಣವಾದ ಪೆಸೊದ ಬೆಲೆ ಅಂತರ್‍ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕುಸಿದಿದೆ. ಇದಕ್ಕೆ ಪರಿಣಾಮವಾಗಿ ಉಂಟಾಗಿರುವ ಬಿಕ್ಕಟ್ಟಿನಲ್ಲಿ ತೊಳಲಾಡುತ್ತಿದೆ ಮೆಕ್ಸಿಕೊ ಇಂದು.

ಮೆಕ್ಸಿಕೊವನ್ನು ಮಾದರಿಯಾಗಿಟ್ಟುಕೊಂಡು ಉದಾರೀಕರಣದ ದಾರಿ ಹಿಡಿದ ಭಾರತಕ್ಕೆ ಇಂದಿನ ಮೆಕ್ಸಿಕೊ ಭೂತವಾಗಿ ಕಾಡತೊಡಗಿದೆ.

ನಮ್ಮ ದೇಶದ ಉದಾರೀಕರಣವಾದಿಗಳು ಈಗ ಮೆಕ್ಸಿಕೊ ಮತ್ತು ನಮ್ಮ ದೇಶದ ನಡುವಿನ ವ್ಯತ್ಯಾಸಗಳನ್ನು ಹುಡುಕುತ್ತಿದ್ದಾರೆ. ಆ ಮೂಲಕ ಭಾರತದಲ್ಲಿ ಅಂತಹದು ಸಂಭವಿಸುವುದಿಲ್ಲ ಎಂಬ ವಾದ ಹೂಡಲು.

ಸಾರ್ವಜನಿಕ ವಲಯದ ಲೂಟಿಗೆ ಹೊಸ ನೀತಿ

ಖಾಸಗೀಕರಣದ ಹೆಸರಿನಲ್ಲಿ ಸರ್ಕಾರ ಮಾಡುತ್ತಿರುವುದೆಲ್ಲ ಸಾರ್ವಜನಿಕ ವಲಯದ ಲೂಟಿಗೆ ಬಂಡವಾಳಿಗರಿಗೆ ಅನುಕೂಲ ಮಾಡಿಕೊಡಲು ಈಗ ಕೇಂದ್ರ ಸರ್ಕಾರ ಹೊಸ ನೀತಿಯೊಂದನ್ನು ತರುವ ಘೋಷಣೆ ಮಾಡಿದೆ.

ಈ ನೀತಿಯ ಪ್ರಕಾರ ಸಾರ್ವಜನಿಕ ವಲಯ ಉದ್ದಿಮೆಗಳು ಲಾಭದಾಯಕವಲ್ಲದ ಅಥವಾ ಅನುಷ್ಠಾನಗೊಳಿಸಲು ಸಾಧ್ಯವಾಗದ ತಮ್ಮಲ್ಲಿನ ಯೋಜನೆಗಳನ್ನು ಖಾಸಗಿಯವರಿಗೆ ಅಥವಾ ಜಂಟಿ ವಲಯಕ್ಕೆ ವರ್ಗಾಯಿಸಲು ಅಧಿಕಾರ ನೀಡಲಾಗುತ್ತದೆ.

ಮೇಲ್ನೋಟಕ್ಕೆ ಈ ಯೋಜನೆ ಒಳ್ಳೆಯದು ಎನಿಸಬಹುದಲ್ಲವೆ? ಆದರೆ ವಾಸ್ತವ ಹಾಗಿಲ್ಲ. ಲಾಭದಾಯಕವಲ್ಲದ ಯೋಜನೆಗಳನ್ನು ಖಾಸಗಿಯವರು ಯಾವತ್ತಾದರೂ ವಹಿಸಿಕೊಂಡಾರೆ? ಇಲ್ಲ, ಹಾಗೆಯೇ ಅನುಷ್ಠಾನ ಕಠಿಣವಿರುವ ಯೋಜನೆಗಳನ್ನು ಅವರು ವಹಿಸಿಕೊಳ್ಳಲಾರರು.

ಹಾಗದರೆ ಈ ನೀತಿ ಏಕೆ? ಇಲ್ಲಿ ಸರ್ಕಾರದ ಹುನ್ನಾರ ಸಾರ್ವಜನಿಕ ವಲಯದ ಕೈಯಲ್ಲಿರುವ ಲಾಭದಾಯಕ ಯೋಜನೆಗಳನ್ನು ಖಾಸಗಿಯವರಿಗೆ ವರ್ಗಾಯಿಸಿ ಅವರು ಲಾಭವನ್ನು ಬಾಚಿಕೊಳ್ಳುವಂತೆ ಅನುವು ಮಾಡಿಕೊಡುವುದು.

ಎಂತಹ ಸದುದ್ದೇಶ ಅಲ್ಲವೆ?



- ಪೆ.ಎಸ್. ಮಣಿ

ಬಡತನ ಮಾಯವಾಗಲಿ ಎಂದು ಆಜ್ಞಾಪಿಸುವವರು

ನಮ್ಮ ಪ್ರಧಾನ ಮಂತ್ರಿಗಳಾದ ನರಸಿಂಹರಾಯರು ಇಂತಹ ಅಪ್ಪಣೆ ಕೊಡಿಸಿದ್ದಾರೆ. ಕಲ್ಕತ್ತಾದಲ್ಲಿ ನೇತಾಜಿ ಸುಭಾಶ್ ಚಂದ್ರ ಬೋಸರ ಜನ್ಮದಿನ ಮತ್ತು ಅವರ ಹೆಸರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಉದ್ಘಾಟನೆ ನೆರವೇರಿಸಿದ ಪ್ರಧಾನಿಗಳು ಆರ್ಥಿಕ ಸುಧಾರಣೆಯ ಲಾಭಗಳು ಬಡಜನರಿಗೆ ತಲುಪಬೇಕು ಎಂದಿದ್ದಾರೆ.

ಉದಾರೀಕರಣ ಬಡತನವನ್ನು ಹೆಚ್ಚಿಸಿದೆ. ಬಡವ ಶ್ರೀಮಂತರ ನಡುವಿನ ಅಂತರವನ್ನು ಹೆಚ್ಚಿಸಿದೆ ಎಂಬುದನ್ನೂ ಯೋಜನಾ ಆಯೋಗದ ಅಧ್ಯಯನಗಳೇ ತಿಳಿಸಿವೆ.

ಉದಾರೀಕರಣದ ಮುಖ್ಯ ಉದ್ದೇಶವೂ ಇದೇ ಹೀಗಿರುವಾಗ ಪ್ರಧಾನ ಮಂತ್ರಿಗಳು ಇಂತಹ ಮಾತನ್ನು ಆಡುವುದರ ಅರ್ಥವೇನು? ಉದಾರೀಕರಣದಿಂದ ಹೆಚ್ಚಾದ ಬಡತನ ಬಡವರನ್ನು ತಲುಪಬೇಕು ಎಂದೇ?

ಬ್ಯಾಂಕುಗಳಿಗೆ ಮನಮೋಹಕ ಪಾಠಗಳು

ಇದು ಮನಮೋಹನಸಿಂಗರ ಪಾಠಗಳು. ಬ್ಯಾಂಕುಗಳಿಗೆ ಆಗಾಗ ಪಾಠ ಹೇಳುತ್ತಲೇ ಬಂದಿರುವ ಮನಮೋಹನ ಸಿಂಗರು ಈಗ ಇನ್ನೊಂದು ಪಾಠ ಹೇಳಿದ್ದಾರೆ. ಕೃಷಿಗೆ ಹೆಚ್ಚಿನ ಸಾಲ ನೀಡಿ ಎಂದು ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಅವರು ಹೇಳಿದ್ದಾರೆ.

ಇದಲ್ಲದೆ ಬ್ಯಾಂಕುಗಳು ಹೆಚ್ಚೆಚ್ಚು ಸ್ಪರ್ಧಾತ್ಮಕವಾಗಬೇಕು ಎಂಬುದು ಅವರ ಆಗ್ರಹ.

ಆದರೆ ಅವರ ಉದಾರೀಕರಣದ ನೀತಿ ಈ ಸ್ಪರ್ಧಾತ್ಮಕತೆಯನ್ನು ಕಡಿಮೆ ಮಾಡುತ್ತದೆ ಎಂಬುದು ವಾಸ್ತವ. ಲಾಭ ಮಾಡುವುದು ಮುಖ್ಯ ಉದ್ದೇಶವಾದರೆ ಕೃಷಿಗೆ ಸಾಲ ನೀಡುವುದು ಅಷ್ಟು ಲಾಭದಾಯಕವಲ್ಲ, ಅದರಲ್ಲೂ ಬಡರೈತನಿಗೆ ನೀಡುವ ಸಾಲ ಹಾನಿ ತಂದುಕೊಡುವಂತದ್ದು. ಹೀಗೆ ಹಾನಿ ಮಾಡುವ ಬ್ಯಾಂಕುಗಳು ಸ್ಪರ್ಧಾತ್ಮಕವಾಗಿರುವುದು ಸಾಧ್ಯವಿಲ್ಲ. ಇದಕ್ಕೆ ಇನ್ನೊಂದು ಮಗ್ಗುಲಿದೆ. ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಇರುವ ನಿಬಂಧನೆ ಖಾಸಗಿ ವಲಯದ ಬ್ಯಾಂಕುಗಳಿಗೆ ಇಲ್ಲ, ಈ ದಿನಗಳಲ್ಲಿ ಮಹತ್ವದ ಸ್ಥಾನ ಪಡೆದು ದೇಶದಲ್ಲಿನ ವ್ಯವಹಾರದ ಬಹುದೊಡ್ಡ ಪಾಲು ಪಡೆಯುತ್ತಿರುವ ಖಾಸಗಿ ಬ್ಯಾಂಕುಗಳಿಂದ ಕೃಷಿಗೆ ಅಥವಾ ಆದ್ಯತೆಯ ವಲಯಕ್ಕೆ ಸಾಲ ದೊರೆಯದು.

ಆದ್ದರಿಂದ ಅವು ಹೆಚ್ಚು ಸ್ಪರ್ಧಾತ್ಮಕವಾಗಿರುವುದು ಸಾಧ್ಯ.

ಹೇಗಿವೆ ಈ ಮನಮೋಹಕ ಪಾಠಗಳು.

ಕೃಷಿ ಅಧಿಕಾರಿಯ ಅಮಾನತ್ತಿಗೆ ಒತ್ತಾಯ

ಗುಲ್ಬರ್ಗಾ: ನಕಲಿ ಗೊಬ್ಬರದ ದೊಡ್ಡ ಜಾಲವೇ ರೈತರ ಸಮೂಹವನ್ನು ಮೋಸ ಮಾಡಿ ಹಣದೋಚುವ ಹಾಗೂ ರಾಷ್ಟ್ರದ ಉತ್ಪಾದನೆಗೆ ಮಾರಕವಾದ ಕಾರ್ಯವೆಸಗುತ್ತಿದ್ದರೂ ಅಧಿಕಾರಿಗಳೂ ತಮಗೇನೂ ಗೊತ್ತಿಲ್ಲದಂತಹ ನಾಟಕ ಮಾಡುವ ಆಡಳಿತ ಯಂತ್ರ ಇನ್ನೂ ಮುಂದುವರೆಯುತ್ತಿರುವುದನ್ನು ಬದಲಿಸುವ ತಮ್ಮ ಪ್ರಾಮಾಣಿಕತೆಯನ್ನು ಪ್ರದರ್ಶಿಸಲು ಗುಲ್ಬರ್ಗಾ ಜಿಲ್ಲಾ ಕೃಷಿ ಅಧಿಕಾರಿಯನ್ನು ಕೂಡಲೇ ಜನತಾದಳದ ರಾಜ್ಯ ಸರಕಾರ ಅಮಾನತ್ತು ಗೊಳಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಬಾಳೆ ಒತ್ತಾಯಿಸಿದ್ದಾರೆ.

ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳ ಮಾರಾಟದಲ್ಲಿ ಅವ್ಯಾಹತವಾಗಿ ಮೋಸ ನಡೆಯುತ್ತಿದ್ದರೂ ಹಿಂದಿನ ಭ್ರಷ್ಟ ಕಾಂಗ್ರೆಸ್ ಸರಕಾರ ಏನೂ ಕ್ರಮ ಕೈಗೊಳ್ಳದೆ ರೈತರ ಹಿತವನ್ನು ಬಲಿಕೊಟ್ಟಿದೆ. ಅದರ ವಿರುದ್ಧ ರೈತರು ಇಂದು ಜನತಾದಳ ಸರಕಾರವನ್ನು ಆಡಳಿತಕ್ಕೆ ತಂದಿದ್ದಾರೆ. ಅದರ ಋಣ ತೀರಿಸಲು ಜನತಾದಳ ಸರಕಾರ ಮುಂದಾಗಬೇಕೆಂದು ರಾಜ್ಯ ಸಮಿತಿಯು ಒತ್ತಾಯಿಸಿದೆ.

ರೈತರ ಹಿತ ಕಾಪಾಡುವ ಕುರಿತು ಜನತಾದಳದ ನೂತನ ಮುಖ್ಯ ಮಂತ್ರಿಗಳು ಕೊಡುವ ಹೇಳಿಕೆಗಳು ಸ್ವಾಗತಾರ್ಹವಾಗಿದೆ. ಕಾಂಗ್ರೆಸ್ಸಿನ ಹೊಸ ಕೃಷಿ ನೀತಿ ರಾಷ್ಟ್ರದ ರೈತರ, ಗ್ರಾಮೀಣ ಭಾರತದ ಹಿಡಿತವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒತ್ತೆ ಇಡಲು ಆಹಾರಧಾನ್ಯದ ಉತ್ಪಾದನೆಯನ್ನು ನಾಶಪಡಿಸಿ ಹಣ್ಣುಹೂವು, ಇತರೆ ನಿರ್ಯಾತ ಅವಲಂಬಿತ ಬೇಡಿಕೆಗಳಿಗೆ ಪ್ರೋತ್ಸಾಹಿಸುವುದು. ಭೂಮಿಯಲ್ಲಿ ಸಣ್ಣ ಹಿಡುವಳಿಗಳನ್ನು ನಾಶ ಮಾಡಿ ಬಹುರಾಷ್ಟ್ರೀಯ ಕಂಪನಿಗಳು ಭೂಮಿಯ ಮೇಲೆ ಹಿಡಿತ ಸಾಧಿಸಿ ಕೃಷಿಯಾಧಾರಿತ ಕೈಗಾರಿಕೆಯ ಮೇಲೆ ಹಿಡಿತ ಸಾಧಿಸಲು ಅವಕಾಶ ನೀಡಲಾಗುತ್ತದೆ. ಆ ಮುಖಾಂತರ ರಾಜ್ಯದ ರಾಷ್ಟ್ರದ ಆಹಾರಕ್ಕಾಗಿ ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಅವಲಂಬನೆಯಾಗುವ ರಾಷ್ಟ್ರದ ಆರ್ಥಿಕ ಸ್ವಾವಲಂಬನೆಗೆ ಧಕ್ಕೆಯುಂಟಾಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಜನತಾದಳದ ರಾಜ್ಯ ಸರಕಾರ ಈ ನೀತಿಯನ್ನು ವಿರೋಧಿಸಲು, ಮುಂದಾಗಬೇಕಿದೆ ಆದರ ಬದಲಿಗೆ ಹಲವಾರು ಸಚಿವರು ವಿಭಿನ್ನವಾದ ಹೇಳಿಕೆಯನ್ನು ನೀಡುತ್ತಿದ್ದಾರೆ.

ಇನ್ನೊಂಡೆದೆ ಶೇಕಡ 16ರ ಲಾಭವನ್ನು ಗ್ಯಾರಂಟಿಯಾಗಿ ನೀಡುವ ಭರವಸೆಯೊಂದಿಗೆ ಅಮೆರಿಕದ ಕೋಜೆಂಟ್ರಿಕ್ಸ್ ಕಂಪನಿಯೊಂದಿಗೆ ವಿದ್ಯುತ್ ಉತ್ಪಾದನೆಗೆ ಒಪ್ಪಂದ ಮಾಡಿಕೊಳ್ಳುವ ಜನತಾ ದಳಧ ನೀತಿ ಮುಂದಿನ ವರ್ಷಗಳಲ್ಲಿ ಪಂಪುಸೆಟ್ಟು ಹೊಂದಿದ ರೈತ ಪ್ರತಿವರ್ಷಕ್ಕೆ 20,000 ವಿದ್ಯುತ್ ತೆರಿಗೆ ನೀಡುವಂತಹ ಒತ್ತಡಕ್ಕೆ ಒಳಪಡಿಸುವ ಮುಖಾಂತರ ರಾಜ್ಯದ ರೈತರನ್ನು ನಾಶ ಮಾಡುತ್ತದೆ.

ಇಂತಹ ಒಪ್ಪಂದಗಳನ್ನು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ತೀವ್ರವಾಗಿ ವಿರೋಧಿಸುತ್ತದೆ. ಮಾತ್ರವಲ್ಲ ಪ್ರತಿಭಟನೆಗೂ ಇಳಿಯುತ್ತದೆ. ಈ ದಿಕ್ಕಿನಲ್ಲಿ ರೈತರ ಸಹಕಾರ ಕೇಳಲು ಸಭೆಯನ್ನು ಕರೆದು ಚರ್ಚಿಸಲು ರಾಜ್ಯ ಸರಕಾರ ಮುಂದಾಗಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಕರ್ನಾಟಕ ಸುದ್ದಿ ಸಮಾಚಾರ

ಸಿಪಿಐ(ಎಂ) ಶಾಖಾ ಸಮ್ಮೇಳನಗಳು

ಕೊಡವೂರು

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಇದರ 15ನೇ ರಾಷ್ಟ್ರೀಯ ಅಧಿವೇಶನದ ಪೂರ್ವಭಾವಿಯಾಗಿ ಜನವರಿ 22ರಂದು ಕೊಡವೂರು ಶಾಖೆಯ ಸಮ್ಮೇಳನ ಕಾಂ.ದೋಗು ಸುವರ್ಣರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ ರಮೇಶ ಚಿತ್ತನ್ನರು ಕಳೆದ ವರ್ಷಗಳ ಕೆಲಸ ಕಾರ್ಯಗಳ ವರದಿ ನೀಡಿದರು. ಉದ್ದಿನ ಹಿತ್ಲುನಿಂದ ಗಂಡಿಮಜಲು ರಸ್ತೆಗೆ ಕೂಡಲೇ ಡಾಮರೀಕರಣಗೊಳಿಸಲು, ಕಲ್ಮಾಡಿ ಅಣೆಕಟ್ಟು ಕಾಮಗಾರಿಯನ್ನು ಕೂಡಲೇ ಮುಗಿಸುವಂತೆ, ತೆಂಕನಾಡಿಯೂರು ಪ್ರದೇಶದಲ್ಲಿ ರುದ್ರಭೂಮಿ, ಸರಕಾರಿ ಆಸ್ಪತ್ರೆ ಮತ್ತು ಅಂಚೆ ಕಛೇರಿಯನ್ನು ಕೂಡಲೇ ವ್ಯವಸ್ಥೆಗೊಳಿಸುವಂತೆ ಕರ್ನಾಟಕ ಸರಕಾರವನ್ನು ಒತ್ತಾಯಿಸುವ ಠರಾವನ್ನು ಅಂಗೀಕರಿಸಲಾಯಿತು. ಉಡುಪಿ ತಾಲೂಕು ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆರಿಸಲಾಯಿತು.

ಸಿಂಧನೂರು

ಜನವರಿ 22ರಂದು ಸಿಂಧನೂರಿನಲ್ಲಿ ನಡೆದ 3ನೇ ತಾಲೂಕು ಸಮ್ಮೇಳನದಲ್ಲಿ ಕಾಂ.ಶರಬಣ್ಣ ನಾಗಾಲಾಪುರರವರು ಸರ್ವಾನುಮತದಿಂದ ತಾಲೂಕು ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ತಾಲೂಕಿನ ವಿವಿಧ ಪ್ರದೇಶಗಳಿಂದ 48 ಜನ ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮಾವೇಶದಲ್ಲಿ 11 ಜನರ ತಾಲೂಕು ಸಮಿತಿಯನ್ನು ಆಯ್ಕೆ ಮಾಡಲಾಯಿತು. ಈ ಸಮಾವೇಶವನ್ನು ಕಾಂ.ವಿಕ್ರಂ ಉದ್ಘಾಟಿಸಿದರು. ಕಾಂ.ಶೇಕ್ಷಾಖಾದ್ರಿಯವರ ಸ್ವಾಗತದೊಂದಿಗೆ ಪ್ರಾರಂಭವಾದ ಕಾರ್ಯಕ್ರಮಗಳು ಪ್ರಾರಂಭವಾಯಿತು. ಶರಬಣ್ಣ ನಾಗಾಲಾಪುರ ಧ್ವಜಾರೋಹಣ ಮಾಡಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ. ಲಿಂಗಪ್ಪರವರು ಸಮಾರೋಪ ಭಾಷಣದಲ್ಲಿ ಮಾತನಾಡುತ್ತಾ ಕೃಷಿ ಕಾರ್ಮಿಕರ ಸಣ್ಣ ರೈತರ ಕಾರ್ಮಿಕರ ಸಂಘಟನೆಗಳನ್ನು ಕಟ್ಟುವುದರೊಂದಿಗೆ ರಾಜಕೀಯ ಅಧಿಕಾರ ಪಡೆಯಬೇಕೆಂದು ಕರೆ ನೀಡಿದರು. ಸಮ್ಮೇಳನದ ಅಧ್ಯಕ್ಷೀಯ ಮಂಡಳಿಯಲ್ಲಿ ಕಾಂ. ಗಂಗಾಬಾಯಿ, ಕಾಂ.ಗೋಪಾಲಕೃಷ್ಣ, ಕಾಂ. ಎಲ್ಲಪ್ಪ ವಹಿಸಿದ್ದರು.

ಬೆಳ್ತಂಗಡಿ

ಜನವರಿ 10ರಂದು ಬೆಳ್ತಂಗಡಿ ಸಿಪಿಐ(ಎಂ) ಶಾಖಾ ಸಮ್ಮೇಳನ ಬೆಳ್ತಂಗಡಿಯ ಎನ್.ಜಿ.ಓ. ಹಾಲ್‌ನಲ್ಲಿ ಜರುಗಿತು. ಸಮ್ಮೇಳನದಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಕಾಂ.ಜನಾರ್ಧನ್ ನಾಯಕ್ ಅವರು ಉದ್ಘಾಟನಾ ಭಾಷಣ ಮಾಡಿದರು. ಮುಖ್ಯ ಅತಿಥಿಗಳಾಗಿ ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಬಾಲಕೃಷ್ಣ ಶೆಟ್ಟಿ ಹಾಜರಿದ್ದು ಮಾತನಾಡಿದರು. ಬೀಡಿ ಕಾರ್ಮಿಕ ಸಂಘದ ಬೆಳ್ತಂಗಡಿ ತಾಲೂಕು ಅಧ್ಯಕ್ಷ ಕಾಂ. ಬಿ.ಎಂ.ಭಟ್ ಕರ್ನಾಟಕ ಪ್ರಾಂತ ರೈತ ಸಂಘದ ಬೆಳ್ತಂಗಡಿ ಶಾಖಾ ಉಪಾಧ್ಯಕ್ಷ ಕಾಂ. ರುಕ್ಮಯ್ಯ ಬಂಡಾರಿ ಮೊದಲಾದವರು ಉಪಸ್ಥಿತರಿದ್ದರು.

ಆ ಸಂದರ್ಭದಲ್ಲಿ ಬೆಳ್ತಂಗಡಿ ಶಾಖೆಗೆ ನೂತನ ಕಾರ್ಯದರ್ಶಿಯಾಗಿ ಬೆಳ್ತಂಗಡಿಯ ಯುವ ನ್ಯಾಯವಾದಿ ಕಾಂ. ಶಿವಕುಮಾರ್ ಅವರನ್ನು ಆಯ್ಕೆ ಮಾಡಲಾಯಿತು. ಬೆಳ್ತಂಗಡಿಯಲ್ಲಿ ಪಾರ್ಟಿ ಚಟುವಟಿಕೆ ಬಗ್ಗೆ ಚರ್ಚಿಸಿ ಜಿಲ್ಲಾ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಸಮ್ಮೇಳನ ಮುಕ್ತಾಯಗೊಳಿಸಲಾಯ್ತು. ಮೊದಲಿಗೆ ಕಾಂ. ಹರಿದಾಸ್ ಸ್ವಾಗತಿಸಿ ಕಾರ್ಯದರ್ಶಿ ಕಾಂ. ಶಿವಕುಮಾರ್ ಧನ್ಯವಾದವಿತ್ತರು.

ವಿರಾಜಪೇಟೆ

ಕೊಡಗಿನಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದೆ. ರಸ್ತೆಗಳು ಬಹಳ ಕೆಟ್ಟಿವೆ. ಸರ್ಕಾರಿ ಕಟ್ಟಡಗಳು, ಶಾಲಾ ಕಟ್ಟಡಗಳು ದುರಸ್ತಿಯಿಲ್ಲದೆ ಹಾಳಾಗುತ್ತಿವೆ. ಸೂಕ್ತ ಅಧ್ಯಾಪಕರ ಕೊರತೆಯಿದೆ. ಉದ್ಯೋಗಾವಕಾಶಗಳು ಹೆಚ್ಚುತ್ತಿಲ್ಲ.

ಆದುದರಿಂದ ಕೊಡಗು ಜಿಲ್ಲೆಯಲ್ಲಿ ಸಮಗ್ರ ಅಭಿವೃದ್ಧಿಗೆ ಸರ್ಕಾರ ಪ್ರತ್ಯೇಕ ಗುಡ್ಡಗಾಡು ಮಂಡಳಿಯನ್ನು ಸ್ಥಾಪನೆಮಾಡಿ ಹೆಚ್ಚಿನ ಅಧಿಕಾರ ನೀಡಬೇಕು, ಹಣ ಒದಗಿಸಬೇಕು, ತಾಲೂಕಿಗೊಂದು ಉದ್ಯೋಗ ವಿನಿಮಯ ಕೇಂದ್ರವನ್ನು ಸ್ಥಾಪಿಸಬೇಕು. ಈ ಮೂಲಕ ಕೊಡಗಿನ ಸಮಗ್ರ ಅಭಿವೃದ್ಧಿಯಾಗಬೇಕು ಎಂಬ ನಿರ್ಣಯವನ್ನು ಜನವರಿ 7ರಂದು ನಡೆದ ವಿರಾಜಪೇಟೆ ಶಾಖಾ ಸಮ್ಮೇಳನ ಕೈಗೊಂಡಿದೆ.

ಸಮ್ಮೇಳನವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ.ಸಿ.ನಂಜುಂಡಪ್ಪನವರು ಉದ್ಘಾಟಿಸಿದರು. ಕಾಂ.ಎಂ.ಎ.ಇಬ್ರಾಹಿಂ ಧ್ವಜಾರೋಹಣ ಮಾಡಿದರು. ಕಾಂ. ಹೆಚ್.ಎಂ.ಕಾಳಯ್ಯನವರು ಅಧ್ಯಕ್ಷತೆ ವಹಿಸಿದರು. ಶಾಖೆಯ ಹೊಸ ಕಾರ್ಯದರ್ಶಿಯಾಗಿ ಐ.ಆರ್.ಪ್ರಮೋದ್ ರವರನ್ನು ಆಯ್ಕೆ ಮಾಡಲಾಯಿತು.

ಮೈಸೂರು

ಸಿಪಿಐ(ಎಂ) ನಗರ ಶಾಖೆಯ, 4ನೇ ಸಮ್ಮೇಳನ ಇಂದು ಕಾಮ್ರೇಡ್ ಜಾರ್ಜ್‌ರವರ ಅಧ್ಯಕ್ಷತೆಯಲ್ಲಿ ಪಕ್ಷದ ಜಿಲ್ಲಾ ಕಛೇರಿಯಲ್ಲಿ ನಡೆಯಿತು. ಸಮ್ಮೇಳನವನ್ನು ಪ್ರಾದೇಶಿಕ ಸಮಿತಿ ಸದಸ್ಯರಾದ ಕಾ.ಹೆಚ್.ಕೆ. ತಿರುಮಲಾಚಾರ್ ರವರು ಉದ್ಘಾಟಿಸಿದರು. ನಂತರ 3ನೇ ಸಮ್ಮೇಳನದಿಂದ ಇದುವರಗೆ ಶಾಖೆಯು ನಡೆಸಿಕೊಂಡು ಬಂದಿರುವ ಪಕ್ಷದ ಚಟುವಟಿಕೆಗಳು ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ರಾಜ್ಯದ ಮತ್ತು ರಾಷ್ಟ್ರದಲ್ಲಿ ನಮ್ಮ ಪಕ್ಷದ ಬೆಳವಣಿಗೆಗೆ ನಮ್ಮ ಶಾಖೆಯು ಹೇಗೆ ಕೆಲಸ ಮಾಡಬೇಕು ಎಂಬ ವರದಿಯನ್ನು ಕಾರ್ಯದರ್ಶಿಯವರು ಮಂಡಿಸಿದರು. ಸದಸ್ಯರು ವರದಿಯ ಮೇಲೆ ಚರ್ಚೆ ವಿಮರ್ಶೆ ಮಾಡಿ ಹಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಕೊನೆಯಲ್ಲಿ ಕಾರ್ಯದರ್ಶಿಯಾಗಿ ಕಾಂ. ಎನ್.ಪುಟ್ಟಸ್ವಾಮಿಯವರು ಮುಂದುವರೆಯಲು ಸಮ್ಮೇಳನ ತೀರ್ಮಾನಿಸಿತು.

ಗುರುಪುರ

ಭಾರತ ಕಮ್ಯುನಿಸ್ಟ್ ಮಾರ್ಕ್ಸ್‌ವಾದಿ ಪಕ್ಷದ ಗುರುಪುರ ಪ್ರದೇಶದ 3ನೇ ಸಮ್ಮೇಳನವು ಜನವರಿ 26ರಂದು ಜರುಗಿತು. ಜಿಲ್ಲಾ ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್‌ರವರು ಸಮ್ಮೇಳನವನ್ನು ಉದ್ಘಾಟಿಸಿದರು. ಕಳೆದ ಮೂರು ವರ್ಷಗಳ ವರದಿಯನ್ನು ಕಾರ್ಯದರ್ಶಿ ಯು.ಬಿ.ಲೋಕಯ್ಯನವರು ಮಂಡಿಸಿದರು. ವರದಿಯ ವೇಲೆ ಪ್ರತಿನಿಧಿಗಳ ಪೈಕಿ 10 ಮಂದಿ ಚರ್ಚಿಸಿ ಸರ್ವಾನುಮತದಿಂದ ಪಾಸು ಮಾಡಿದರು.

ಹೊಸ ಸಮಿತಿಗೆ ಯು.ಲೋಕಯ್ಯನವರು ಕಾರ್ಯದರ್ಶಿಯಾಗಿ ಪುನರ್ ಆಯ್ಕೆಯಾದರು. ಸಮ್ಮೇಳನವು ಪ್ರದೇಶದ 27 ಗ್ರಾಮಗಳಲ್ಲಿ ತಾಲೂಕು ಮತ್ತು ಜಿಲ್ಲಾ ಪರಿಷತ್ ಚುನಾವಣಾ ಸಿದ್ಧತೆಯನ್ನು ಚರ್ಚಿಸಿತು.

ಮೈಸೂರು ಜಿಲ್ಲಾ ಸಮ್ಮೇಳನ

ಮೈಸೂರು: ಸಿಪಿಐ(ಎಂ) ಪಕ್ಷದ ಜಿಲ್ಲಾ ಘಟಕದ ೧೫ನೇ ಸಮ್ಮೇಳನವು ಪ್ರಥಮ ಬಾರಿಗೆ ಹೆಗ್ಗಡದೇವನಕೋಟೆಯಲ್ಲಿ ಇದೇ ಜನವರಿ ೨೮ ಮತ್ತು ೨೯ ರಂದು ಯಶಸ್ವಿಯಾಗಿ ಜರುಗಿತು. ಹಿರಿಯ ಸಂಗಾತಿಗಳಾದ ಹೆಚ್.ಕೆ. ತಿರುಮಲಾಚಾರ್‌ರವರು ಧ್ವಜಾರೋಹಣ ಮಾಡಿದರು.

ಅನಂತರ ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಿ.ನಂಜುಂಡಪ್ಪನವರು ನೆರವೇರಿಸಿದರು. ಉದ್ಘಾಟನಾ ಭಾಷಣದಲ್ಲಿ ಸಿಪಿಐ(ಎಂ) ಸಂವಿಧಾನಕ್ಕೆ ಬದ್ಧವಾಗಿ ಹೇಗೆ ತನ್ನ ಸಂಘಟನೆಯನ್ನು ಮತ್ತು ಚಳುವಳಿಗಳನ್ನು ಸಂವಿಧಾನಮತ್ತು ಕಾರ್ಯಕ್ರಮದ ಆಧಾರದಲ್ಲಿ ನಡೆಸಿಕೊಂಡು ಬರುತ್ತಾ ಇದೆ ಎಂಬುದನ್ನು ವಿವರಿಸಿದರು. ತ್ಯಾಗ ಬಲಿದಾನಗಳಿಂದ ಪಕ್ಷವು ಇಡೀ ದೇಶದಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ನಡೆಸಲು ಮುಂದಾಗಿರುವುದನ್ನು ಹಲವಾರು ಉದಾಹರಣೆಗಳಿಂದ ಸಭಿಕರ ಮುಂದೆ ವಿವರಿಸಿದರು.

ವರದಿಯ ಮಂಡನೆಯನ್ನು ಜಿಲ್ಲಾ ಘಟಕದ ಕಾರ್ಯದರ್ಶಿಯಾದ ಎಂ.ಎನ್. ಉಗ್ರಪ್ಪನವರು ಜಿಲ್ಲಾ ಸಮಿತಿಯ ಪರವಾಗಿ ವರದಿಯನ್ನು ಮಂಡಿಸಿ ಮಾತನಾಡಿದರು ಸಮ್ಮೇಳನದಲ್ಲಿ ಹಲವು ನಿರ್ಣಯಗಳನ್ನು ತೆಗೆದು ಕೊಳ್ಳಲಾಯಿತು.

ಸಮ್ಮೇಳನದಲ್ಲಿ ಎಂ.ಎನ್.ಉಗ್ರಪ್ಪ ಕಾರ್ಯದರ್ಶಿಯಾಗಿ ಹಾಗೂ ಎಸ್.ಎಸ್. ಪ್ರಭಾಕರ್, ಕೆ.ತಿಮ್ಮೇಗೌಡ, ಕೆ.ಬಸವರಾಜು, ಜಿ.ಜಯರಾಂ, ಎಂ.ಪಿ.ಸುಬ್ಬಣ್ಣ ಬಿ.ಟಿ. ಸುರೇಶ್, ಹೆಚ್.ಕೆ. ತಿರುಮಲಾಚಾರ್ ಮತ್ತು ಬಿ.ಎಂ. ಶಿವಣ್ಣ ಇವರನ್ನೊಳಗೊಂಡ 9 ಜನರ ಜಿಲ್ಲಾ ಸಮಿತಿಯನ್ನು ಚುನಾಯಿಸಲಾಯಿತು.

ರಾಜ್ಯ ಸಮ್ಮೇಳನಕ್ಕೆ ಸಂಗಾತಿಗಳಾದ ಎಸ್.ಎಸ್. ಪ್ರಭಾಕರ್, ಕೆ.ಬಸವರಾಜು ಮತ್ತು ಬಿ.ಎಂ. ಶಿವಣ್ಣ ಇವರುಗಳನ್ನು ಪ್ರತಿನಿಧಿಗಳನ್ನಾಗಿ ಆರಿಸಲಾಯಿತು.

ಸಂಜೆ ಬಹಿರಂಗ ಸಭೆ ಜರುಗಿತು. ಸಭೆಗೆ ಮುನ್ನ ಮಹಿಳೆಯರು ಪ್ರತಿನಿಧಿಗಳು ಮತ್ತು ಸಾರ್ವಜನಿಕರಾದಿಯಾಗಿ ಮುಖ್ಯ ಬೀದಿಗಳಲ್ಲಿ ಪ್ರದರ್ಶನ ನಡೆಸಿದರು.

ಸಭಿಕರನ್ನುದ್ದೇಶಿಸಿ ಕೆ.ಬಸವರಾಜು, ಸಿ.ನಂಜುಡಪ್ಪ, ಎಂ.ಎನ್. ಉಗ್ರಪ್ಪ ಮತ್ತು ಎಸ್.ವೈ ಗುರುಶಾಂತ್‌ರವರು ಮಾತನಾಡಿದರು

ಈದ್ಗಾ ವಿವಾದ ಪರಿಹಾರಕ್ಕೆ ಸಿಪಿಐ(ಎಂ) ಅಭಿನಂದನೆ

ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಅಂಜುಮಾನ್-ಎ-ಇಸ್ಲಾಂ ಸಂಸ್ಥೆಯವರು ಗಣರಾಜ್ಯ ದಿನವಾದ ಜನವರಿ 26ರಂದು ವಿದ್ಯುಕ್ತವಾಗಿ ರಾಷ್ಟ್ರ ಧ್ವಜಹಾರಿಸುವ ಮೂಲಕ ಬಿ.ಜೆ.ಪಿ. ಮತ್ತು ಸಂಘ ಪರಿವಾರದವರು ಕಳೆದ 3 ವರ್ಷಗಳಿಂದ ಈ ವಿಷಯವನ್ನೇ ತಮ್ಮ ಮತರಾಜಕೀಯದ ಬಂಡವಾಳವನ್ನಾಗಿ ಮಾಡಿಕೊಂಡು ಆಗಾಗ ಹುಟ್ಟು ಹಾಕುತ್ತಿದ್ದ ಕೋಮು ಗಲಭೆಗಳಿಗೆ ಸದ್ಯ ತೆರೆ ಎಳೆದಂತಾಗಿದೆ. ಮಹಾನಗರದಲ್ಲಿ ಈ ಮೂಲಕ ಕೋಮು ಸೌಹಾರ್ದತೆಯನ್ನು ಮರುಸ್ಥಾಪಿಸಲು ಸಹಕರಿಸಿದ ಅಂಜುಮಾನ್ ಸಂಸ್ಥೆಗೆ ರಾಜ್ಯ ಜನತಾ ದಳದ ಸರಕಾರಕ್ಕೆ ಮತ್ತು ಜನತೆಗೆ ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ತನ್ನ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತದೆ. ಈ ಮಹತ್ವದ ಬೆಳವಣಿಗೆಯಿಂದಾಗಿ ಈದ್ಗಾ ಮೈದಾನದ ಆಸ್ತಿಗೆ ಸಂಬಂಧಿಸಿದ ವಿವಾದವೂ ಶಾಂತಿ ಹಾಗೂ ಸೌಹಾರ್ದತೆಯಿಂದ ಪರಿಹಾರವಾಗಲಿ ಎಂದು ಸಿಪಿಐ(ಎಂ) ಹಾರೈಸುತ್ತದೆ.

ವಿವಾದಿತ ಈದ್ಗಾ ಮೈದಾನದಲ್ಲಿ ಧ್ವಜಾರೋಹಣದ ನೆಪದಲ್ಲಿ ಕೋಮು ಗಲಭೆಗಳಾಗಬಾರದೆಂದು ಸಿಪಿಐ(ಎಂ) ಇತ್ತೀಚೆಗೆ ಜನಜಾಗೃತಿ ಮೂಡಿಸಲು ಹುಬ್ಬಳ್ಳಿಯಲ್ಲಿ ಕೋಮು ಸೌಹಾರ್ದತೆಗಾಗಿ ಬೃಹತ್ ರ್‍ಯಾಲಿಯನ್ನು ಸಂಘಟಿಸಿರುವುದನ್ನು ಇಲ್ಲಿ ನೆನಪಿಸಬಹುದು.

ಗಣರಾಜ್ಯ ದಿನದಂದು ಹುಬ್ಬಳ್ಳಿಯಲ್ಲಿ ಸಂಘ ಪರಿವಾರಕ್ಕೆ ಸೇರಿದ ಎಬಿವಿಪಿಯವರು ಶಾಂತಿಭಂಗ ಮಾಡಲು ಪ್ರಯತ್ನಿಸಿರುವುದನ್ನು ಸಿಪಿಐ(ಎಂ) ತೀವ್ರವಾಗಿ ಖಂಡಿಸುತ್ತದೆ. ಇನ್ನೂ ಮುಂದೆ ಬಿಜೆಪಿ ಮತ್ತು ಸಂಘ ಪರಿವಾರದವರು ಯಾವುದೇ ನೆಪವೊಡ್ಡಿ ವಿವಾದಿತ ಈದ್ಗಾ ಮೈದಾನದ ಧ್ವಜಾರೋಹಣದ ಹಗರಣವನ್ನು ಪುನಃ ಎತ್ತದಂತೆ ಮತ್ತು ಅದಕ್ಕಾಗಿಯೇ ರಚಿತವಾದ ಸಮಿತಿಯನ್ನು ಈ ಕೂಡಲೇ ಬರಖಾಸ್ತು ಮಾಡುವಂತೆ ಸಿಪಿಐ(ಎಂ) ಒತ್ತಾಯಿಸಿದೆ.

ಕೋಮು ಸೌಹಾರ್ದತೆಗಾಗಿ ರಕ್ತದಾನ ಶಿಬಿರ

ಬೆಂಗಳೂರು: ಡಿವೈಎಫ್‌ಐ ಬೆಂಗಳೂರು ಜಿಲ್ಲಾ ಸಮಿತಿ, ಗಣರಾಜ್ಯೋತ್ಸವ ದಿನದಂದು ಕೋಮು ಸೌಹಾರ್ದತೆಯ ಆಶಯದೊಂದಿಗೆ ರಕ್ತದಾನ ಶಿಬಿರವನ್ನು ಸಂಘಟಿಸಿತ್ತು. ನಗರಾಭಿವೃದ್ಧಿ ಸಚಿವರಾದ ಶ್ರೀಯುತ ರೋಷನ್ ಬೇಗ್ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಖ್ಯಾತ ಚಿತ್ರನಟ ಹಾಗೂ ಶಾಸಕರಾದ ಶ್ರೀಯುತ ಅನಂತ್‌ನಾಗ್‌ರವರು ಮುಖ್ಯ ಅತಿಥಿಗಳಾಗಿದ್ದರು.

ರೋಷನ್‌ಬೇಗ್‌ರವರು ಮಾತನಾಡಿ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಎಂದು ಹುಬ್ಬಳ್ಳಿಯಲ್ಲಿ ಕೋಮುವಾದಿಗಳು ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತಿದ್ದರು. ಈಗ ಆ ಸಮಸ್ಯೆ ಬಗೆ ಹರಿದಿದೆ. ಕೋಮು ಸೌಹಾರ್ದತೆ ದೇಶದ ಐಕ್ಯತೆ ರಕ್ಷಣೆ ದೃಷ್ಟಿಯಿಂದ ಡಿವೈಎಫ್‌ಐ ನಂತಹ ಸಂಘಟನೆಯ ಬೆಳೆಯುವುದು ಅಗತ್ಯವೆಂದು ಅವರು ಅಭಿಪ್ರಾಯಪಟ್ಟರು. ಅನಂತನಾಗ್‌ರವರು ಮಾತನಾಡಿ ಗಣರಾಜ್ಯೋತ್ಸವದ ಸಂದರ್ಭವನ್ನು ರಕ್ತಪಾತಕ್ಕೆ ಕೋಮುವಾದಿಗಳು ಬಳಸುತ್ತಿರುವ ಈ ಸಂದರ್ಭದಲ್ಲಿ ಡಿವೈಎಫ್‌ಐ ಸಂಘಟನೆಯು ರಕ್ತದಾನ ಶಿಬಿರವನ್ನು ಸಂಘಟಿಸಿರುವುದು ಅಬಿನಂದನಾರ್ಹ ಎಂದರು. ಎಲ್ಲರ ರಕ್ತದ ಬಣ್ಣ ಕೆಂಪು ಎಂದ ಅವರು ಮತಽಂಧತೆ, ಭಾಷಾಂಧತೆಗಳ ವಿರುದ್ಧ ಕೆಲಸ ಮಾಡುವ ಡಿವೈಎಫ್‌ಐ ಸಂಘಟನೆಯನ್ನು ಎಲ್ಲರೂ ಸೇರಬೇಕು ಎಂದು ಕರೆ ನೀಡಿದರು.

ಕಂಪೇಗೌಡ ರಸ್ತೆಯ ಶ್ರೀವಿನಾಯಕ ವಿದ್ಯಾ ಸಂಸ್ಥೆಯ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಕೀಲರಾದ ಶ್ರೀಸತ್ಯನಾರಾಯಣ ಅವರು ಅಧ್ಯಕ್ಷತೆ ವಹಿಸಿದರು. ಡಿವೈಎಫ್‌ಐ ಜಿಲ್ಲಾ ಅಧ್ಯಕ್ಷ ಎಂ. ಅಶೋಕನ್ ಸ್ವಾಗತಿಸಿದರು. ಕಾರ್ಯದರ್ಶಿ ಗೋಪಾಲಕೃಷ್ಣ ವಿಷಯ ಪ್ರಸ್ತಾಪನೆ ಮಾಡಿದರು, ಖಜಾಂಚಿ ಕೆ. ಶ್ರೀನಿವಾಸ್ ವಂದಿಸಿದರು. ಶಾಲೆಯ ಅಧ್ಯಕ್ಷರಾದ ಶ್ರೀ ಶಂಕರಪ್ಪ ಹಾಜರಿದ್ದರು. ಇದೇ ಸಂದರ್ಭದಲ್ಲಿ ಡಿವೈಎಫ್‌ಐನ ರಕ್ತದಾನಿಗಳ ಕ್ಲಬ್ ನನ್ನು ಸಚಿವ ರೋಷನ್ ಬೇಗ್ ಅವರು ಉದ್ಘಾಟಿಸಿದರು. ಸುಮಾರು 70 ಜನ ರಕ್ತದಾನ ಮಾಡಿದರು.

ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಕಾರ್ಮಿಕರ ಮೇಲೆ ಪೋಲಿಸರ ದೌರ್ಜನ್ಯಕ್ಕೆ ಖಂಡನೆ

ಬೆಂಗಳೂರು: 5 ತಿಂಗಳಿಂದ ಅಕ್ರಮ ಬೀಗಮುದ್ರೆಗೊಳಗಾದ ಶ್ರೀವಳ್ಳಿಯಪ್ಪ ಟೆಕ್ಸ್‌ಟೈಲ್, ಹೆಜ್ಜಾಲ, ಬೆಂಗಳೂರು ಕಾರ್ಖಾನೆಯ ಕಾರ್ಮಿಕರನ್ನು ಪೋಲಿಸರು ನೆನ್ನೆ ದಿನ ಅಮಾನುಷವಾಗಿ ಥಳಿಸಿ, ದಸ್ತಗಿರಿ ಮಾಡಿ ಸೆಕ್ಷನ್ 307ರ ಪ್ರಕಾರ ಕೊಲೆ ಮೊಕದ್ದಮೆ ದಾಖಲಿಸಿ ಜೈಲಿಗೆ ಕಳುಹಿಸಿರುತ್ತಾರೆ. 47 ಮಂದಿ ಜೈಲಿನಲ್ಲಿದ್ದಾರೆ. ಕಾರ್ಖಾನೆಯ ಮುಂಭಾಗದಲ್ಲಿ ಮೈಸೂರ್ ರಸ್ತೆಯ ಬದಿಯಲ್ಲಿ ಹಾಕಿದ್ದ ಸಂಘದ ಟೆಂಟಿನೊಳಗೆ ನಿನ್ನೆ ಮುಂಜಾನೆ 4.30 ಗಂಟೆಗೆ ಪೋಲಿಸರು ನುಗ್ಗಿ ಮಲಗಿದ್ದ ಕಾರ್ಮಿಕರನ್ನು ದಸ್ತಗಿರಿಮಾಡಿ,ಟೆಂಟಿಗೆ ಬೆಂಕಿಹಾಕಿ ನೆಲಸಮ ಮಾಡಿದರು. ನಂತರ ಹತ್ತಿರದಲ್ಲಿ ಬೆಳಿಗ್ಗೆ ಬರುತ್ತಿದ್ದ ಕಾರ್ಮಿಕರನ್ನು ಚದುರಿಸಿ ಮಾಲಿಕನಿಗೆ ಸರಕನ್ನು ಹೊರಗೆ ಸಾಗಿಸಲು ಸಹಾಯ ಮಾಡಿದರು. ಬೀಗಮುದ್ರೆ ತೆರವು ಮಾಡಿ ಕಾರ್ಮಿಕರಿಗೆ ಕೆಲಸಕೊಡದೆ ಸರಕು ಸಾಗಿಸಬಾರದೆಂದು ಸಿವಿಲ್ ಕೋರ್ಟಿನ ತಡೆಯಾಜ್ಞೆಯಿದ್ದರೂ ಅದನ್ನು ಉಲ್ಲಂಘಿಸಿ ಬೀಗಮುದ್ರೆ ತೆರವು ಮಾಡದೆ ಸರಕು ಸಾಗಿಸಲಾಗಿದೆ. ಪೋಲಿಸರು ಈ ಕಾನೂನು ವಿರೋಧಿ ಕೃತ್ಯಕ್ಕೆ ಸಹಕಾರ ಕೊಟ್ಟಿರುತ್ತಾರೆ. ಅಲ್ಲದೆ ಮನೆ ಮನೆಗೆ ನುಗ್ಗಿ ನಮ್ಮ ಸಂಘದ ಸಕ್ರಿಯ ಸದಸ್ಯರನ್ನು ಹೊಡೆದು ದಸ್ತಗಿರಿ ಮಾಡಿರುತ್ತಾರೆ. ಈ ಕಾರ್ಮಿಕ ವಿರೋಧಿ ಪೋಲಿಸ್ ಧೋರಣೆಯನ್ನು ಸಿಐಟಿಯು ಖಂಡಿಸಿದೆ. ವಿವಾದವು ಸಮರ್ಪಕವಾಗಿ ಒಂದು ವಾರದಲ್ಲಿ ಬಗೆ ಹರಿಯದಿದ್ದರೆ ಸಿಐಟಿಯು ಜಿಲ್ಲಾ ಮಟ್ಟದಲ್ಲಿ ತೀವ್ರ ಪ್ರತಿಭಟನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ.

ಪೋಲೀಸ್ ರಾಜ್ಯವಾಗುತ್ತಿರುವ ಯೆಲ್ಟ್‌ಸಿನ್‌ರ ರಶ್ಯನ್ ಸರ್ಕಾರ

ರಶ್ಯಾಕ್ಕೆ ಬಂಡವಾಳಶಾಹಿಯನ್ನು ಅರಗಿಸಿಕೊಳ್ಳಲಾಗುತ್ತಿಲ್ಲ. ಈ ದೈತ್ಯನನ್ನು ವಾಂತಿ ಮಾಡಲು ಇನ್ನೂ ಸಾಕಷ್ಟು ಶಕ್ತಿಕೂಡಿಸಿಕೊಂಡಿಲ್ಲ. ಆದರೆ ಯೆಲ್ಟ್‌ಸಿನ್ ಸರ್ಕಾರ ಇನ್ನೂ ರಶ್ಯನರ ಗಂಟಲಲ್ಲಿ ಅದನ್ನು ತುರುಕಿಸಲು ಯತ್ನಿಸುತ್ತಿದೆ. ಇದು ಇಂದಿನ ರಶ್ಯದ ದುಸ್ಥಿತಿಯನ್ನು ಮೈಕ್‌ಡೇವಿಡೋವ್ ಎಂಬ ಅಮೇರಿಕನ್ ಪತ್ರಕರ್ತ ಬಣ್ಣಿಸಿದ ರೀತಿ, ಚೆಚೆನ್ಯಾ ಸ್ವಾಯುತ್ತ ಪ್ರದೇಶದ ಮೇಲೆ ನಡೆಸಿದ ಭೀಕರ ಧಾಳಿ, ಯೆಲ್ಟ್‌ಸಿನ್ ಸರ್ಕಾರದ ಬಿಕ್ಕಟ್ಟನ್ನು ತೀರಾ ಉಲ್ಬಣಗೊಳಿಸಿದೆ. ಯೆಲ್ಟ್‌ಸಿನ್‌ರ ಮಾಫಿಯಾ-ಬಂಡವಾಳಶಾಹಿ ಸರ್ಕಾರದ ರಾಜಕೀಯ ಬೆಂಬಲದಲ್ಲಿ ಭಾರಿ ಕುಸಿದ ಕಂಡು ಬಂದಿದೆ. ಅಧ್ಯಕ್ಷರ ಸ್ವಂತ ಪಕ್ಷವಾದ 'ರಶ್ಯನರ ಐಕ್ಯ'ಯ ನಾಯಕರು ಕಾರ್ಯಕರ್ತರು ಚೆಚೆನ್ಯಾ ನರಮೇಧವನ್ನು ಸಾರ್ವಜನಿಕವಾಗಿ ಖಂಡಿಸಿದ್ದಾರೆ. ರ್‍ಯಾಲಿಗಳನ್ನು ನಡೆಸಿದ್ದಾರೆ.

ಯೆಲ್ಟ್‌ಸಿನ್‌ರ ಮಾಜಿ ಪ್ರಧಾನ ಮಂತ್ರಿ ಮತ್ತು ಅರ್ಥಮಂತ್ರಿ, ಹಾಗೂ ಸೋವಿಯೆತ್ ಒಕ್ಕೂಟದ ವಿಘಟನೆ ರಶ್ಯನ್ ಪಾರ್ಲಿಮೆಂಟಿನ ನಾಶ ಹಾಗೂ ಮಾಸ್ಕೋ ನರಮೇಧದಲ್ಲಿ ನೆಚ್ಚಿನ ಬಂಟನಾಗಿದ್ದ ಗೈದರ್ ಮತ್ತು ಆತನ ಪಕ್ಷ ಈಗ ಚೆಚೆನ್ಯಾದಲ್ಲಿ 'ಮಾನವ ಹಕ್ಕು'ಗಳ ವಕ್ತಾರನಾಗಿಬಿಟ್ಟಿದೆ. ಯೆಲ್ಟಸಿನ್‌ರ ಬಾಡಿಗೆ ಸೈನಿಕರಂತೆ ಅವರ ಪರವಾಗಿ ತುತ್ತೂರಿ ಊದುತ್ತಿದ್ದ 'ಬುದ್ಧಿಜೀವಿ'ಗಳು, ಟಿ.ವಿ. ರೇಡಿಯೊ ಪತ್ರಕರ್ತರು ಇತ್ಯಾದಿಗಳಿಗೂ ಚೆಚೆನ್ಯಾ ದುರಂತ ನುಂಗಲಾರದ ತುತ್ತಾಗಿದೆ. ಯೆಲ್ಟಸಿನ್‌ರ ಚೆಚೆನ್ಯಾ ಕಾರ್ಯಾಚರಣೆಯನ್ನು ಅವರು ಟೀಕಿಸುತ್ತಿದ್ದಾರೆ. ಇವರೆಲ್ಲಾ ಅವರ ಮೂಗಿನಡಿಯಲ್ಲಿ ಮಾಸ್ಕೋ ನರಮೇಧವನ್ನು ಬೆಂಬಲಿಸಿದ್ದು ಮಾತ್ರವಲ್ಲ, ಅದರಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಆದರೆ ಗ್ರೋಝ್ನಿ (ಚೆಚೆನ್ಯಾ ರಾಜಧಾನಿ) ರಕ್ತಪಾತದ ಜವಾಬ್ದಾರಿಯಿಂದ ಹಿಂಜರಿಯುತ್ತಿದ್ದಾರೆ. ಅವರು ಸಕ್ರಿಯವಾಗಿ ಬೆಂಬಲಿಸಿದ ಮಾಫಿಯಾ-ಬಂಡವಾಳಶಾಹಿ ಸರ್ಕಾರ ಅಧಿಕಾರಕ್ಕೆ ಅಂಟಿಕೊಂಡಿರಲು ಮಾಡುತ್ತಿರುವ ಹತಾಶ ಪ್ರಯತ್ನ ಭಾಗ ಇದು ಎಂದು ಅವರಿಗೂ ಗೊತ್ತಿದೆ.

ರಶ್ಯನ್ ಎಡಪ್ರಗತಿಪರ ಶಕ್ತಿಗಳು ಚೆಚೆನ್ಯಾ ರಕ್ತಪಾತವನ್ನು ತೀವ್ರವಾಗಿ ಟೀಕಿಸಿದೆ. ಜನತೆ ಸಹ ಈ ಕಾರ್ಯಾಚರಣೆ. ತಪ್ಪು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇತ್ತೀಚೆಗೆ ನಡೆಸಿದ ಸಮೀಕ್ಷೆಯೊಂದರ ಪ್ರಕಾರ ಶೇಕಡಾ 66 ಜನ ಚೆಚೆನ್ಯಾ ಕಾರ್ಯಾಚರಣೆಯನ್ನು ವಿರೋಧಿಸಿದ್ದಾರೆ. ಶೇಕಡಾ 20 ಜನ ಮಾತ್ರ ಬೆಂಬಲಿಸಿದ್ದಾರೆ. ಚೆಚೆನ್ಯಾ ರಕ್ತಪಾತದ ನಂತರ ಯೆಲ್ಟ್‌ಸಿನ್‌ರ ಬೆಂಬಲ ಸಹ ತೀವ್ರವಾಗಿ ಕುಸಿದಿದೆ. ಸಮೀಕ್ಷೆಯೊಂದರ ಪ್ರಕಾರ ಅವರನ್ನು ಬೆಂಬಲಿಸುವವರ ಪ್ರಮಾಣ ಶೇಕಡಾ 8ಕ್ಕೆ ಇಳಿದಿದೆ. ಚೆಚೆನ್ಯಾ ದುಸ್ಸಾಹಸದಿಂದ ರಶ್ಯನ್ ಪಡೆಗಳಲ್ಲಿದ್ದ ಅತೃಪ್ತಿ ಅಸ್ಫೋಟಕಾರಿ ಹಂತಕ್ಕೆ ಬಂದಿದೆ. ಹಲವಾರು ಜನಪ್ರಿಯ ಜನರಲ್‌ಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ. ರಶ್ಯದ ಆರ್ಥಿಕ ದುಸ್ಥಿತಿ, ಪಡೆಗಳಲ್ಲಿ ತೀವ್ರ ಅತೃಪ್ತಿ ಹರಡಿದೆ. ಚೆಚೆನ್ಯಾದ ಮಿಲಿಟರಿ ಘರ್ಷಣೆ ದೀರ್ಘ ಗೆರಿಲ್ಲಾ ಹೋರಾಟವಾಗಿ ಮುಂದುವರೆಯುವ ಸಾಧ್ಯತೆ ರಶ್ಯನ್ ಪಡೆಗಳನ್ನು ಇನ್ನಷ್ಟು ಆತಂಕಗೊಳಿಸಿದೆ.

ಚೆಚೆನ್ಯಾ ರಕ್ತಪಾತ ಹೀಗೆ ಯೆಲ್ಟ್ ಸಿನ್ ಸರ್ಕಾರದ ಹಾಗೂ ಮಾಫಿಯಾ ಬಂಡವಾಳಶಾಹಿ ವರ್ಗದ ಬಿಕ್ಕಟ್ಟನ್ನು ವೇಗವಾಗಿ ತೀವ್ರಗೊಳಿಸುತ್ತಿದೆ. ಇದರಿಂದ ತಪ್ಪಿಸಿಕೊಳ್ಳಲು ಗೈದರ್ ಹಾಗೂ ಬೆಂಬಲಿಗರು 'ಮಾರುಕಟ್ಟೆ ಸುಧಾರಣೆ'ಯನ್ನು (ಬಂಡವಾಳಶಾಹಿ ಹೇರುವುದನ್ನು) ಉಳಿಸಿಕೊಳ್ಳಲು ಹೊಸ ನಾಯಕನನ್ನು ಹುಡುಕುತ್ತಿದ್ದಾರೆ. ಅದಕ್ಕಾಗಿ ಚೆಚೆನ್ಯಾ ರಕ್ತಪಾತದ ಜವಾಬ್ದಾರಿಯಿಂದ ದೂರ ಓಡುತ್ತಿದ್ದಾರೆ. ಯೆಲ್ಟ್‌ಸಿನ್ ರಶ್ಯನ್ ಐಕ್ಯತೆ, ಸಮಗ್ರತೆಯ ರಕ್ಷಕ ಎಂದು ಬಿಂಬಿಸಲು ಪ್ರಯತ್ನಿಸುತ್ತಿದೆ. ಚೆಚೆನ್ಯಾವನ್ನು ಸೋಲಿಸುವುದು ಅದಕ್ಕಾಗಿ ಆತನಿಗೆ ಮುಖ್ಯ. ಅಲ್ಲದೆ ಆತನ ರಾಜಕೀಯ ಬೆಂಬಲದ ನೆಲೆ ಇನ್ನಷ್ಟು ಕುಗ್ಗಿರುವುದರಿಂದ ಇನ್ನಷ್ಟು ಹೆಚ್ಚಿನ ಸರ್ವಾಧಿಕಾರಿ ನೀತಿಯನ್ನು ಅನುಸರಿಸುವ ಸಾಧ್ಯತೆ ಜಾಸ್ತಿ. ಇದು ಈಗಾಗಲೇ ಕಾಣಬರುತ್ತಿದೆ.

ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದದ ಮುಂದುವರಿಕೆಗೆ ಅಡಚಣೆ

1970ರಲ್ಲಿ ಅಮೇರಿಕದ ಅಧಿಪತ್ಯದ ಅಡಿಯಲ್ಲಿ ಸಹಿ ಹಾಕಲಾದ ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದದ ಅವಧಿ ಈ ವರ್ಷ ಮುಗಿಯುತ್ತದೆ. ಈ ವರ್ಷ ನಡೆಯಲಿರುವ ಸಮ್ಮೇಳನ ಈ ಒಪ್ಪಂದದ ಮುಂದುವರಿಕೆಯ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿದೆ. ಈ ಸಮ್ಮೇಳನಕ್ಕಾಗಿ ಈಗಾಗಲೇ ವಿಶ್ವಸಂಸ್ಥೆಯಲ್ಲಿ ಸಿದ್ಧತಾ ಸಮಿತಿಗಳು ಒಮ್ಮತಕ್ಕೆ ಪ್ರಯತ್ನಿಸುತ್ತಿವೆ. ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದ, ಈಗಾಗಲೇ ಅಣ್ವಸ್ತ್ರ ಹೊಂದಿರುವ ದೇಶಗಳನ್ನು ಹೊರತುಪಡಿಸಿ ಇತರ ದೇಶಗಳು ಅಣ್ವಸ್ತ್ರಗಳನ್ನು ಹೊಂದುವುದರ ಮೇಲೆ ನಿಷೇಧ ಹೇರುತ್ತಿದೆ. ಆದರೆ ಈಗಾಗಲೇ ಅಣ್ವಸ್ತ್ರ ಹೊಂದಿರುವ ದೇಶಗಳು ಇನ್ನೂ ಹೊಸ ಅಣ್ವಸ್ತ್ರ ತಯಾರಿಸುವುದಕ್ಕಾಗಲಿ, ಅಣ್ವಸ್ತ್ರಗಳ ಉತ್ಪಾದನೆ ಹೆಚ್ಚಿಸುವುದರ ಮೇಲಾಗಲಿ ಯಾವುದೇ ನಿಷೇಧ ಇಲ್ಲ. ಇದು ಮೂರನೇ ಜಗತ್ತಿನ ದೇಶಗಳ ವಿರುದ್ಧ ತಾರತಮ್ಯ ತೋರುವ ಒಪ್ಪಂದ ಭಾರತ, ಚೀನಾ, ಪಾಕಿಸ್ತಾನ, ಇಸ್ರೇಲ್‌ಗಳು ಈ ಒಪ್ಪಂದಕ್ಕೆ ಸಹಿ ಹಾಕದ ಪ್ರಮುಖ ದೇಶಗಳು. ಉಳಿದ ಹೆಚ್ಚಿನ ದೇಶಗಳು ಸಹಿ ಹಾಕಿವೆ. ಈಗ ಈ ಒಪ್ಪಂದದ ಮುಂದುವರಿಕೆ ವಿವಾದಾಸ್ಪದವಾಗಿದೆ.

ಅಮೇರಿಕ ಒಪ್ಪಂದವನ್ನು 'ಅನಿರ್ದಿಷ್ಟ ಕಾಲ', 'ಬೇಷರತ್ತಾಗಿ' ಮುಂದುವರೆಸುವ ನಿರ್ಣಯ ಬಯಸುತ್ತದೆ. ಈ ನಿರ್ಣಯಕ್ಕೆ ಬೆಂಬಲಗಳಿಸಲು ಈಗಾಗಲೇ ಪ್ರಚಾರ, ಒತ್ತಡ, ಬೆದರಿಕೆಯ ತಂತ್ರಗಳನ್ನು ಆರಂಭಿಸಿದೆ. ಇಂತಹ ಯಾವುದೇ ಪ್ರಸ್ತಾವ ನಿರ್ಣಯವಾಗಲು ಕನಿಷ್ಠ 85 ದೇಶಗಳ ಬೆಂಬಲ ಬೇಕು. ಯುರೋಪಿನ 52 ದೇಶಗಳು ಹಾಗೂ ಏಳು ಮಧ್ಯ ಅಮೇರಿಕಾ ದೇಶಗಳು ಅಮೇರಿಕನ್ ಪ್ರಸ್ತಾವಕ್ಕೆ ಬೆಂಬಲ ನೀಡಿವೆ. ಇನ್ನೂ 26 ದೇಶಗಳ ಬೆಂಬಲವನ್ನು ಗಳಿಸಲು ಅಮೇರಿಕನ್ ಅಧಿಕಾರಿಗಳು ಎಲ್ಲಾ ಕುತಂತ್ರಗಳನ್ನು ಬಳಸಲಾರಂಭಿಸಿದೆ. 22 ಅರಬ್ ದೇಶಗಳ ಲೀಗ್ ಈಜಿಪ್ಟ್ ನಾಯಕತ್ವದಲ್ಲಿ ಈ ಪ್ರಸ್ತಾವಕ್ಕೆ ವಿರೋಧ ವ್ಯಕ್ತಪಡಿಸಿದೆ. ಇಸ್ರೇಲ್ ಒಪ್ಪಂದಕ್ಕೆ ಸಹಿ ಹಾಕದೆ, ಅರಬ್ ದೇಶಗಳು ಸಹಿ ಹಾಕುವುದಿಲ್ಲ ಎಂದು ಬಲವಾಗಿ ಪ್ರತಿಪಾದಿಸಿವೆ. ಈಜಿಪ್ಟ್‌ನ ಈ ನಿಲುವು ಅಮೇರಿಕವನ್ನು ಆತಂಕಿತಗೊಳಿಸಿದೆ.

25 ವರ್ಷಗಳ ಮುಂದುವರಿಕೆ ಅಥವಾ ಸಾಮ್ರಾಜ್ಯಶಾಹಿ ದೇಶಗಳನೆಲ್ಲಾ ಷರತ್ತುಗಳಿಂದ ಒಪ್ಪಂದದ ಪ್ರಸ್ತಾವಗಳೂ ಸಮ್ಮೇಳನದ ಮುಂದೆ ಬರುವ ಸಾಧ್ಯತೆ ಇದೆ.

ಪ್ರಾವ್ದಾದ ಮೇಲೆ ಹೊಸ ದಾಳಿ

ರಶ್ಯನ್ ಕಮ್ಯುನಿಸ್ಟ್ ಪಕ್ಷದ ಪತ್ರಿಕೆ 'ಪ್ರಾವ್ದಾ' ಫ್ಯಾಸಿಸ್ಟ್ ಧಾಳಿಯನ್ನು ಎದುರಿಸುತ್ತಿದೆ. ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಎಲ್ಲಾ ಆಸ್ತಿಗಳನ್ನು ಸರ್ಕಾರ ವಶಪಡಿಸಿಕೊಳ್ಳುವುದರ ಭಾಗವಾಗಿ, ಪ್ರಾವ್ದಾದ ಎಲ್ಲಾ ಆಸ್ತಿಪಾಸ್ತಿಗಳನ್ನು ಸರ್ಕಾರ ವಹಿಸಿಕೊಂಡು ಖಾಸಗಿಯವರಿಗೆ ವಹಿಸಿತು. ಪ್ರಾವ್ದಾದ 12 ಅಂತಸ್ತಿನ ಭಾರಿ ಕಟ್ಟಡ ಕಬಳಿಸಿದ ಖಾಸಗಿ ಮಾಲಿಕರು ಅದರ ಒಂದು ಭಾಗವನ್ನು ಪ್ರಾವ್ದಾಗೆ ಕೊಟ್ಟು 'ಭಾರಿ ಬಾಡಿಗೆ' ವಸೂಲಿ ಮಾಡುತ್ತಿದ್ದರು. ಪ್ರಾವ್ದಾ ಬಳಸುವ ಕಾಗದ, ಇಂಕು ಇತ್ಯಾದಿಗಳ ಮೇಲೆ ಏರಿಸಿರುವ ಬೆಲೆಯಿಂದ ಅದರ ಬೆಲೆ ಏರಿಸಬೇಕಾಗಿ ಬಂದಿದ್ದು, ಅದರ ಪ್ರಸಾರ ಶೇಕಡಾ 10ಕ್ಕೆ ಇಳಿದಿದೆ. ಎರಡು ಬಾರಿ ಪೋಲೀಸ್ ಕಾರ್ಯಾಚರಣೆ ನಡೆಸಿ ಅದರ ಪ್ರಕಟಣೆ ನಿಲ್ಲಿಸಲಾಗಿತ್ತು. ಈಗ ಪ್ರಾವ್ದಾದ ಕಟ್ಟಡವನ್ನು 'ರೂಸಿಯಾಸಾ ಗಜೆಟಾ' ಎಂಬ ಸರ್ಕಾರಿ ಪತ್ರಿಕೆಗೆ ಕೊಡಲಾಗಿದೆ. ಈ ಹೊಸ ಪತ್ರಿಕೆ ಪ್ರಾವ್ದಾವನ್ನು ಆ ಕಟ್ಟಡ ಬಿಟ್ಟು ಓಡಿಸಬಹುದು. ಇದು ಪೋಲೀಸ್ ರಾಜ್ಯವಲ್ಲದೆ ಮತ್ತೇನು?

ಇಸ್ರೇಲ್‌ನಲ್ಲಿ ಆತ್ಮಹತ್ಯೆ - ಬಾಂಬ್ ಧಾಳಿಯಿಂದ 19 ಜನರ ಸಾವು

ಇಸ್ರೇಲ್‌ನಲ್ಲಿ ಆತ್ಮಹತ್ಯೆ ಬಾಂಬ್ ಧಾಳಿಯೊಂದರಿಂದ 19 ಜನರು ಸತ್ತು, ಇನ್ನೊಮ್ಮೆ ಇಸ್ರೇಲ್- ಪ್ಯಾಲೇಸ್ಟೇನ್ ಶಾಂತಿ ಒಪ್ಪಂದದ ಹುಳುಕುಗಳು ಬಯಲಾಗಿವೆ. ಇಸ್ಲಾಮಿಕ್ ಜಿಹಾದ್ ಎಂಬ ಮೂಲಭೂತವಾದಿ ಸಂಘಟನೆ ಇದು ತನ್ನ ಕೆಲಸ ಎಂದು ಹೇಳಿಕೊಂಡಿದೆ. ಜಿಹಾದ್ ನಾಯಕನೊಬ್ಬನ ಕಾರ್-ಬಾಂಬ್‌ನಲ್ಲಿ ಕೊಲೆ (ಇಸ್ರೇಲಿ ಏಜಂಟ್ ...ಂದ) ಹಾಗೂ ಪ್ಯಾಲೆಸ್ಟೇನ್ ಪೋಲೀಸ್‌ಗಳ ಕೊಲೆ (ಇಸ್ರೇಲಿ ಸೈನ್ಯದಿಂದ)ಗೆ ಇದು ಪ್ರತೀಕಾರ ಎಂದು ಎಂದು ಹೇಳಿಕೊಂಡಿದೆ.

ಪ್ಯಾಲೇಸ್ಟೇನ್ ಗೆ ನಿಜವಾದ ಸ್ವಯಂಮಾಡಳಿತ ಕೊಡದ ಸೋಗಿನ ಶಾಂತಿ ಒಪ್ಪಂದ, ಆ ಒಪ್ಪಂದವನ್ನು ಜಾರಿ ಮಾಡುವಲ್ಲಿ ಇಸ್ರೇಲ್‌ನ ಅಪ್ರಾಮಾಣಿಕತೆ, ಪ್ಯಾಲೆಸ್ಟೇನ್ ರಾಷ್ಟ್ರೀಯತಾ ಭಾವನೆಗೆ ಪದೇ ಪದೇ ಅವಮಾನ - ಶಾಂತಿ ಒಪ್ಪಂದದ ನಂತರ ಹಿಂಸಾಚಾರ ಹೆಚ್ಚುವಂತೆ ಮಾಡಿದೆ. ಸಾಮ್ರಾಜ್ಯಶಾಹಿಗಳು ಹೊರಿಸಿರುವ 'ಸ್ಮಶಾನ-ಶಾಂತಿ'ಯ ಪೊಳ್ಳನ್ನು ಇನ್ನೊಮ್ಮೆ ಬಯಲಿಗೆ ತಂದಿದೆ. ಭಯೋತ್ಪಾದಕ ಚಟುವಟಿಕೆಯನ್ನು ಪ್ಯಾಲೇಸ್ಟೇನ್ ಜನ ಬೆಂಬಲಿಸದಿದ್ದರೂ, ಅದನ್ನು ವಿರೋಧಿಸದಿರುವ ಸ್ಥಿತಿ ತಂದಿದೆ.

ಲೋಕಸಂಚಾರ

-ಶರತ್‌ಚಂದ್ರ

20 ಲಕ್ಷ ಬ್ರಿಟಿಷ್ ನಿರ್ಗತಿಕರು ಜನಗಣತಿಯಿಂದ ಹೊರಕ್ಕೆ

ಇತ್ತೀಚೆಗೆ ನಡೆದ ಬ್ರಿಟಿಷ್ ಜನಗಣತಿಯಲ್ಲಿ ಕನಿಷ್ಠ 20 ಲಕ್ಷ ಜನರು, ಜನಗಣತಿಯ ನಿಲುಕಿಗೆ ಸಿಕ್ಕಿಲ್ಲ ಎಂಬ ಬಗ್ಗೆ ಬ್ರಿಟಿಷ್ ಭೌಗೋಳಶಾಸ್ತ್ರಜ್ಞರ ಸಮ್ಮೇಳನವೊಂದು ಗಮನ ಸೆಳೆದಿದೆ. ಮನೆ ಇಲ್ಲದ ನಿರ್ಗತಿಕರು, ನಿರುದ್ಯೋಗಿ ಏಶ್ಯನರು ಕರಿಯರು ಹಾಗೂ ಸಮಾಜದ ಹೊರಗಿರುವ ಲಕ್ಷಾಂತರ ಜನರು ಈ ಜನಗಣತಿಯ ಅಳವಿಗೆ ಸಿಕ್ಕಿಲ್ಲ. ಬ್ರಿಟಿಷ್ ಜನಗಣತಿ ಸಂಸ್ಥೆ ಇವರನ್ನು ಒಳಗೊಳ್ಳುವ ಆಸಕ್ತಿ ತೋರಿಸಿಲ್ಲ. ಜನಗಣತಿ ಸಂಗ್ರಹಿಸುವ ಅಂಕೆ ಸಂಖ್ಯೆ, ಸಮಾಜಕಲ್ಯಾಣ ಸೇವೆಗಳ ಯೋಜನೆಗೆ ಬಳಸುವಂತಹಾದ್ದರಿಂದ ಇದು ಕಲ್ಯಾಣ ಯೋಜನೆಗಳನ್ನು ವಿಕೃತಗೊಳಿಸುವಂತಹದು ಎಂದು ಅವರು ಎಚ್ಚರಿಸಿದ್ದಾರೆ.

ರಶ್ಯಾದ ಬಾಹ್ಯಾಕಾಶ ಕಾರ್ಯಕ್ರಮದಲ್ಲಿ ಬಿಕ್ಕಟ್ಟು

ರಶ್ಯದ ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಸಾಕಷ್ಟು ಹಣ ವಿನಿಯೋಗಗೊಳಿಸದಿದ್ದರೆ, ಈ ಕೈಗಾರಿಕೆಯಲ್ಲಿ ದುಡಿಯುವ 3.6 ಲಕ್ಷ ಕಾರ್ಮಿಕರಲ್ಲಿ 2.6 ಲಕ್ಷ ಕಾರ್ಮಿಕ ಈ ವರ್ಷದ ಕೊನೆ ಒಳಗೆ ಉದ್ಯೋಗ ಕಳೆದುಕೊಳ್ಳಲಿದ್ದಾರೆ ಎಂದು ವಕ್ತಾರರೊಬ್ಬರು ಹೇಳಿದ್ದಾರೆ. ಈ ಬಾಹ್ಯಾಕಾಶದಲ್ಲಿ ಸುತ್ತಿರುವ 177 ರಶ್ಯನ್ ಉಪಗ್ರಹಗಳಲ್ಲಿ 104 ಉಪಗ್ರಹಗಳು ಈಗಾಗಲೇ ಅದರ ನಿರೀಕ್ಷಿತ ಜೀವನಾವಧಿ ದಾಟಿವೆ. ಅವುಗಳ ಬದಲು ಹೊಸ ಉಪಗ್ರಹ ಉಡಾಯಿಸುವ ಯೋಜನೆ ತೀವ್ರ ಸಂಪನ್ಮೂಲಗಳ ಬಿಕ್ಕಟ್ಟಿನಿಂದ ಜಾರಿಯಾಗಿಲ್ಲ. ಕಳೆದ ವರ್ಷ ಯೋಜಿತ 102ರ ಬದಲು, ಕೇವಲ 49 ಉಪಗ್ರಹಗಳನ್ನು ಉಡಾಯಿಸಲಾಯಿತು. ಈ ವರ್ಷ 79 ಉಪಗ್ರಹಗಳನ್ನು ಯೋಜಿಸಲಾಗಿದ್ದರು, ಅದಕ್ಕೆ ಬೇಕಾದ ಸಂಪನ್ಮೂಲಗಳನ್ನು ಒದಗಿಸಲಾಗಿಲ್ಲ.

ರಶ್ಯದ ಹೆಮ್ಮೆಯಾಗಿದ್ದ ಬಾಹ್ಯಾಕಾಶ ಕಾರ್ಯಕ್ರಮ ಯೆಲ್ಟಸಿನ್ ಸರ್ಕಾರದ 'ಬಂಡವಾಳಶಾಹಿ ವ್ಯವಸ್ಥೆ'ಯ ಮುಂದಿನ ಬಲಿಪಶುವೇ?

ವರ್ಗ ಹೋರಾಟವನ್ನು ಮುನ್ನಡೆಸುತ್ತಿರುವ ರಶ್ಯನ್ ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನಕ್ಕೆ ಸಿಪಿಐ(ಎಂ) ಶುಭಾಶಯ

ಜನವರಿ 21 ರಿಂದ ಆರಂಭವಾದ ರಶ್ಯನ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ ಮೂರನೇ ಮಹಾಧಿವೇಶನಕ್ಕೆ ಸಿಪಿಐ(ಎಂ) ಯಶಸ್ಸು ಕೋರುತ್ತಾ ಸಂದೇಶಕಳಿಸಿದೆ. ರಷ್ಯನ್ ಕಮ್ಯುನಿಸ್ಟರು ಭವ್ಯ ಕ್ರಾಂತಿಕಾರಿಪರಂಪರೆ ಪಡೆದವರು. ವಿಶ್ವದ ದಿಕ್ಕನ್ನೇ ಬದಲಿಸಿದ ಯುಗಾಂತರಕಾರೀ ಬೋಲ್ಶೆವಿಕ್ ಕ್ರಾಂತಿ, ನಂತರ ಸಮಾಜವಾದದ ರಚನೆ, ಫ್ಯಾಸಿಸಂನಿಂದ ಕೋಟ್ಯಾಂತಾರ ಜನರ ವಿಮೋಚನೆ - ಈ ಎಲ್ಲಾ ಪರಂಪರೆ ಜಗತ್ತಿನಾದ್ಯಂತ ಹಲವಾರು ಕ್ರಾಂತಿಕಾರಿಗಳಿಗೆ ಸ್ಫೂರ್ತಿನೀಡಿದ ಈಗಲೂ ನೀಡುತ್ತಿರುವ ಸಂಗತಿಗಳು ಎಂದಿರುವ ಸಿಪಿಐ(ಎಂ) ಶುಭಾಶಯ ಸಂದೇಶ ಸೋವಿಯತ್ ಒಕ್ಕೂಟದ ಘಟನೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಕ್ರಾಂತಿಕಾರಿ ಸತ್ವದಿಂದ "ದಾರಿ" ತಪ್ಪಿದುದರಿಂದ ಆಗಿದ್ದು ಅಂತರ್ರಾಷ್ಟ್ರೀಯ ಪ್ರತಿಗಾಮಿಗಳ ಆಕ್ರಮಣಶೀಲತೆಯನ್ನು ಕೂಡಾ ಪ್ರದರ್ಶಿಸುವ ಸಂಗತಿ ಎಂದಿದೆ. ಆದರೆ 1991ರ ನಂತರದ ಘಟನೆಗಳು ಸಮಾಜವಾದ ಕಟ್ಟುವಲ್ಲಿ ಕುಟುಂಬದ ಸಮಸ್ಯೆಗಳಿಗೆ ಬಂಡವಾಳಶಾಹಿ ಎಂದೂ ಉತ್ತರವಲ್ಲ ಎಂದೂ ತೋರಿಸಿದೆ. ಬಂಡವಾಳಶಾಹಿಯನ್ನು ಅಲ್ಲಿ ಮರುಸ್ಥಾಪಿಸುವ ಅತ್ಯಂತ ನೋವಿನ, ಸಂಕಷ್ಟದ ಈ ದಿನಗಳಲ್ಲೂ ಸಾಮ್ರಾಜ್ಯಶಾಹಿಯ ಹಾಗೂ ಅದರ ಏಜೆಂಟರ ವಿಪರೀತ ಅಪಪ್ರಚಾರದ ನಡುವೆಯೂ ಕಮ್ಯುನಿಸ್ಟರು ಮತ್ತೆ ಒಟ್ಟು ಸೇರಿ ವರ್ಗ ಹೋರಾಟವನ್ನು ಮುನ್ನಡೆಸುತ್ತಿರುವುದು ಸಂತೋಷದ ಸಂಗತಿ ಎಂದಿರುವ ಸಿಪಿಐ(ಎಂ) ಈ ವರ್ಗ ಹೋರಾಟದಲ್ಲಿ ರಶ್ಯನ್ ಕಮ್ಯುನಿಸ್ಟರಿಗೆ ಯಶಸ್ಸು ದೊರಕಲಿ ಎಂದು ಹಾರೈಸಿದೆ. ರಶ್ಯನ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನ ರಶ್ಯಾದಲ್ಲಿ ಜನಗಳ ಹೋರಾಟವನ್ನು ಇನ್ನಷ್ಟು ಬಲಗೊಳಿಸಿ ದುಡಿಯುವ ಜನಸಮೂಹಗಳೊಂದಿಗೆ ಬಲವಾದ ಸಂಪರ್ಕ ಸಾಧಿಸುತ್ತದೆ ಎಂಬ ವಿಶ್ವಾಸವನ್ನು ಸಿಪಿಐ(ಎಂ) ವ್ಯಕ್ತಪಡಿಸಿದೆ.

ಹಿಂದಿನ ಸಂಚಿಕೆಯಲ್ಲಿ ಹೇಳಿದ ಔಶ್‌ವಿಟ್ಸ್ ಯಾತನಾ ಶಿಬಿರದ ವಿಮೋಚನೆಯ 50ನೇ ವಾರ್ಷಿಕದ ಆಚರಣೆಯ ದಿನ ಔಶ್‌ವಿಟ್ಸ್-ಬರ್ಕೆನೇವ್ ರೈಲ್ವೇ ಹಳಿಯ ಮೇಲೆ ಮಹಿಳೆಯೊಬ್ಬಳು ದೀಪ ಹಚ್ಚುತ್ತಿದ್ದಾರೆ-ಫ್ಯಾಸಿಸಂನ ಯಾತನಾ ಶಿಬಿರಗಳಲ್ಲಿ ಬಲಿಯಾದ 40 ಲಕ್ಷ ಮಂದಿಯ ಹೆಸರಲ್ಲಿ



KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಜಮ್ಮುನಲ್ಲಿ ಬಾಂಬ್ ಸ್ಫೋಟ ಪರಿಸ್ಥಿತಿ ಸುಧಾರಿಸುತ್ತಿರುವುದರ ಲಕ್ಷಣವೇ?

ಜಮ್ಮು ಗಣತಂತ್ರದಿನದ ಸಮಾರಂಭದಲ್ಲಿ ಎಂಟು ಜನರನ್ನು ಆಹುತಿ ಪಡೆದು ಇತರ ಹಲವರನ್ನು ಗಾಯಗೊಳಿಸಿರುವ ಬಾಂಬ್ ಸ್ಫೋಟವನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಈ ಉಗ್ರಗಾಮಿಗಳ ಕೃತ್ಯ ಭಯೋತ್ಪಾದನೆ ನಡೆಸುವ ಪ್ರಯತ್ನ ರಾಜ್ಯಪಾಲರ ಜೀವದ ಮೇಲೆ ನಡೆಸಿರುವ ಈ ಪ್ರಯತ್ನದಿಂದ ಅವರು ಸ್ವಲ್ಪದರಲ್ಲಿ ಪಾರಾಗಿದ್ದಾರೆ. ಜಮ್ಮುವಿನಲ್ಲಿ, ಭದ್ರತಾ ವ್ಯವಸ್ಥೆ ಸಾಮಾನ್ಯವಾಗಿ ಬಿಗಿಯಾಗಿರುವ ಒಂದು ಸಮಾರಂಭದಲ್ಲಿ ಉಗ್ರಗಾಮಿಗಳಿಗೆ ಧಾಳಿ ನಡೆಸಲು ಸಾಧ್ಯವಾಗಿದೆಯೆಂದರೆ ಭದ್ರತಾ ವ್ಯವಸ್ಥೆಯಲ್ಲಿ ಗಂಭೀರ ಲೋಪಗಳಿರಬೇಕು ಎಂದಿರುವ ಪೊಲಿಟ್ ಬ್ಯೂರೋ ಇಂತಹ ಉದ್ರೇಕಕಾರಿ ಕೃತ್ಯದೆದುರು, ಜಮ್ಮುವಿನ ಜನತೆ ಶಾಂತಿ ಮತ್ತು ಕೋಮು ಸೌಹಾರ್ದವನ್ನು ಕಾಪಾಡಿಕೊಳ್ಳುವುದು ಅಗತ್ಯ ಎಂದಿದೆ. ಇತ್ತೀಚಿನ ದಿನಗಳಲ್ಲಿ ಜಮ್ಮು-ಕಾಶ್ಮೀರದಲ್ಲಿ ಪರಿಸ್ಥಿತಿ ಸುಧಾರಿಸುತ್ತಿದೆ, ಚುನಾವಣೆ ನಡೆಸಲು ಸಾಧ್ಯ ಎಂಬ ಭಾವನೆ ಸೃಷ್ಟಿಸುವ ಪ್ರಯತ್ನ ನಡೆದಿದೆ. ಈ ಘಟನೆ ಜಮ್ಮು-ಕಾಶ್ಮೀರದ ಸನ್ನಿವೇಶದ ಬಗ್ಗೆ ಸಂತೃಪ್ತ ಭಾವನೆ ತಳೆಯಬಾರದು ಎಷ್ಟು ಅಗತ್ಯ ಎಂಬುವನ್ನು ಸಾರಿದೆ ಎಂದು ಪೊಲಿಟ್ ಬ್ಯೂರೋ ಅಭಿಪ್ರಾಯಪಟ್ಟಿದೆ.

ಕೋಬೆ ವಿನಾಶ: ಸಿಪಿಐ(ಎಂ) ಸಂತಾಪ

ಜಪಾನಿನ ಕೋಬೆಯಲ್ಲಿ ನಡೆದಿರುವ ಭೂಕಂಪದ ವಿನಾಶಲೀಲೆಯ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಜಪಾನೀ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಮಂಡಳಿಯ ಅಧ್ಯಕ್ಷ, ಕಾಮ್ರೇಡ್ ತೆತ್ಸುರಘೋ ಫುವಾರವರಿಗೆ ಈ ಕೆಳಗಿನ ಸಂದೇಶ ಕಳಿಸಿದ್ದಾರೆ-

"ಕೋಬೆ ಮತ್ತು ಪಶ್ಚಿಮ ಜಪಾನಿನ ಇತರ ಪ್ರದೇಶಗಳಲ್ಲಿ ಭೂಕಂಪದ ವಿನಾಶಲೀಲೆಯ ಸುದ್ದಿಯನ್ನು ಅತ್ಯಂತ ಬೇಸರದಿಂದ ಕೇಳಿದೆವು. ಅಪಾರ ಪ್ರಾಣ ಹಾನಿ, ಮನೆ-ಆಸ್ತಿಗಳಿಗೆ ಅಗಾಧ ನಷ್ಟ ಭಾರಿತೊಂದರೆಯನ್ನುಂಟು ಮಾಡಿವೆ. ಸಿಪಿಐ(ಎಂ) ಪರವಾಗಿ ನಾವು ತಮ್ಮ ಕುಟುಂಬದ ಸದಸ್ಯರನ್ನು, ಸಂಬಂಧಿಕರನ್ನು ಕಳಕೊಂಡ ಜನರಿಗೆ ನಮ್ಮ ಹಾರ್ದಿಕ ಸಂತಾಪ ವ್ಯಕ್ತಪಡಿಸುತ್ತೇವೆ. ಈ ದುರಂತದ ವೇಳೆಯಲ್ಲಿ ಜಪಾನೀ ಜನತೆ ಈ ಅನಾಹುತವನ್ನು ಧೈರ್ಯದಿಂದ ಹಾಗೂ ತಮ್ಮ ಜೀವನವನ್ನು ಮತ್ತೆ ಕಟ್ಟುವ ದೃಢತೆಯಿಂದ ಎದುರಿಸುತ್ತಾರೆ ಎಂಬ ವಿಶ್ವಾಸ ನಮಗಿದೆ.

ನಿಮಗೆ ಹಾಗೂ ಕಷ್ಟಕ್ಕೊಳಗಾದ ಎಲ್ಲರಿಗೂ ನಮ್ಮ ಸಹಾನುಭೂತಿ ಹಾಗೂ ಸೌಹಾರ್ದವನ್ನು ವ್ಯಕ್ತಪಡಿಸುತ್ತೇವೆ."

"ವಿಮಾ ಖಾಸಗೀಕರಣಕ್ಕೆ ಕೈ ಹಾಕಬೇಡಿ"

-ಪೊಲಿಟ್‌ಬ್ಯೂರೋ ಒತ್ತಾಯ

ರಾಷ್ಟ್ರೀಕೃತ ವಿಮಾ ಉದ್ದಿಮೆಯನ್ನು ವಿದೇಶೀ ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ಭಾರತೀಯ ಖಾಸಗೀ ಬಂಡವಾಳಕ್ಕೆ ತೆರೆಯುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ವಿರೋಧಿಸಿದೆ. ಈ ಬಗ್ಗೆ ತೆರೆಮರೆಯಲ್ಲಿ ಕೆಲವು ಸಮಯದಿಂದ ಮಾತುಕತೆಗಳು ನಡೆಯುತ್ತಿದೆ ಎಂಬುದನ್ನು ಅದು ಗಮನಿಸಿದೆ.

ವಾಣಿಜ್ಯ ಕಾರ್ಯದರ್ಶಿ ರೊನಾಲ್ಡ್ ಬ್ರೌನ್ ನೇತೃತ್ವದ ಅಮೇರಿಕನ್ ವ್ಯಾಪಾರೀ ನಿಯೋಗದ ಮಾತುಕತೆಗಳ ಸಮಯದಲ್ಲಿ ವಿಮಾ ಮಾರುಕಟ್ಟೆಯನ್ನು ವಿದೇಶೀ ಕಂಪನಿಗಳಿಗೆ ತೆರೆಯುವ ಮಾತನ್ನು ಸರಕಾರ ಕೊಟ್ಟಿದೆಯಷ್ಟೇ ಅಲ್ಲ, ಟಾಟಾಗುಂಪು ಹಾಗೂ ಒಂದು ಅಮೇರಿಕನ್ ಕಂಪನಿ ನಡುವೆ ಜಂಟಿಯಾಗಿ ವಿಮಾ ಕಂಪನಿ ತೆರೆಯುವ ಬಗ್ಗೆ ಮಾತುಕತೆಗೂ ಸಹಿ ಹಾಕಲಾಗಿದೆ.

ವಿಮಾ ರಂಗದ ಕುರಿತಾದ ಮಲ್ಹೋತ್ರಾ ಸಮಿತಿ ವರದಿಯನ್ನು ಸಂಸತ್ತಿನಲ್ಲಿ ಇನ್ನೂ ಮಂಡಿಸಿ, ಚರ್ಚಿಸಿಲ್ಲ, ಆದ್ದರಿಂದ ಸರಕಾರ ವಿಮಾ ಖಾಸಗೀಕರಣವನ್ನು ಪೂರೈಸಿಯೇ ಸಂಸತ್ತಿನೆದುರು ಬರುವ ಯೋಚನೆಯಿಟ್ಟುಕೊಂಡಂತಿದೆ. ಇಂತಹ ಕ್ರಮ ಸಂಸದೀಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುತ್ತದೆ ಎಂದು ಪೊಲಿಟ್ ಬ್ಯೂರೋ ಖಂಡಿಸಿದೆ.

ವಿಮಾ ವಲಯವನ್ನು ತೆರೆದಿಡುವುದು ದೇಶದ ಮಹತ್ವದ ಹಿತಾಸಕ್ತಿಗೆ ವಿರುದ್ಧವಾದದ್ದು ಎರಡು ಸಾರ್ವಜನಿಕ ವಲಯದ ಸಂಸ್ಥೆಗಳಾದ ಎಲ್.ಐ.ಸಿ. ಮತ್ತು ಜಿ.ಐ.ಸಿ. ಚೆನ್ನಾಗಿ ಕಾರ್ಯನಿರ್ವಹಿಸಿದೆ. ಅವು ಭಾರತದಲ್ಲಿರುವ ಏಕೈಕ ಸಾಮಾಜಿಕ ಭದ್ರತೆಯ ಸೌಲಭ್ಯ ಒದಗಿಸುತ್ತಿದೆ. ಅಲ್ಲದೆ ಮಹತ್ವಪೂರ್ಣವಾದ ಸಾಮಾಜಿಕ ವಲಯದಲ್ಲಿ ಅತೀ ಹೆಚ್ಚು ಹಣ ತೊಡಗಿಸುವ ಸಂಸ್ಥೆಗಳಿವು ಎಂದು ಪೊಲಿಟ್ ಬ್ಯೂರೋ ಅಭಿಪ್ರಾಯಪಟ್ಟಿದೆ.

ಮಲ್ಹೋತ್ರಾ ವರದಿಗೆ ಸಾರ್ವಜನಿಕರಿಂದ, ಕಾರ್ಮಿಕ ಸಂಘಗಳಿಂದ, ವಿಮಾ ನೌಕರರಿಂದ ಬಲವಾದ ಪ್ರತಿಭಟನೆ ಬಂದಿದೆ. ಆದ್ದರಿಂದ ವಿಮಾ ವಲಯದ ಖಾಸಗೀಕರಣಕ್ಕೆ ಕೈ ಹಾಕಬಾರದೆಂದು ಪೊಲಿಟ್ ಬ್ಯೂರೋ ರಾವ್ ಸರಕಾರವನ್ನು ಒತ್ತಾಯಿಸಿದೆ.

ವಿದ್ಯುತ್ ಬರ ಹಾಗೂ ವಿದ್ಯುತ್ ನೀತಿ....

ಪುಟ 1ರಿಂದ

ವಿದೇಶೀ ಬಂಡವಾಳವನ್ನು ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿಸುವುದನ್ನು ಸಾರಾಸಗಟಾಗಿ ಸಿಪಿಐ(ಎಂ) ವಿರೋಧಿಸುವುದಿಲ್ಲ ಎಂದಿರು ರಾಜ್ಯ ಸಮಿತಿ" ಆದರೆ ಕರ್ನಾಟಕದ ಜನ ಸಾಮಾನ್ಯರಿಗೆ ಹಾಗೂ ದೇಶದ ಒಟ್ಟು ಹಿತಕ್ಕೆ ಮಾರಕವಾಗದಂತೆ ಸ್ಪರ್ಧಾತ್ಮಕವಾಗಿ ಅಗ್ಗದ ಬೆಲೆಯಲ್ಲಿ ವಿದ್ಯುತ್ ಒದಗಿಸುವುದಕ್ಕಾಗಿ ರಾಜ್ಯ ಸರಕಾರ ಹಾಗೂ ವಿದೇಶೀ-ದೇಶೀ ಖಾಸಗಿ ಬಂಡವಾಳ ಜೊತೆ ಗೂಡಿದಂತಹ ಜಂಟಿ ಉದ್ಯಮಗಳನ್ನು ಸ್ವಾಗತಿಸುವುದಾಗಿ ಹೇಳಿದೆ.

ನಿಜ. ಕೇಂದ್ರ ಸರಕಾರದ ನೀತಿಗಳು ರಾಜ್ಯ ಸರಕಾರಗಳ ಕೈಗಳನ್ನು ಹಲವು ವಿಧದಲ್ಲಿ ಕಟ್ಟಿಹಾಕಿವೆ. ಆದರೆ ಈ ಮಿತಿಗಳೊಳಗೂ ಮಹಾರಾಷ್ಟ್ರದ ಕಾಂಗ್ರೆ ಸರಕಾರ ಮಾಡಿದಂತೆ ಏನ್ರೋನ್ ಮಾದರಿ ಅನುಸರಿಸುವ ಅಗತ್ಯವಿಲ್ಲ ಎಂದು ಪಶ್ಚಿಮ ಬಂಗಾಳ ಸರಕಾರದ ವಿದ್ಯುತ್ ನೀತಿ ತೋರಿಸಿಕೊಟ್ಟಿದೆ.(ಐಕ್ಯರಂಗದ 18.12.94ರ ಸಂಚಿಕೆ ನೋಡಿ) ಏನ್ರೋನ್ ಮಾದರಿ ಅನುಸರಿಸಿದರೆ ಕರ್ನಾಟಕ ವಿದ್ಯುತ್ ಮಂಡಳಿಯ ಆದಾಯದ ಶೇ. 71 ಈ ವಿದೇಶೀ ಕಂಪನಿಗೆ ತೆರಲೆಂದೇ ಹೋಗುತ್ತದೆ ಎಂದು ವಿದ್ಯುತ್ ವಲಯದ ತಜ್ಞರು ಅಂದಾಜು ಮಾಡಿದ್ದಾರೆ. ಈ ಬಗ್ಗೆ ಕರ್ನಾಟಕ ಸರಕಾರದಿಂದ ರಾಜ್ಯದ ಜನತೆ ಖಂಡಿತಾ ವಿವರಗಳನ್ನು ನಿರೀಕ್ಷಿಸುತ್ತಾರೆ.

15ನೇ ಮಹಾಧಿವೇಶನದಲ್ಲಿ ಪಕ್ಷದ ಸಂವಿಧಾನಕ್ಕೆ ಕೆಲವು ತಿದ್ದುಪಡಿ ಪ್ರಸ್ತಾವಗಳು

ಡಿಸೆಂಬರ್ 27ರಿಂದ 29ರವರೆಗೆ ಕಲ್ಕತ್ತೆಯಲ್ಲಿ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಪಕ್ಷದ ಮುಂಬರುವ ಮಹಾಧಿವೇಶನದಲ್ಲಿ ಪಕ್ಷದ ಸಂವಿಧಾನಕ್ಕೆ ಕೆಲವು ತಿದ್ದುಪಡಿಗಳನ್ನು ಸೂಚಿಸಲು ನಿರ್ಧರಿಸಿತು. ಪಕ್ಷದ ಸಂವಿಧಾನದ ಪ್ರಕಾರ ಇಂತಹ ತಿದ್ದುಪಡಿ ಪ್ರಸ್ತಾವಗಳನ್ನು ಮಹಾಧಿವೇಶನದ ಎರಡು ತಿಂಗಳ ಮೊದಲು ತಿಳಿಯಪಡಿಸಬೇಕು.

ಕೇಂದ್ರ ಸಮಿತಿಯ ತಿದ್ದುಪಡಿ ಪ್ರಸ್ತಾವಗಳು

1. ಕಲಮು IV ಕ್ಕೆ ತಿದ್ದುಪಡಿ

ವಿಭಾಗ 4ರ ನಂತರ ಈ ಕೆಳಗಿದನ್ನು ಸೇರಿಸಬೇಕು.

"ಅಪರೂಪದ ಸಂದರ್ಭಗಳಲ್ಲಿ ಕೇಂದ್ರ ಸಮಿತಿ ಅಥವಾ ರಾಜ್ಯ ಸಮಿತಿ ಇಂತಹ ಸದಸ್ಯರಿಗೆ ಪಕ್ಷದ ಪೂರ್ಣ ಸದಸ್ಯತ್ವವನ್ನು ನೀಡಬಹುದು"

ಇನ್ನೊಂದು ರಾಜಕೀಯ ಪಕ್ಷದಿಂದ ಬರುವ ಒಬ್ಬ ವ್ಯಕ್ತಿಗೆ ಪೂರ್ಣ ಸದಸ್ಯತ್ವ ನೀಡಲು ಅವಕಾಶ ಕೊಡುವ ಅಂಶ ಪಕ್ಷದ ಸಂವಿಧಾನದಲ್ಲಿ ಈಗ ಇಲ್ಲ. ಈ ತಿದ್ದುಪಡಿ ಅಂತಹ ಅವಕಾಶ ಕಲ್ಪಿಸಲಿಕ್ಕಾಗಿ.

2. ಕಲಮು VII ಕ್ಕೆ ತಿದ್ದುಪಡಿ

ಕಲಮು VII ಕ್ಕೆ ಕೆಳಗಿನಂತೆ ವಿಭಾಗ 3 ನ್ನು ಸೇರಿಸುವುದು:

"(3) ಪಕ್ಷದ ಸದಸ್ಯತ್ವದಿಂದ ಕೈಬಿಡುವ ನಿರ್ಣಯಗಳ ಬಗ್ಗೆ ಮನವಿ ಮಾಡುವ ಹಕ್ಕು ಇರುತ್ತದೆ" ಈ ತಿದ್ದುಪಡಿ ನವೀಕರಣದ ಸಮಯದಲ್ಲಿ ಮನಬಂದಂತೆ ಪಕ್ಷದ ಸದಸ್ಯತ್ವದಿಂದ ಕೈ ಬಿಡುವ ವರ್ತನೆಗಳ ವಿರುದ್ಧ ಮನವಿ ಮಾಡಲು ಅವಕಾಶ ನೀಡುತ್ತದೆ.

3. ಕಲಮು XVIII ಕ್ಕೆ ತಿದ್ದುಪಡಿ

ವಿಭಾಗ 2(c) ಯ ಸ್ಥಾನದಲ್ಲಿ ಈ ಕೆಳಗಿನದನ್ನು ಇರಬೇಕು:

"ಪಕ್ಷದ ಪೂರ್ಣ ಸದಸ್ಯತ್ವದಿಂದ ಉಚ್ಚಾಟನೆ, ಅಮಾನತು ಹಾಗೂ ಪಕ್ಷದ ಸದಸ್ಯತ್ವದಿಂದ ಕೈಬಿಡುವ ಬಗ್ಗೆ ನಿರ್ಣಯಗಳ ವಿರುದ್ಧ ರಾಜ್ಯ ಸಮಿತಿ ಅಥವಾ ರಾಜ್ಯ ನಿಯಂತ್ರಣ ಆಯೋಗಕ್ಕೆ ಮನವಿ ಸಲ್ಲಿಸಿದ್ದು ಅದು ತಿರಸ್ಕರಿಸಲ್ಪಟ್ಟ ಸಂದರ್ಭಗಳಲ್ಲಿ"

ನಿಯಂತ್ರಣ ಆಯೋಗ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಿ ಪಕ್ಷದ ಪೂರ್ಣ ಸದಸ್ಯತ್ವದಿಂದ ಅಮಾನತು, ಸದಸ್ಯತ್ವದಿಂದ ಕೈಬಿಡುವ ನಿರ್ಣಯಗಳ ಬಗ್ಗೆ ಮನವಿಗಳನ್ನು ಸ್ವೀಕರಿಸುವ ಅವಕಾಶ ನೀಡಲು ಈ ತಿದ್ದುಪಡಿ. ಈಗ ನಂತರದ ಕೆಳಗಿನ ಸಮಿತಿ ಬಿಟ್ಟು ಇತರ ಕೆಳಗಿನ ಸಮಿತಿಗಳು ಪಕ್ಷದ ಪೂರ್ಣ ಸದಸ್ಯತ್ವದಿಂದ ಅಮಾನತು ಅಥವಾ ಸದಸ್ಯತ್ವದಿಂದ ಕೈ ಬಿಡುವ ಬಗ್ಗೆ ನಿರ್ಣಯಿಸಿದ್ದರೆ ಅವುಗಳ ವಿರುದ್ಧ ಮನವಿ ಸ್ವೀಕರಿಸುವ ಅಧಿಕಾರ ಕೇಂದ್ರ ಅಥವಾ ರಾಜ್ಯ ನಿಯಂತ್ರಣ ಆಯೋಗಗಳಿಗಿಲ್ಲ.

4. ಕಲಮು XVIIIಕ್ಕೆ ತಿದ್ದುಪಡಿ

ಈ ಕೆಳಗಿದನ್ನು ವಿಭಾಗ 3 ಎಂದು ಸೇರಿಸಬೇಕು ಈಗಿರುವ ವಿಭಾಗ 3 ಮತ್ತು ೪ ನ್ನು ವಿಭಾಗ 4 ಮತ್ತು 5 ಎಂದು ಬದಲಿಸುವುದು.

"(3) ಕೇಂದ್ರೀಯ ನಿಯಂತ್ರಣ ಆಯೋಗದ ನಿರ್ಣಯ ಅಂತಿಮ ಹಾಗೂ ಅದಕ್ಕೆ ಬದ್ಧರಾಗಿರಬೇಕು.

14ನೇ ಮಹಾಧಿವೇಶನ ಕೇಂದ್ರೀಯ ನಿಯಂತ್ರಣ ಆಯೋಗವನ್ನು ಮಹಾಧಿವೇಶನ ಆರಿಸುವ ಸ್ವತಂತ್ರ ಚುನಾಯಿತ ಸಂಸ್ಥೆಯಾಗಿ ಮಾಡಿತು.

ಆದ್ದರಿಂದ ಅದರ ನಿರ್ಣಯ ಅಂತಿಮ ಹಾಗೂ ಎಲ್ಲರೂ ಅದಕ್ಕೆ ಬದ್ಧರಾಗಿರಬೇಕು. ಈ ತಿದ್ದುಪಡಿ ಈ ಬಗ್ಗೆ ಸ್ಪಷ್ಟನೆ ನೀಡಲಿಕ್ಕಾಗಿ.

5. ಕಲಮು XIXಕ್ಕೆ ತಿದ್ದುಪಡಿ

ವಿಭಾಗ 7ರ ಜಾಗದಲ್ಲಿ ಈ ಕೆಳಗಿನದು ಇರಬೇಕು.

"ಪಕ್ಷದಲ್ಲಿ ಹೊಂದಿರುವ ಹುದ್ದೆಯಿಂದ ತೆಗೆದು ಹಾಕಿದ್ದು ಪಕ್ಷದ ಪೂರ್ಣ ಸದಸ್ಯತ್ವದಿಂದ ಅಮಾನತು (ತನಿಖೆ ನಡೆಯುವವರೆಗೆ ಅಮಾನತು ಆಗಿರುವುದನ್ನು ಹೊರತುಪಡಿಸಿ), ಪಕ್ಷದಿಂದ ಉಚ್ಚಾಟನೆಗೆ ಸಂಬಂಧಪಟ್ಟ ಯಾವುದೇ ಶಿಸ್ತು ಕ್ರಮ ತದನಂತರಹದ ಮೇಲಿನ ಸಮಿತಿ ದೃಢಪಡಿಸುವವರೆಗೆ ಜ್ಯಾರಿಗೆ ಬರುವುದಿಲ್ಲ, ಉಚ್ಚಾಟನೆಯ ಸಂದರ್ಭದಲ್ಲಿ ಶಿಕ್ಷೆಗೊಳಗಾದ ಪಕ್ಷದ ಸದಸ್ಯನನ್ನು ದೃಢೀಕರಣ ಬರುವವರೆಗೆ ಎಲ್ಲಾ ಪಕ್ಷದ ಚಟುವಟಿಕೆಗಳಿಂದ ತೆಗೆಯುವುದು. ತದನಂತರದ ಮೇಲಿನ ಸಮಿತಿ ದೃಢಪಡಿಸುವವರೆಗೆ ಉಚ್ಚಾಟಿತ ಸದಸ್ಯ ಪಕ್ಷದಿಂದ ಅಮಾನತ್ತಿನಲ್ಲಿರುತ್ತಾನೆ. ಮೇಲಿನ ಸಮಿತಿ ಆರು ತಿಂಗಳೊಳಗೆ ತನ್ನ ನಿರ್ಣಯವನ್ನು ತಿಳಿಸಬೇಕು."

ಮನಬಂದಂತೆ ಪಕ್ಷದಲ್ಲಿ ಹೊಂದಿದ್ದ ಹುದ್ದೆಯಿಂದ ತೆಗೆದು ಹಾಕುವುದು, ಪೂರ್ಣ ಸದಸ್ಯತ್ವದಿಂದ ಅಮಾನತು ಇವುಗಳಿಂದ ಪಕ್ಷದ ಸದಸ್ಯರ ಹಕ್ಕುಗಳ ರಕ್ಷಣೆಗಾಗಿ ಈ ತಿದ್ದುಪಡಿಯ ಪ್ರಸ್ತಾವ ಇಡಲಾಗಿದೆ. ಸದ್ಯಕ್ಕೆ ಪಕ್ಷದ ಸದಸ್ಯ ಉಚ್ಚಾಟಿತನಾದಾಗ ಮಾತ್ರ ಮೇಲಿನ ಸಮಿತಿಯ ದೃಢೀಕರಣ ಸಾಕು ಎಂದಿದೆ.

6. ಕಲಮು XIX ಕ್ಕೆ ತಿದ್ದುಪಡಿ

ವಿಭಾಗ 10ರ ನಂತರ ಈ ಕೆಳಗಿನದನ್ನು ಸೇರಿಸಬೇಕು.

"ಈ ಒಟ್ಟಾರೆ ಅಮಾನತು ಹಾಗೂ ಪಕ್ಷದ ಎಲ್ಲಾ ಜವಾಬ್ದಾರಿ ಸ್ಥಾನಗಳಿಂದ ತೆಗೆದು ಹಾಕುವ ಕ್ರಮವನ್ನು ಮೂರು ತಿಂಗಳುಗಳಿಗಿಂತ ಹೆಚ್ಚಿನ ಅವಧಿಗೆ ವಿಸ್ತರಿಸುವಂತಿಲ್ಲ"

ಪ್ರಸ್ತುತ ತನಿಖೆಯಾಗುವವರೆಗೆ ಅಮಾನತಿಗೆ ಸಮಯ ಮಿತಿ ಗೊತ್ತು ಪಡಿಸಿಲ್ಲ, ಇದಕ್ಕಾಗಿ ಈ ತಿದ್ದುಪಡಿ.

ರೇಷನ್ ಕಾರ್ಡಿಗೆ ಒತ್ತಾಯಿಸಿ ಧರಣಿ

ವಿಜಾಪುರ: ವಿಜಾಪುರ ನಗರದ ಬಡ ಜನತೆಗೆ ರೇಷನ್ ಕಾರ್ಡು ವಿತರಣೆ ಮಾಡಲು ಒತ್ತಾಯಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಢರೇಷನ್ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಜನವರಿ 10ರಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಮುಂದೆ ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು.

ಸಮರ್ಪಕವಾಗಿ ಕಾರ್ಡ್ ವಿತರಣೆ ಮಾಡುವಂತೆ ಒತ್ತಾಯಿಸುವುದಲ್ಲದೇ ವಿಳಂಬ ನೀತಿಯನ್ನು ಅನುಸರಿಸಿದ ಸಹಾಯಕ ನಿರ್ದೇಶಕರು ಆಹಾರ ಇಲಾಖೆಯ ಮೇಲೆ ಕ್ರಮ ಕೈಗೊಳ್ಳಲು ಧರಣಿಕಾರರು ಒತ್ತಾಯಿಸಿದರು. ನೂರಾರು ಜನ ಇದ್ದ ಧರಣಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಈ ಧರಣಿಯ ನೇತೃತ್ವವನ್ನು ಜಿಲ್ಲಾಧ್ಯಕ್ಷರಾದ ಮನ್ನುಸಾಬ ಕಲಾದಗಿ ವಹಿಸಿದ್ದರು.

ಎಸ್.ಎಫ್.ಐ ತಾಲೂಕು ಘಟಕ ರಚನೆ

ಶಹಾಪುರ: ಎಸ್‌ಎಫ್‌ಐ ತಾಲೂಕು ಸಮಿತಿಯ ಸಭೆಯನ್ನು ಜನವರಿ 24ರಂದು ಕರೆಯಲಾಗಿತ್ತು. ಈ ಸಭೆಯಲ್ಲಿ ಜಿಲ್ಲಾ ಕಾರ್ಯದರ್ಶಿಯಾದ ಮತ್ತು ತಾಲೂಕು ಸಮಿತಿಯ ಕಾರ್ಯದರ್ಶಿಯಾದ ಜೈಲಾಲ ಟಿ.ವಟಗೇರಿ ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದರು. ಈ ಸಭೆಯಲ್ಲಿ ಎಸ್‌ಎಫ್‌ಐ ಘಟಕವನ್ನು ರಚಿಸಲಾಯಿತು. ಈ ಸಭೆಯಲ್ಲಿ ಸುಮಾರು 130ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಕೆಳಗಿನಂತೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಮಾಳಿಂಗರಾಯ ಇಬ್ರಾಹಿಂಪೂರ, ಉಪಾಧ್ಯಕ್ಷರಾಗಿ ಭೀಮಣ್ಣ ಮಡ್ಡಿಕಾರ ಶಹಾಪುರ,ಮಲ್ಲಣ್ಣ ಕೂಡಿಮನಹಳ್ಳಿ, ಬಾಬು ಸುರುಸಗುಂಡಗಿ, ಬಸವರಾಜ ಅಣಬಿ, ಕಾರ್ಯದರ್ಶಿಯಾಗಿದೇವೇಂದ್ರಪ್ಪ ಟಿ. ಹಂಗಾರಗಾ(ಕೆ), ಸಹಕಾರ್ಯದರ್ಶಿಗಳಾಗಿದೇವೇಂದ್ರಪ್ಪ ಕಕ್ಕಸಗೇರಿ, ಅಂಬಲಯ್ಯ ಶೆಟ್ಟಿಕೇರಿ, ಹನುಮಂತಪ್ಪ ಪಾಟೀಲ, ದೇವೇಂದ್ರಪ್ಪ ಗುಡೂರ ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಆರು ಜನ ಆಯ್ಕೆಗೊಂಡರು.

ಇಲ್ಲಿನ ಜೂನಿಯರ್ ಕಾಲೇಜಿನಲ್ಲಿ ಎಸ್‌ಎಫ್‌ಐ ಘಟಕವನ್ನು ರಚಿಸಲಾಯಿತು. ಈ ಕೆಳಗಿನವರು ಘಟಕದ ಪದಾಧಿಕಾರಿಗಳಾಗಿ ಆಯ್ಕೆಗೊಂಡರು.

ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಬಳಬಟ್ಟಿ, ಉಪಾಧ್ಯಕ್ಷರಾಗಿಬಡೇ ಸಾಬ್ ಕನ್ನ ಕೊಳ್ಳೂರ, ಶ್ರೀರಾಮ ರಾಥೋಡ್, ಶರಣಪ್ಪ ಗಂಗನಾಳ, ಸಂತೋಷ ಮುಳುಜಿ, ಕಾರ್ಯದರ್ಶಿ ಯಮನಪ್ಪಾ ನಾಗೆನಟಗಿ, ಸಹಕಾರ್ಯದರ್ಶಿಯಾಗಿ ಶಿವಪ್ಪ ದೋರನ ಹಳ್ಳಿ, ಅಯ್ಯಣ್ಣ ಜಮಖಂಡಿ ಭೀಮಾರಾಯ ವಾಘಣಗೇರಾ, ದೇವೇಂದ್ರಪ್ಪ ಶೆಟಕೇರಿ ಮತ್ತು 4 ಮಂದಿ ಸದಸ್ಯರ ಸಮಿತಿ ಆಯ್ಕೆಯಾಗಿದೆ.

ಆದೇಶ ಪಾಲಿಸುವಂತೆ ಮನವಿ

ಬಿಜಾಪುರ: ಕ.ರಾ.ರ.ಸಾ.ಸಂಸ್ಥೆಯ ಚಾಲಕ ಮತ್ತು ಕಂಡಕ್ಟರು ಹುದ್ದೆಗೆ 92ಮತ್ತು 93 ರಲ್ಲಿ ನೇಮಕ ಮಾಡಿಕೊಂಡ ನೌಕರರನ್ನು ಸೇವೆಯಿಂದ ವಜಾ ಮಾಡಿರುತ್ತಾರೆ. ಸದರಿ ನೌಕರರು ಒಂದು ವರ್ಷಕ್ಕೂ ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ಇದರ ವಿರುದ್ಧ ನೌಕರರು ನ್ಯಾಯಲದ ಮೋರೆ ಹೋಗಿ ತಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳುವಂತೆ ಮನವಿ ಮಾಡಿದರು. ನ್ಯಾಯಾಲಯವು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ಆದೇಶ ನೀಡಿದೆ. ಆದರೆ ಇವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲ ಪಕ್ಕದ ರಾಯಚೂರು,ಬಳ್ಳಾರಿ, ಬೆಳಗಾವಿಯಲ್ಲಿ ಕೋರ್ಟು ಆದೇಶದಂತೆ ಕೆಲಸಕ್ಕೆ ತೆಗೆದುಕೊಂಡಿರುತ್ತಾರೆ. ಆದ್ದರಿಂದ ಮಾನ್ಯಸಾರಿಗೆ ಮಂತ್ರಿಗಳು ನ್ಯಾಯಲಯದ ಆದೇಶವನ್ನು ಪಾಲಿಸುವಂತೆ ಮಾಡಬೇಕೆಂದು ಡಿವೈಎಫ್‌ಐ ಜಿಲ್ಲಾ ಸಮಿತಿ ಮನವಿ ಮಾಡಿದೆ.

ಯಶಸ್ವಿ ಹೋರಾಟ

ಬೆಂಗಳೂರು: ಸಮರ್ಪಕವಾದ ಜನರೇಟರ್‌ಗಾಗಿ ಆಗ್ರಹಿಸಿ ಎಸ್‌ಎಫ್‌ಐ ಎಪಿಎಸ್ ಸಂಜೆ ಕಾಲೇಜು ಘಟಕ ನಡೆಸಿದ ಹೋರಾಟವು ಯಶಸ್ವಿಯಾಗಿದೆ. ಸಂಜೆ ಕಾಲೇಜ್‌ನಲ್ಲಿ ಜನರೇಟರ್ ಇಲ್ಲದೆ ತೀರ ತೊಂದರೆಯಾಗಿತ್ತು. ಈ ಹಿಂದೆ ಆಡಳಿತ ಮಂಡಲಿಗೆ ಮನವಿ ಪತ್ರ ನೀಡಿದಾಗಿಯೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಡಿಸಂಬರ್ ತಿಂಗಳಲ್ಲಿ ಕಾಲೇಜ್ ಘಟಕವು ಸಮರ್ಪಕವಾದ ಜನರೇಟರ್ ಬರದೆ ಇದ್ದ ಪಕ್ಷದಲ್ಲಿ ಜನವರಿ ೧ರಿಂದ ಅನಿರ್ಧಿಷ್ಟಕಾಲ ತರಗತಿಯನ್ನು ಬಹಿಷ್ಕರಿಸಲು ನಿರ್ಧರಿಸಿತು. ಎಸ್‌ಎಫ್‌ಐ ಘಟಕದ ಬಿಗಿ ನಿಲುವಿಗೆ ಮಣಿದು ಜನರೇಟರ್ ವ್ಯವಸ್ಥೆಯನ್ನು ಮಾಡಿದೆ. ಇದು ವಿದ್ಯಾರ್ಥಿಗಳ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ಚಂದ್ರಶೇಖರ್ ಮತ್ತು ಸುರೇಶ್ ತಿಳಿಸಿದ್ದಾರೆ.

ಬೆಂಗಳೂರು ಜಿಲ್ಲೆ 'ಗಣರಾಜ್ಯೋತ್ಸವ ಆಚರಣೆ'

ಪರಪ್ಪನಹಳ್ಳಿ: ಇಲ್ಲಿನ ಡಿವೈಎಫ್‌ಐ ಘಟಕವು ಜಿಲ್ಲಾ ಕಾರ್ಯದರ್ಶಿ ಮಂಡಲಿ ಸದಸ್ಯರಾದ ಕಾಂ. ಲಕ್ಷ್ಮಣ್ ಇವರ ಸಮ್ಮುಖದಲ್ಲಿ ಗಣರಾಜ್ಯೋತ್ಸವವನ್ನು ಆಚರಿಸಿಲಾಯಿತು.

ಗೋಪಾಲಪುರ: ಡಿವೈಎಫ್‌ಐ ಗೋಪಾಲಪುರ ಘಟಕವು ಕಾಂ. ರವಿಚಂದ್ರನ್ ಸಮ್ಮುಖದಲ್ಲಿ ಧ್ವಜಾರೋಹಣ ನಡೆಸಿ ನಂತರ ಸಿಹಿ ಹಂಚಲಾಯಿತು. ಕಾರ್ಯದರ್ಶಿ ಮಹೇಂದ್ರನ್ ವಂದಿಸಿದರು.

ಸ್ವತಂತ್ರನಗರ: ಡಿವೈಎಫ್‌ಐ ಘಟಕವು ರಾಜ್ಯೋತ್ಸವದ ಅಂಗವಾಗಿ ಬಾವಿ ಸ್ವಚ್ಛತಾ ಕಾರ್ಯಕ್ರಮ ನಡಸಿತು. ಇದರಲ್ಲಿ ನೂರಾರು ಜನ ಭಾಗವಹಿಸಿದ್ದರು. ಸಮಾರಂಭದಲ್ಲಿ ವಿ.ಜಿ.ಕೆ.ನಾಯರ್ (ರಾಜ್ಯ ಕಾರ್ಮಿಕ ಮುಖಂಡರು) ಮತ್ತು ಕೋದಂಡರಾಮ್ ಮಾತನಾಡಿದರು.